
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 48 ನವೆಂಬರ್ 28, 2004 ಬೆಲೆ ರೂ. 3.00



ಅರಾಫತ್ ಇನ್ನಿಲ್ಲ
ಪ್ಯಾಲೆಸ್ಟೈನ್ ಸ್ವಾತಂತ್ರ್ಯದ ಕನಸಿಗೆ ಸಾವಿಲ್ಲ !




ಉದ್ಯೋಗದ ಹಕ್ಕಿಗಾಗಿ ಒಂದು ಮಸೂದೆ



ಜನತಾದಳ(ಎಸ್) ಎದುರಿಸಬೇಕಾದ್ದು ಯಾರನ್ನು?

- ಕಂಚಿಶ್ರೀ, ಮುತಾಲಿಕ್ ಬಂಧನಕ್ಕೆ ಅರ್ಥಹೀನ ವಿರೋಧ
- ಉತ್ತರ ಕನ್ನಡ : ಕೋಮುವಾದಿಗಳ ವಿಷಜಾಲ
- ಶೆಟ್ಟರ್ ಬಿಜೆಪಿ ಅಧ್ಯಕ್ಷ
- ನಾಝಿಜಂ : ಬೇತಾಳದ ಬಾಯಲ್ಲಿ ಭಗವದ್ಗೀತೆ !



ಎಡ ಮತ್ತು ಪರಿಸರ ಚಳುವಳಿ

ಉತ್ತರ ಕನ್ನಡ ಜಿಲ್ಲೆಯನ್ನು ಪೂರ್ತಿಯಾಗಿ ಕೋಮುದ್ವೇಷದ ಕುಲುಮೆಯನ್ನಾಗಿಸಲು ಸಂಘ ಪರಿವಾರದ ವಿಧ್ವಂಸಕ ಪಡೆಗಳು ಕಾರ್ಯನಿರತವಾಗಿದೆ. ಇಲ್ಲದ - ಸಲ್ಲದ ವಿವಾದಗಳನ್ನೆಬ್ಬಿಸಿ ರಣರಂಗವಾಗಿಸಿ, ಜನ ಜೀವನಕ್ಕೆ ಕಂಟಕವಾಗುತ್ತಿದೆ. ಈ ಅಟ್ಟಹಾಸವನ್ನು ಮಟ್ಟಹಾಕಲು ಸಾಧ್ಯಗಳಿವೆಯೇ? ಎಡವುತ್ತಿರುವ ಸರ್ಕಾರಿ ಯಂತ್ರ, ಕ್ರಿಯಾಶೀಲಗೊಳ್ಳಲು ನಿರಾಕರಿಸುತ್ತಿರುವ ರಾಜಕೀಯ ಪಕ್ಷಗಳು, ಅಧಿಕಾರರೂಢರ ಸಂದರ್ಭಸಾಧಕತನ, ಮುಂತಾಗಿ ತೆರೆದಿಡುವ ಲೇಖನವಿಲ್ಲಿ.

ಕೋಮುವಾದಿಗಳ ವಿಷಜಾಲ

ಯಾವಾಗಲೂ ಪ್ರವಾಹ ಏರುವುದೇ ಹೀಗೆ. ಅಲ್ಲೊಂದು ಮಳೆ, ಇಲ್ಲೊಂದು ಮಳೆ ಜೋರಾಗಿ ಬಂದು, ಅಲ್ಲಿ ಇಲ್ಲಿ ಹೊಯ್ದು ಮಳೆಯ ನೀರು ಒಂದೇ ಹಳ್ಳಕ್ಕೆ ಸೇರಿ, ಹಳ್ಳ ಹೊಳೆಯಾಗಿ ಹೊಳೆಯ ನೀರು ಸಾವಕಾಶ ಏರಿ ಏರಿ ನೆರೆ ಪ್ರದೇಶವಾಗಿ ಬಿಡುತ್ತದೆ. ಈಗ ಮಳೆ ಕಡಿಮೆ ಆಗಬಹುದು, ಇಂದು ನೀರು ಏರಲಿಕ್ಕಿಲ್ಲ ಎಂದೇ ಜನ ಅಂದುಕೊಳ್ಳುತ್ತಾರೆ. ಹೊಳೆಯನ್ನು ನೋಡುತ್ತಿದ್ದರೆ ಸಾವಕಾಶ ನೀರು ಏರುವುದು ತಿಳಿಯುವುದೇ ಇಲ್ಲ. ಮನೆ, ಊರು, ಕೇರಿ ಸಾವಕಾಶ ದ್ವೀಪವಾಗುತ್ತದೆ. ಮುಳುಗಲು ಪ್ರಾರಂಭವಾಗುತ್ತದೆ. ನಮ್ಮನ್ನು ರಕ್ಷಿಸುವವರು ಯಾರೂ ಇಲ್ಲದಿದ್ದಾಗ ನಾವು ಮೊದಲೇ



ಎಚ್ಚೆತ್ತುಕೊಳ್ಳಬೇಕಾಗಿತ್ತು ಎಂದುಕೊಳ್ಳುತ್ತಾರೆ. ಆದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಇದು ಕೇವಲ ನೆರೆಹಾವಳಿಯ ಕತೆಯಲ್ಲ; ಕೋಮುವಾದದ ಅಪಾಯ ಕೂಡ. ಉತ್ತರಕನ್ನಡ ಜಿಲ್ಲೆ ಇಂತಹ ಕೋಮುವಾದಿ ನೆರೆಹಾವಳಿಗೆ ಸಿಕ್ಕು ನರಳುತ್ತಿದೆ. ಹಿಂದುತ್ವದ ನೆರೆ ಇಡೀ ಜಿಲ್ಲೆಯನ್ನು ವ್ಯಾಪಿಸಿಕೊಳ್ಳುವ ಅಪಾಯಕಾರಿ ಮುನ್ಸೂಚನೆಯನ್ನು ಇಲ್ಲಿ ನಡೆಯುತ್ತಿರುವ ಇತ್ತೀಚಿನ ಘಟನೆಗಳು ಕೊಡುತ್ತವೆ. ಕಳೆದ ಚುನಾವಣೆಯಲ್ಲಿ ಜಿಲ್ಲೆಯ ಲೋಕಸಭಾ ಕ್ಷೇತ್ರವನ್ನು, 4 ವಿಧಾನಸಭಾ ಕ್ಷೇತ್ರವನ್ನು ಗೆದ್ದ ಹುಮ್ಮಸ್ಸಿನಲ್ಲಿರುವ ಇವರು ಜನ ಮತಕೊಟ್ಟಿದ್ದೇ ಅಲ್ಪಸಂಖ್ಯಾತರ ವಿರುದ್ಧ ಕತ್ತಿಮಸೆಯಲು ಎಂದು ತಿಳಿದಂತಿದೆ ಇವರ ನಡವಳಿಕೆ. ಜಿಲ್ಲೆಯಾದ್ಯಂತ ಸ್ಥಾಪನೆಗೊಳ್ಳುತ್ತಿರುವ ಭಜರಂಗದಳದ ಮೂಲಕ ನಿರುದ್ಯೋಗಿ ಜನರನ್ನು ತಮ್ಮ ವಿಧ್ವಂಸಕ ಅಜೆಂಡಾಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಜಿಲ್ಲೆಯ ಹಳ್ಳಿ-ಹಳ್ಳಿಗಳಲ್ಲಿಯೂ ತನ್ನ ಕಾರ್ಯಕರ್ತರನ್ನು ಹೊಂದಿರುವ ಕಾಂಗ್ರೆಸ್‌ನ ಬೌದ್ಧಿಕ ದಿವಾಳಿಕೋರತನ, ಸಂದರ್ಭಸಾದಕನತಗಳು ಭಜರಂಗಿಗಳನ್ನು ಇನ್ನಷ್ಟು ಬೆಳೆಸುತ್ತಿವೆ. ಅಧಿಕಾರ ಇದ್ದಾಗ ಭ್ರಷ್ಟಾಚಾರ, ಲಂಚಕೋರತನದಲ್ಲಿ ತಲ್ಲೀನ ಆಗಿ ಅಭಿವೃದ್ಧಿ ಕಾರ್ಯಗಳನ್ನು ನಿರ್ಲಕ್ಷಿಸಿದ ಈ ಕಾಂಗ್ರೆಸ್, ತನ್ನ ಬಣ್ಣ ಬಯಲಾಗಬಾರದೆಂದು ಇವರ ಕೋಮುವಾದಿ ಅಜೆಂಡಾ ಬಗ್ಗೆ ತನ್ನ ಕಾರ್ಯಕರ್ತರಿಗೆ ತಿಳಿವಳಿಕೆ ಕೊಡುವುದಾಗಲಿ, ಅದರ ವಿರುದ್ಧ ಒಂದು ತಂಡವಾಗಿ ಕೆಲಸ ಮಾಡುವುದಾಗಲಿ ಮಾಡಲಿಲ್ಲ. ಹೇಗೂ ಜನ ಚುನಾವಣೆಯಲ್ಲಿ ತನಗೆ ಮತ ಹಾಕುತ್ತಾರೆಂದು, ಹೆಚ್ಚೆಂದರೆ ಒಂದಿಷ್ಟು ಹಣ, ಹೆಂಡ ಚೆಲ್ಲಬೇಕಾಗುತ್ತದೆಂದು ಎಣಿಸಿತ್ತು. ಆದರೆ ಬಿಜೆಪಿ ಕಾಂಗ್ರೆಗೆ ಇದರಲ್ಲಿಯೂ ತಿರುಗೇಟು ನೀಡಿತ್ತು. 'ಸೆಕ್ಯುಲರ್' ಶಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಕೋಮುವಾದಿಗಳನ್ನು ಮೆದುಧೋರಣೆಯಿಂದ ಕಾಣುವ ಕಾಂಗ್ರೆ ತನ್ನ ಅದಃಪತನದೊಂದಿಗೆ ಕೋಮುವಾದಿ ಶಕ್ತಿಗಳ ವಿಸ್ತಾರಕ್ಕೆ ಕಾರಣವಾಯಿತು.

ಈಗಲೂ ಕೂಡ ಭಜರಂಗದಳ ಜಿಲ್ಲೆಯಲ್ಲಿ ಮಂಗಾಟ ನಡೆಸುತ್ತಿರುವಾಗ ಕಾಂಗ್ರೆ ನಾಯಕರು ಬಾಯ್ಮುಚ್ಚಿ ಕುಳಿತಿದ್ದಾರೆ. ಇಂತವರನ್ನು ಎದುರಿಸುವ ಶಕ್ತಿ ಇರುವ ಆರ್.ವಿ.ದೇಶಪಾಂಡೆ ಮಂತ್ರಿಯಾಗುವ ಲಾಬಿಯಲ್ಲಿ ತೊಡಗಿದ್ದಾರೆ. ಕೋಮುವಾದಿಗಳು ಜಿಲ್ಲೆಗೆ ಅಪಾಯಕಾರಿಯಲ್ಲ, ತನಗೆ ಮಂತ್ರಿಸ್ಥಾನ ದಕ್ಕದಿರುವುದೇ ಈ ಜಿಲ್ಲೆಗೆ ಅಪಾಯ ಎಂದು ಮಾಜಿ ಸಚಿವ ತಿಳಿದಂತಿದೆ.

ಹಾಗೆ ನೋಡಿದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸಬೇಕಾದ ನೂರಾರು ಕಾರಣಗಳಿವೆ. ಭೂಮಿಯ ಪ್ರಶ್ನೆ, ನಿರಾಶ್ರಿತರ ಪ್ರಶ್ನೆ, ಬಿಪಿಎಲ್ ಪ್ರಶ್ನೆ, ಮಹಿಳಾ ದೌರ್ಜನ್ಯದ ಪ್ರಶ್ನೆ, ಭ್ರಷ್ಟಾಚಾರದ ಪ್ರಶ್ನೆ, ಅನಿಲ ದರ ಏರಿಕೆ, ಹೀಗೆ ನೂರಾರು ಪಟ್ಟಿ ಮಾಡಬಹುದು. ಆದರೆ ಸಂಘ ಪರಿವಾರಕ್ಕೆ ಇದ್ಯಾವುದೂ ಹೋರಾಟದ ವಿಷಯವೇ ಅಲ್ಲ. ಅವರ ಹೋರಟ ಏನಿದ್ದರೂ ಮುಸ್ಲಿಮರ ಖಬರಸ್ಥಾನದ ವಿರುದ್ಧ, ಕ್ರಿಶ್ಚಿಯನ್‌ರ ಪ್ರಾರ್ಥನಾ ಸ್ಥಳದ ವಿರುದ್ಧ..... ಇಂತಹ ಕೆಲಸಕ್ಕೆ ಬಾರದ, ಜನಜೀವನವನ್ನು, ಸೌಹಾರ್ದತೆಯನ್ನು ಕೆಡಿಸುವ ವಿಷಯದ ಬಗ್ಗೆಯೇ.

ಹುಚ್ಚರಾದವರು ಯಾರು?

ಇತ್ತೀಚೆಗೆ ಅವರು ಕಾರವಾರದ ಅಂಜುದೀವ್ ದ್ವೀಪದ ಕುರಿತು ನಡೆಸಿದ ದಾಂಧಲೆಯ ಬಗ್ಗೆ ಈ ಹಿಂದೆ ಬರೆಯಲಾಗಿದೆ. ಈ ಪ್ರಕರಣ ಹಸಿಯಾಗಿರುವಾಗಲೇ ಸೀಬರ್ಡ್‌ನವರ ನಿರ್ಬಂಧಿತ ಪ್ರದೇಶದಲ್ಲಿ ಕ್ರಿಶ್ಚಿಯನ್‌ರಿಗೆ ಸಮಾಧಿ ಸ್ಥಳದಲ್ಲಿ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ಮಾಡಿಕೊಟ್ಟರು ಎಂದು ಹೋರಾಟ ನಡೆಸುವ ಬೆದರಿಕೆ ಹಾಕಿದರು. ಕಳೆದ ಕೆಲವು ತಿಂಗಳುಗಳ ಹಿಂದೆ ಭಟ್ಕಳದಲ್ಲಿ ಒಂದು ಮೂರ್ತಿಯನ್ನು ಧ್ವಂಸ ಮಾಡಿದ್ದಾರೆಂದು ಗಲಾಟೆ ನಡೆಯಿತು. ಅದು ಕೋಮುಗಲಭೆಯ ಸ್ವರೂಪವನ್ನು ಪಡೆಯಿತು. ಈ ಕುರಿತು ಮೂರ್ತಿ ಧ್ವಂಸ ಮಾಡಿದವರನ್ನು ಬಂಧಿಸಬೇಕೆಂದೂ, ಪೊಲೀಸರೂ ಮುಸ್ಲಿಂರೊಂದಿಗೆ ಶಾಮೀಲಾಗಿದ್ದರೆಂದು (ಇದು ಅವರ ಮಾಮೂಲು ಭಾಷಣ) ಭಟ್ಕಳದಲ್ಲಿ ಧರಣಿ (ಪ್ರತಿ ತಾಲೂಕಿನಿಂದ ಪತ್ರಿಕಾ ಹೇಳಿಕೆಗಳು ಬಂದವು. ಆದರೆ ಕೊನೆಗೆ ಮೂರ್ತಿ ಧ್ವಂಸ ಮಾಡಿದವರನ್ನು ಪೊಲಿಸರು ಹಿಡಿದು ಜೈಲಿಗೆ ತಳ್ಳಿದರು. ಆದರೆ ಆತ ಹುಚ್ಚನಾಗಿದ್ದ!



ಅದರಲ್ಲೂ ಆತ ಇವರೇ ಹೇಳುವ ಹಿಂದೂ ಧರ್ಮದವನಾಗಿದ್ದ. ಕೋಮುವಾದಿಗಳಿಗೆ ತುಂಬಾ ನಿರಾಸೆಯಾಯಿತು; ಆದರೆ ಜನ ಮಾತನಾಡಿಕೊಳ್ಳುತ್ತಿದ್ದರು; ಹುಚ್ಚರಾದವರು ಯಾರು?

ಇತ್ತೀಚೆಗೆ ಭಟ್ಕಳದಲ್ಲಿ ರಂಜಾನ್ ಮಳಿಗೆ ವಿತರಣೆಯ ಸಂದರ್ಭದಲ್ಲಿ ನಡೆಯಿತೆನ್ನಲಾದ ಘಟನೆಯನ್ನು ಕೋಮುಗಲಭೆಯಾಗಿ ಪರಿವರ್ತಿಸುವ ಕೆಲಸ ನಡೆಯಿತು. ಇಂತಹ ಸಂದರ್ಭದಲ್ಲೆಲ್ಲ ಹಿಂದೂ ಮುಸ್ಲಿಂ ಕೋಮುವಾದಿಗಳು ಒಂದೇ ರೀತಿಯಲ್ಲಿ ವರ್ತಿಸುತ್ತಿರುವುದನ್ನು ನೋಡಬಹುದು.

ಇತ್ತೀಚೆಗೆ ಜಿಲ್ಲೆಯಾದ್ಯಂತ ಗೋರಕ್ಷಣೆಯ ಹೆಸರಿನಲ್ಲಿ ಭಜರಂಗದಳಗಳು ರಸ್ತೆಯ ಮೇಲೆ ಓಡಾಡುವ ವಾಹನ ನಿಲ್ಲಿಸಿ ಪರಿಶೀಲನೆ ನಡೆಸುತ್ತಿದ್ದಾರೆ. 'ಗೋಮಾತೆ' ರಕ್ಷಣೆ ಎನ್ನುವ ವೈಭವೀಕರಣ, ಇಂತಹ ಮಾತೆಯರು ರಸ್ತೆಯಲ್ಲಿ ಅಪಘಾತವಾದರೆ ಕೇಳುವವರಿಲ್ಲ. ಬೀದಿ ಬದಿಯಲ್ಲಿ ತಿನ್ನಲು ಏನೂ ಇಲ್ಲದೆ ಬಿದ್ದಿರುವ ಮಾತೆಯರಿಗೆ ಲೆಕ್ಕವಿಲ್ಲ. ಇನ್ನೊಂದು ಕಡೆ ನಿಜವಾದ ಮಾತೆಯರು ಊಟಕ್ಕೆ ಅನ್ನವಿಲ್ಲದೆ ಬಡತನದ ಸುಳಿಯಲ್ಲಿ ಬೆಂದು ಮೈ ಮಾರಿ ಜೀವಿಸುವ ಸ್ಥಿತಿ, ಮಕ್ಕಳ ಗೋಳು ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗಲೂ ಇವರಿಗೆ ಇವರ ಪರಿವೆ ಇಲ್ಲ. ಇದಕ್ಕೆ ಪ್ರತಿಕ್ರಿಯೆ ಇಲ್ಲ. ಹೀಗೆ ದನಗಳ ರಕ್ಷಣೆಯ ಹೆಸರಿನಲ್ಲಿ ಕೋಮುವಾದಿಗಳು ಪೊಲೀಸ್ ಕೆಲಸ ನಿರ್ವಹಿಸುತ್ತಿದ್ದರೂ, ಪೊಲೀಸರು ಕೈ ಕಟ್ಟಿ ಕುಳಿತಿದ್ದಾರೆ. ಲಾರಿ ಲಾರಿ ಅಕ್ಕಿ ಚೀಲ, ಇತ್ಯಾದಿ ಪಡಿತರ ಚೀಟಿಗಾಗಿ ಬಂದ ಧಾನ್ಯಗಳು, ಕೂಲಿಗಾಗಿ ಕಾಳು ಯೋಜನೆಗೆ ಬಂದ ಧಾನ್ಯಗಳು ಕಳ್ಳಸಾಗಣೆ ಆಗುತ್ತಿದ್ದರೂ, ಅರಣ್ಯದಿಂದ ಬೆಲೆ ಬಾಳುವ ಅಕ್ರಮ ಕಟ್ಟಿಗೆಗಳು ಲಾರಿ ತುಂಬಿ ಕಳ್ಳ ಸಾಗಾಣಿಕೆ ಆಗುತ್ತಿದ್ದರೂ ಬಾಯ್ಮುಚ್ಚಿ ಕುಳಿತಿರುವ ಇವರು ಆಕಳು ಮುಸ್ಲಿಂರ ಆಹಾರ ಎನ್ನುವ ಕಾರಣಕ್ಕಾಗಿ ಮಾತ್ರ ಸಾಗಾಣಿಕೆ ತಡೆಯುತ್ತಿದ್ದಾರೆ. ಮಾಂಸಾಹಾರವೂ, ಸಸ್ಯಾಹಾರದಂತೆ ಒಂದು ಆಹಾರ ಪದ್ಧತಿ ಎಂಬುದು ಇವರಿಗೆ ತಿಳಿಯದೆ.

ಚಂದಾವರದಲ್ಲಿ ಖಬರಸ್ಥಾನ ಗಲಾಟೆ : ಹೊನ್ನಾವರತಾಲೂಕಿನ ಚಂದಾವರದಲ್ಲಿ ಜಮಾತುಲ್ಲಾ ಮುಸ್ಲಿಂರಿಂದ ಸುಮಾರು 5 ಎಕ್ರೆ ಭೂಮಿಯನ್ನು ಖಬರಸ್ಥಾನಕ್ಕಾಗಿ ಅತಿಕ್ರಮಿಸಿಕೊಂಡಿತ್ತು. ಸಂ.ನಂ.65/61ನೇ ಸ್ಥಳದಲ್ಲಿ 5 ಎಕ್ರೆ ಭೂಮಿಯನ್ನು ಮಂಜೂರಿ ಮಾಡಬೇಕೆಂದು 1981ರಲ್ಲಿ ಮುಸ್ಲಿಂರು ಮನವಿ ಸಲ್ಲಿಸಿದ್ದರು. ಪಂಚಾಯತ್ ಇದಕ್ಕೆ ಅನುಮೋದಿಸಿತ್ತು. 1985 ರಲ್ಲಿ ತನಿಖೆಗೆ ಬಂದು ಜಿಲ್ಲಾಧಿಕಾರಿಗಳು 3 ಎಕ್ರೆ ಸ್ಥಳವನ್ನು ಶಿಫಾರಸು ಮಾಡಿರುವುದಾಗಿ ತಿಳಿದುಬಂದಿದೆ. 1991ರಲ್ಲಿ ಮತ್ತೆ ಮನವಿ ಮಾಡಿಕೊಂಡಾಗ 5 ಎಕ್ರೆ ಭೂಮಿಯನ್ನು ಶಿಫಾರಸ್ಸು ಮಾಡಿ



2001 ರಲ್ಲಿ ಅರಣ್ಯ ಇಲಾಖೆಯಿಂದ ಡಿಫಾರೆಸ್ಟ್‌ವೆಂಟ್‌ಗೆ ಹೋಗಿರುವುದಾಗಿ ತಿಳಿದುಬಂದಿದೆ. ದೇವೇಗೌಡರು ಹಿಂದೆ ಲೋಕೋಪಯೋಗಿ ಸಚಿವರಾಗಿದ್ದಾಗಿನಿಂದ ಈ ಭೂಮಿಯ ಬಗ್ಗೆ ಬೇಡಿಕೆ ಇದ್ದು, ಅವರಿಗೆ ಕಾನೂನು ಪ್ರಕಾರ ಈ ಸ್ಥಳ ಕೊಡುವಂತೆ ಕ್ರಮವಹಿಸಬೇಕಾಗಿ ಆದೇಶಿಸಿದ್ದನ್ನು ಅಲ್ಲಿಯ ಜನ ಹೇಳುತ್ತಾರೆ. ಇಡೀ ಇಲ್ಲೆಯಲ್ಲಿ ಸಾವಿರಾರು ಎಕ್ರೆ ಭೂಮಿ ಅತಿಕ್ರಮಣಗೊಂಡಿರುವಾಗ 2-3 ಎಕ್ರೆ ಭೂಮಿ ಕೊಡುವುದು ಈ ಜಿಲ್ಲೆಗೆ ಹಾನಿಯಾಗುವ ವಿಷಯುವಲ್ಲ. ಅವರಲ್ಲಿ ಈ ಗಲಾಟೆ ಪ್ರಾರಂಭವಾದಾಗ ಶಾಂತಿ ಕಾಯ್ದುಕೊಳ್ಳುವ ಕಾರಣದಿಂದ, ಅನೇಕ ವರ್ಷಗಳಿಂದ ಚಂದಾವರದಲ್ಲಿ ಇರುವ ಹಿಂದು-ಕ್ರಿಶ್ಚಿಯನ್-ಮುಸ್ಲಿಂ ನಡುವಿನ ಆಹ್ಲಾದಕರ ವಾತಾವರಣವನ್ನು ಕಾಯ್ದುಕೊಳ್ಳುವ ಮಹತ್ವದ ಉದ್ದೇಶದಿಂದ 3 ಸಮಾಜದ ಮುಖಂಡರು ಸೇರಿ 5 ಎಕ್ರೆ ಅತಿಕ್ರಮಣ ಭೂಮಿಯನ್ನು ಹಂಚಿಕೊಂಡರು. ಹಿಂದೂ-ಮುಸ್ಲಿಂರು ತಲಾ ಎರಡು ಎಕ್ರೆ ಕ್ರಿಶ್ಚಿಯನ್‌ರು 1 ಎಕ್ರೆ ಹಂಚಿಕೊಳ್ಳಲು ಅಧಿಕಾರಿಗಳ ಎದುರೇ ಒಪ್ಪಂದವಾಗಿ ಊರಿನ ಪ್ರಮುಖರು ಸಹ ಮಾಡಿ ಆದರ್ಶ ಮೆರೆದರು.

ಪುಟ 10 ಕ್ಕೆ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 21-28, 2004**
  ಎಕೆಜಿ ಮತ್ತು ಬಿಟಿಆರ್ ಜನ್ಮ ಶತಾಬ್ದಿ ಆಚರಣೆ ಅಂಗವಾಗಿ ಸೈದ್ಧಾಂತಿಕ ಶಿಕ್ಷಣ ಸಪ್ತಾಹ ಸಿಪಿಐ(ಎಂ) ವತಿಯಿಂದ
- **ನವೆಂಬರ್ 25, 2004**
  ಸಮುದಾಯ, ಪ್ರಮೋದ್ ಶಿಗ್ಗಾಂವ್ ಅವರ ನಿರ್ದೇಶನದಲ್ಲಿ ಡಾ. ಕೆ.ವೈ.ನಾರಾಯಣಸ್ವಾಮಿ ಅವರ 'ಪಂಪ ಭಾರತ' ಹೊಸ ನಾಟಕ. ಸಂಜೆ 6.30 ಕ್ಕೆ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
- **ಡಿಸೆಂಬರ್ 2, 2004**
  ಸಿಇಟಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ ಎಸ್‌ಎಫ್‌ಐನಿಂದ ಸಂಸತ್ ಚಲೋ
- **ಡಿಸೆಂಬರ್ 7, 2004**
  ಮುಷ್ಕರದ ಹಕ್ಕಿಗಾಗಿ ಒತ್ತಾಯಿಸಿ 5 ಕೋಟಿ ಸಹಿಗಳ ಸಾಮೂಹಿಕ ಮನವಿ ಸಲ್ಲಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಪಾರ್ಲಿಮೆಂಟ್ ಚಲೋ.

ಜೆಡಿ(ಎಸ್) ಎದುರಿಸಬೇಕಾದ್ದು ಯಾರನ್ನು?

ಮಂತ್ರಿಮಂಡಲದ ವಿಸ್ತರಣೆಯ ಪ್ರಶ್ನೆ ಯಾವುದೇ ಅಡೆತಡೆ ಇಲ್ಲದೇ ಕುದುರೆಯ ಮುಂದೆ ಕಟ್ಟಿದ ಹುಲ್ಲಿನಂತೆ ಓಡುತ್ತಲೇ ಇದೆ. ಇತ್ತ ಮೈತ್ರಿಕೂಟದ ಭಾಗಿಧಾರ ಜಾತ್ಯಾತೀತ ಜನತಾದಳ ಪದಾಧಿಕಾರಿಗಳ ಪಟ್ಟಿಯನ್ನು ವಿಸ್ತರಿಸಿದೆ. ಮಾಜಿ ಪ್ರಧಾನಿ ದೇವೇಗೌಡರ ಕಿರಿಯ ಪುತ್ರ ಶಾಸಕ ಹೆಚ್.ಡಿ.ಕುಮಾರ ಸ್ವಾಮಿಯವರು ಕಾರ್ಯಾಧ್ಯಕ್ಷರಾಗಿ ನೇಮಕ ಗೊಳ್ಳುವುದ ರೊಂದಿಗೆ ಇತರರನ್ನು ಪದಾಧಿಕಾರಿ ಗಳನ್ನಾಗಿ ಸೇರಿಸಿಕೊಳ್ಳಲಾಗಿದೆ. ಪಕ್ಷವನ್ನು ಸಂಘಟನಾತ್ಮಕವಾಗಿ ಬಲಗೊಳಿಸುವುದು. ಅದಕ್ಕಾಗಿ ಯುವ ಮುಖಂಡರಿಗೆ ಹೊಸ, ಹೆಚ್ಚಿನ ಹೊಣೆ ನೀಡುವುದೆ ಮುಖ್ಯ ಉದ್ದೇಶವೆಂದು ಕಾರ್ಯಾಧ್ಯಕ್ಷರು ಹೇಳಿದ್ದಾರೆ. ಈ ನೇಮಕಗಳನ್ನು ಹಲವಾರು ಜನ ಹಲವು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.



ನೇಮಕ- ವಿಸ್ತರಣೆ ಆ ಪಕ್ಷದ ಆಂತರಿಕ ವಿದ್ಯಮಾನಗಳು. ಜನತಾದಳ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವುದು, ಅದಕ್ಕಾಗಿ ಪಕ್ಷ ಸನ್ನದ್ದಗೊಳಿಸುವುದೇ ತಮ್ಮ ಗುರಿ ಎಂದಿದ್ದಾರೆ ಕುಮಾರಸ್ವಾಮಿ. ನಾವು ಗಂಭೀರವಾಗಿ ಆಕ್ಷೇಪಿಸಬೇಕಾದ ಒಂದು ಪ್ರಮುಖ ಸಂಗತಿ ಇದೆ. ಅದೇನೆಂದರೆ ತಾವು ನೀಡಿದ ಸಂದರ್ಶನದಲ್ಲಿ ತಮ್ಮ ಎದುರಾಳಿ ಕಾಗ್ರೆಸ್ ಪಕ್ಷ ಎಂದು, ಎಲ್ಲೂ ಬಿಜೆಪಿಯ ಪ್ರಸ್ತಾಪವೇ ಇಲ್ಲ. ವಾಸ್ತವದಲ್ಲಿ ರಾಜ್ಯದಲ್ಲಿ ಬಿಜೆಪಿ 79 ಶಾಸಕರನ್ನು ಹೊಂದಿರುವುದಲ್ಲದೇ ಇನ್ನೂ ಸುಮಾರು 20 ರಲ್ಲಾದರೂ ಎರಡನೇ ಸ್ಥಾನದಲ್ಲಿದೆ. 18 ಸಂಸತ್ ಸದಸ್ಯರನ್ನು ಹೊಂದಿದೆ. ಅಧಿಕಾರ ಹಿಡಿಯಲು ಅನೇಕ ಹಂಚಿಕೆ ರೂಪಿಸಿಕೊಂಡು ಹೊರಟಿದ್ದು ಆರ್.ಎಸ್.ಎಸ್ ಇದರ ಬೆಂಗಾವಲಿಗೆ ಮೂಲ ನೆಲೆ ಸೃಷ್ಟಿಸಲು ಹೊರಟಿದೆ. ಅಖಿಲ ಭಾರತ ನಾಯಕತ್ವವು ಇದರ ಧನ-ದಂಡ ಬಲ ಹಿಡಿದು ಚನ್ನಾಗಿದೆ. ಅದು ಪಡೆದ ಮತಗಳು ಅದರ ಹೆಚ್ಚಳ ಹಾಗೂ ವಿವಿಧ ಪ್ರದೇಶಗಳಲ್ಲಿ ನೆಲೆಯಾಗುತ್ತಿರುವುದನ್ನು ಗಮನಿಸಿದ ಯಾವುದೇ ರಾಜಕೀಯ ವಿದ್ಯಾರ್ಥಿಯೂ ಕೂಡ ಈ ಅಂಶವನ್ನು ನಿರ್ಲಕ್ಷಿಸಲಾರ. ನಿರ್ಲಕ್ಷಿಸುವುದು ಎಂದರೆ ಈ ಶಕ್ತಿಗಳ ಬೆಳವಣಿಗೆಗೆ ಪರೋಕ್ಷವಾಗಿ ಮುಕ್ತಮಾರ್ಗ ಕಲ್ಪಿಸಿದಂತೆಯೇ ಸರಿ.

ಹೋಗಲಿ ರಾಜ್ಯದಲ್ಲಿ ಈ ಬಾರಿ ರಚಿತವಾದ ಮೈತ್ರಿಕೂಟದ ಸರ್ಕಾರ ಯಾಕೆ ರಚಿತವಾಯಿತು ಎಂಬ ಬಗ್ಗೆ ಕಾರ್ಯಾಧ್ಯಕ್ಷರಿಗೆ ಮರೆತು ಹೋಯಿತೆ? ಕೋಮುವಾದಿಗಳನ್ನು ದೂರ ಇಡಲೆಂದೇ ಈ ಸರ್ಕಾರ ಎಂಬುದನ್ನು ಕೇವಲ ನಾಲಿಗೆಯ ಮಾತಿಗೆ ಸೀಮಿತವೇ? ಅಧಿಕಾರ ಹಿಡಿದಾಯ್ತು ಎಂಬ ವಿಶ್ಲೇಷಣೆಯೆ?

ಜಾತ್ಯಾತೀತ ಜನತಾದಳ ಕಾಂಗ್ರೆಸ್ ಮತ್ತು ಬಿಜೆಪಿ ಬಿನ್ನವಾದಗಳನ್ನು ಎದುರಿಸುವ ಸೆಕ್ಯೂಲರ್ ಮೂರನೇ ಶಕ್ತಿ ಎಂಬುದು ವಾಸ್ತವ. ಇವೆರಡೂ ಪಕ್ಷಗಳನ್ನು ಎದುರಿಸುತ್ತಲೇ ಬಲವೃದ್ಧಿಯಾಗುತ್ತದೆ ಎಂಬುದೂ ನಿಜ. ಆದರೆ ಹೀಗೆ ಹೋರಾಡುವಾಗಲೇ ಇಂದಿನ ರಾಜಕೀಯ ಸಂದರ್ಭದಲ್ಲಿ ಕೋಮುವಾದಿ ಬಿಜೆಪಿಯನ್ನು ಎದುರಿಸುವುದು, ಅದನ್ನು ದುರ್ಬಲಗೊಳಿಸಿ ಅಧಿಕಾರಕ್ಕೆ ಬರದಂತೆ ಜನರಿಂದ ದೂರಗೊಳಿಸುವುದೇ ಪ್ರಥಮ ಆದ್ಯತೆ. ಅದರ ಬದಲು ಮೈತ್ರಿಕೂಟದ ಸರ್ಕಾರದ ಭಾಗೀದಾರ ಪಕ್ಷಗಳೆರಡೂ ಒಬ್ಬರನೊಬ್ಬರು ಸೆಣಸಿಕೊಳ್ಳುತ್ತಾ ಹೋಗುವುದು ಇಬ್ಬರ ಶಕ್ತಿಯನ್ನು ಕುಂದಿಸುತ್ತದೆ. ಇದರರ್ಥ ಜಾತ್ಯಾತೀತ ಜನತಾದಳ ತನ್ನ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಳ್ಳಬಾರದೆಂದಲ್ಲ. ಯಾವ ಶಕ್ತಿಯನ್ನು ಎಷ್ಟು ಪ್ರಮಾಣದಲ್ಲಿ ಹೇಗೆಲ್ಲಾ ಎದುರಿಸಬೇಕು ಎಂಬ ಒಂದು ರಾಜಕೀಯ ಭಿನ್ನ ನಿಲುವು- ತಂತ್ರಗಾರಿಕೆ ಬೇಕಾಗುತ್ತದೆ. ಈ ದಿಶೆಯಲ್ಲಿ ಜೆಡಿ(ಎಸ್)ನಲ್ಲಿ ತೀವ್ರವಾದ ಆಂತರಿಕ ಚರ್ಚೆ - ನಿಲುವು ತಾಳುವುದು ಅಗತ್ಯ. ಹಾಗೆಯೇ ರಾಜ್ಯದಲ್ಲಿ ಇನ್ನೂ ಸೀಮಿತಗೊಂಡಿರುವ ತಮ್ಮ ಶಕ್ತಿ - ಮತ್ತು ಕೇವಲ 58 ಶಾಸಕರಿಗೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಯಾಕೆ ಎಂಬ ಆತ್ಮವಿಮರ್ಶೆ ಅಗತ್ಯವಿದೆ. ಇದರ ಪೂರ್ವೋಪಾದಿಯಾಗಿ ಈಗಲಾದರೂ ಚುನಾವಣಾ ಫಲಿತಾಂಶದ ಆಳ ವಿಮರ್ಶೆಗೆ ಜೆಡಿ(ಎಸ್) ನಾಯಕತ್ವ ಇಳಿಯಬಹುದೆ? ಯಾರ ವಿರುದ್ಧ ತಮ್ಮ ಸಮರ ಎಂಬುದನ್ನು ವಸ್ತುನಿಷ್ಠವಾಗಿ ಗುರುತಿಸಿಕೊಳ್ಳದೇ ಹೋದರೆ ಅದು ತಿರುಗುಬಾಣವಾಗಬಹುದು, ಆ ಮೂಲಕ ರಾಜ್ಯದ ರಾಷ್ಟದ ರಾಜಕೀಯದಲ್ಲಿ ಸೆಕ್ಯುಲರ್ 3ನೆ ಪರ್ಯಾಯದ ಶಕ್ತಿ ಕುಂದುವುದು ಭವಿಷ್ಯತ್ತಿಗೆ ಮಾರಕವಾಗಬಲ್ಲದು.

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಶೆಟ್ಟರ್ ಬಿಜೆಪಿ ಅಧ್ಯಕ್ಷರು

ಕರ್ನಾಟಕದ ಬಿಜೆಪಿಗೆ ಹೊಸ ಅಧ್ಯಕ್ಷರ ನೇಮಕವಾಗಿದೆ. ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿರುವಾಗ 'ಅಧಿಕೃತ ವಿರೋಧ ಪಕ್ಷದ ನಾಯಕರಾಗಿದ್ದ ಹುಬ್ಬಳ್ಳಿಯ ಜಗದೀಶ್ ಶೆಟ್ಟರ್ ಈಗ ಬಿಜೆಪಿ ನಾಯಕರು - ಅಧ್ಯಕ್ಷರು. ನನಗೆ ಕೆಂಪುದೀಪದ ಕಾರು ಕೊಡಿಸಿ, ಬಂಗ್ಲೆ ಕೊಡಿಸಿ ಎಂದೆಲ್ಲಾ ಒತ್ತಾಯ ಹೂಡಿದ್ದ ಇವರು ರಾಜ್ಯದಲ್ಲಿ ಸಾವಿರ ಸಾವಿರ



ರೈತರು ಆತ್ಮಹತ್ಯೆಗೀಡಾಗಿ ಸಾವನ್ನಪ್ಪುತ್ತಿದ್ದರೆ ಊರೂರಿಗೆ ಕೊಳ್ಳಿ ಇಟ್ಟು ಕೋಮು ಗಲಭೆಯ ಕಿಚ್ಚು ಹಚ್ಚುತ್ತಿರುವವರ ಮೇಲೆ ಕ್ರಮ ಯಾಕೆ ತೆಗೆದುಕೊಂಡಿರೆಂದೋ ಅಥವಾ ಇನ್ನಷ್ಟು ತಿದಿಯೂದುತ್ತಾ ಸಂಘ ಪರಿವಾರದ ಸೇವೆ ಮಾಡಿಕೊಂಡಿದ್ದ ಸೇವಾವ್ಯಕ್ತಿ ಇವರು ಎಂಬುದು ಬೇರೆ ಹೇಳಬೇಕಾಗಿಲ್ಲ. ಪೆಟ್ರೋಲ್ ಬಂಕ್ ಹಗರಣ, ನಕಲಿ ಸಾರಾಯಿ ದಂಧೆ ವ್ಯವಹಾರಗಳಲ್ಲಿ ಇವರ ಹೆಸರು ದೇಶಖ್ಯಾತಿಯಾಯಿತು. ಸದಾನಂದಗೌಡ, ಬಂಗಾರಪ್ಪನವರ ನಡುವೆ ಅಧ್ಯಕ್ಷತೆಗೆ ತಾರಕ ಸ್ಪರ್ಧೆ ಇರುವಾಗ ಶೆಟ್ಟರ್ ಅಧ್ಯಕ್ಷರಾಗಿರುವುದು ಅನಂತಕುಮಾರ್ ಸೇವಕನಾಗಿರುವುದು ಎಂಬ ಕಾರಣಕ್ಕಾಗಿ ಮಾತ್ರವಲ್ಲ, ಸದಾನಂದಗೌಡರ ನೇಮಕಕ್ಕೆ ಸಂಘ ಪರಿವಾರದ ಅಭಿಲಾಷೆ ಇದ್ದರೂ ಬಂಗಾರಪ್ಪನವರು ಅಧ್ಯಕ್ಷರಾಗದಂತೆ ನೋಡಿಕೊಳ್ಳುವ ಅನಂತಕುಮಾರ್ - ಸಂಘ ಪರಿವಾರದ ಒಳ ರಾಜಕೀಯ ತಂತ್ರಗಾರಿಕೆಯಿಂದ.

ಮುತಾಲಿಕ್, ಕಂಚಿಶ್ರೀ ಬಂಧನಕ್ಕೆ ವಿರೋಧ ಅರ್ಥಹೀನ

ಜನತೆಯ ಒಗ್ಗಟ್ಟಿಗೆ ಹಾಗೂ ಕೋಮು ಸೌಹಾರ್ದತೆ, ಶಾಂತಿಗೆ ಸತತ ಭಂಗ ಉಂಟುಮಾಡುತ್ತಾ, ಕೋಮು ವಿಭಜನೆಯ ಉದ್ರಿಕ್ತತೆಗೊಳಿಸುತ್ತಿದ್ದ ಭಜರಂಗದಳದ ಸಂಚಾಲಕ ಪ್ರಮೋದ್ ಮುತಾಲಿಕ್ ಬಂಧನವನ್ನು ವಿರೋಧಿಸಿ ಬಿಡುಗಡೆಗೊಳಿಸಲೆಂದು ಇದೇ ನವೆಂಬರ್ 19 ರಂದು ವಿಶ್ವ ಹಿಂದೂ ಪರಿಷತ್, ಭಜರಂಗದಳದ ಸಂಘಟನೆಗಳು ಕರೆ ನೀಡಿದ ಉತ್ತರ ಕರ್ನಾಟಕ ಬಂದ್ ಅರ್ಥಹೀನ.

ಜನರ ನಡುವೆ ಹಿಂಸೆ, ಗಲಭೆಗಳನ್ನು ಪ್ರಚೋದಿಸುತ್ತಾ ನಮ್ಮ ನಾಡಿನ ಸೌಹಾರ್ದತೆಯ ಜನಸಂಸತಿ - ಪರಂಪರೆಗೆ ಮಸಿ ಬಳಿಯುತ್ತಿರುವ ಇಂತಹ ಶಕ್ತಿಗಳ ಹುನ್ನಾರಗಳನ್ನು ಅರಿತು ಬಂದ್ ಅನ್ನು ಜನ ಬಂದ್‌ನ್ನು ತಿರಸ್ಕರಿಸಿದ್ದಾರೆ.

ಕೋಮುವಾದಿ ಶಕ್ತಿಗಳ ಅಟ್ಟಹಾಸವನ್ನು ತಡೆಯುವಲ್ಲಿ ಮತ್ತು ಕೋಮು ಸೌಹಾರ್ದತೆ ಕಾಪಾಡುವಲ್ಲಿ ಧರ್ಮಸಿಂಗ್ ಸರ್ಕಾರ ಕೈಗೊಳ್ಳುತ್ತಿರುವ ಮುತುವರ್ಜಿಯ ಕ್ರಮಗಳು ಸ್ವಾಗತಾರ್ಹ. ಇದು ಇನ್ನು ಹೆಚ್ಚು ತೀವ್ರಗೊಳ್ಳಬೇಕು, ನಿರ್ದಿಷ್ಟಗೊಳ್ಳಬೇಕು.

ದೇಶದಲ್ಲಿ ಹಾಗೂ ರಾಜ್ಯದಲ್ಲಿ ಅಧಿಕಾರ ಪಡೆಯದೇ ಜನತೆಯಿಂದ ಸತತವಾಗಿ ತಿರಸ್ಕಾರಕ್ಕೆ ಒಳಗಾಗುತ್ತಿರುವ ಬಿಜೆಪಿ ಮತ್ತು ಪ್ರಮುಖವಾಗಿ ಸಂಘ ಪರಿವಾರವು ತಮ್ಮ ಬಲವನ್ನು ಕ್ರೋಢೀಕರಿಸಿಕೊಂಡು, ನೆಲೆಯನ್ನು ವಿಸ್ತರಿಸಿಕೊಳ್ಳಲು 'ಮೂರು ಮುಳ್ಳಿನ' ಕೋಮುವಾದಿ ಅಜೆಂಡಾ ರೂಪಿಸಿಕೊಂಡು ಕಾರ್ಯಾಚರಣೆಗೆ ಇಳಿದಿದೆ. ಇಲ್ಲದ ವಿವಾದಗಳನ್ನು ಹುಟ್ಟುಹಾಕಿ ಜನರನ್ನು ವಿಭಜಿಸುವುದು, ಸ್ಥಳೀಯವಾಗಿ ಸಣ್ಣ-ಪುಟ್ಟ ವಿವಾದಗಳನ್ನು ಬಳಸಿ ಅಲ್ಲಲ್ಲಿ ಸತತವಾಗಿ ಕೋಮು ಗಲಭೆ ಎಬ್ಬಿಸುವುದು, ಬಾಬಾ ಬುಡನ್ ಗಿರಿ ದತ್ತಪೀಠದ ವಿವಾದವನ್ನೆತ್ತಿ ಇನ್ನೊಂದು ಅಯೋಧ್ಯೆ ಧ್ವಂಸ ಕಾಂಡ ಸೃಷ್ಟಿಸುವುದು ಅವುಗಳ ಕಾರ್ಯಸೂಚಿಯಾಗಿದೆ. ಜನತೆಯ ಜೀವನದ ಸಂಕಷ್ಟ, ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಈ ಸಂಘ ಪರಿವಾರ ಜನರ ಅಸಂತೃಪ್ತಿಯನ್ನು ದುರ್ಬಳಕೆ ಮಾಡಿ ಕೋಮುವಾದದತ್ತ ತಿರುಗಿಸುವ ಸಂಚು ಮಾಡಿದೆ. ಅದಕ್ಕಾಗಿ ದತ್ತ ಜಯಂತಿಯನ್ನು ನೆಪವಾಗಿ ಬಳಸಲು ತಂತ್ರ ರೂಪಿಸಿದೆ. ಇದನ್ನು ಎಲ್ಲಾ ಮಾನವ ಪ್ರೇಮಿ, ಧರ್ಮನಿರಪೇಕ್ಷ ಜನತೆ ಖಡಾಖಂಡಿತವಾಗಿಯೂ ವಿರೋಧಿಸಬೇಕು. ಅವುಗಳನ್ನು ವಿಫಲಗೊಳಿಸಬೇಕು.

ಈ ಹಿನ್ನೆಲೆಯಲ್ಲಿ ಧರ್ಮಸಿಂಗ್ ಸರ್ಕಾರ ಆಡಳಿತಾತ್ಮಕ ಹಾಗೂ ರಾಜಕೀಯವಾದ ಕ್ರಮಗಳನ್ನು ಅತ್ಯಂತ ದೃಢವಾಗಿ ಕೈಗೊಳ್ಳಬೇಕು. ಬಾಬಾ ಬುಡನ್‌ಗಿರಿ ವಿವಾದವನ್ನು ಇತ್ಯರ್ಥಪಡಿಸುವಲ್ಲಿ ಹಿಂದೆ ಸಿಪಿಐ(ಎಂ)-ಸಿಪಿಐ ನಿಯೋಗಗಳಿಗೆ ಭರವಸೆ ನೀಡಿದ್ದು, ಸರ್ವಪಕ್ಷಗಳ ಸಭೆಯನ್ನು ಕೂಡಲೇ ಕರೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಮುತಾಲಿಕ್ ಹೋದ ಕಡೆಗಳಲ್ಲಿ ಬಹಿರಂಗ ಸಭೆಗಳನ್ನು ಉದ್ದೇಶಿಸಿ ಮಾತನಾಡಿರುವಲ್ಲಿ, ಯೋಜಿತ ಎಂಬಂತೆ ಗಲಭೆಗಳು ನಡೆದಿವೆ. ಅಪಾರ ಪ್ರಮಾಣದಲ್ಲಿ ಜನರ ಆಸ್ತಿ-ಪಾಸ್ತಿ, ಜೀವ ಹಾನಿಯಾಗಿದೆ. ಅಶಾಂತಿ, ಆತಂಕಗಳು ಉಂಟಾಗಿವೆ. ಮುತಾಲಿಕರನ್ನು ಬೆಂಬಲಿಸುವವರು ಈ ಕಾನೂನು ಬಾಹಿರ, ಜೀವವಿರೋಧಿ ಕೃತ್ಯಗಳನ್ನು ಸಮರ್ಥಿಸುವುದು ಖಂಡನೀಯವಾಗಿದೆ.

ಕಂಚಿ ಸ್ವಾಮಿಗಳ ಬಂಧನ: ವರದರಾಜ್ ಪೆರುಮಾಳ್ ದೇವಸ್ಥಾನದ ಮ್ಯಾನೇಜರ್ ಶಂಕರರಾಮನ್‌ರವರ ಹತ್ಯೆಯ ಪ್ರಮುಖ ಆರೋಪಿಯಾಗಿರುವ ಕಂಚಿ ಪೀಠದ ಜಯೇಂದ್ರ ಸ್ವರಸ್ವತಿಯರ ಮೇಲಿನ ಮೊಕದ್ದಮೆ ಹಿಂತೆಗೆಯಲು,



ಬಂಧನ ವಿರೋಧಿಸಿ ಅಲ್ಲಲ್ಲಿ ವಿಶ್ವ ಹಿಂದೂ ಪರಿಷತ್, ಬಿಜೆಪಿ ಮುಂತಾದವರು ಪ್ರತಿಭಟಿಸುತ್ತಿರುವುದನ್ನು ಸಿಪಿಐ(ಎಂ) ತೀವ್ರವಾಗಿ ಆಕ್ಷೇಪಿಸಿದೆ.

ಕ್ರಿಮಿನಲ್ ಅಪರಾಧದಲ್ಲಿ ಭಾಗಿಯಾಗಿರುವ ಕುರಿತು ಆಳವಾದ ತನಿಖೆ ನಡೆಸಿ ಸತ್ಯ ಹೊರಬರಲಿ, ಶಿಕ್ಷೆ ವಿಧಿಸಲಿ ಎಂದು ಕೇಳಬೇಕಿತ್ತು. ಅದರ ಬದಲು ತನಿಖೆಯಾಗಬಾರದು, ಶಿಕ್ಷೆ ನೀಡಬಾರದು, ಹಿಂದೂ ಧರ್ಮಕ್ಕೆ ಅಪಚಾರವಾಗಿದೆ ಎಂದು ಹುಯಿಲೆಬ್ಬಿಸಿ ವಿಭಜನೆ ಮಾಡುತ್ತಿರುವುದು ಅಸಮರ್ಥನೀಯ, ಖಂಡನೀಯ.

ದೇಶದ ಕಾನೂನಿನ ಮುಂದೆ ಎಲ್ಲರೂ ಒಂದೇ, ಯಾರೂ ಅತೀತರಲ್ಲ ಎಂಬುದನ್ನು ಸ್ವಾಮೀಜಿಯನ್ನು ಬೆಂಬಲಿಸುವವರೆಲ್ಲರೂ ಅರಿಯಬೇಕು. ಈ ವಿಷಯದಲ್ಲಿ ಬಿಜೆಪಿ ನಾಯಕರು, ಎನ್‌ಡಿಎ ಸಂಚಾಲಕ ಜಾರ್ಜ್ ಫರ್ನಾಂಡೀಸ್‌ರಂತಹವರ ಪಾತ್ರವು ಅವರ ದಿವಾಳಿತನವನ್ನು ತೋರಿಸುವಂತದ್ದು ಎಂದು ಸಿಪಿಐ(ಎಂ) ಪ್ರತಿಕ್ರಿಯಿಸಿದೆ.

ರಾಜ್ಯಾದ್ಯಂತ ಹಲವು ಬೇಡಿಕೆಗಳ ಈಡೇರಿಕೆಗಾಗಿ ರೈತರ ಪ್ರತಿಭಟನೆ

ದೇಶದಲ್ಲಿ ಕಾರ್ಷಿಕ ಬಿಕ್ಕಟ್ಟು ತೀವ್ರಗೊಂಡಿದೆ. ಕರ್ನಾಟಕದಲ್ಲಿ ರೈತ-ಕೃಷಿ ಕೂಲಿಕಾರರು ಬಿಕ್ಕಟ್ಟಿನ ಪರಿಣಾಮದಿಂದ ಬಂದ ಸಂಕಷ್ಟಗಳನ್ನು ಎದುರಿಸಲಾರದೆ ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ನೂತನ ಸರ್ಕಾರದ ನಂತರ 45 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ತಡೆಯುವುದಕ್ಕೆ ಸರ್ಕಾರ ಯಾವುದೇ ದೃಢವಾದ ಹೆಜ್ಜೆ ಇಟ್ಟಿಲ್ಲ. ಇದರ ಬದಲಾಗಿ ಡಬ್ಲ್ಯು.ಟಿ.ಓ. (WTO) ನೀತಿಗಳನ್ನೇ ಜಾರಿಗೊಳಿಸಲು ಮುಂದಾಗಿದೆ. ಹಿಂದಿನ ಎನ್.ಡಿ.ಎ. ಸರ್ಕಾರದ ಹಾದಿಯನ್ನೇ ತುಳಿಯುತ್ತಿದೆ. ಇಂತಹ ಧೋರಣೆಗಳ ಬದಲಾಗಿ ರೈತ-ಕೃಷಿ ಕೂಲಿಕಾರರ ಸಂಕಷ್ಟಗಳನ್ನು ದೂರಮಾಡಿ ಆತ್ಮಹತ್ಯೆ ತಡೆಗಟ್ಟಲು ಕಾರ್ಯಸೂಚನೆಗೆ ಸರಕಾರ ಮುಂದಾಗಬೇಕು.

ರಾಜ್ಯದಲ್ಲಿ 60 ಲಕ್ಷಕ್ಕಿಂತ ಹೆಚ್ಚು ಭೂ ಹಿಡುವಳಿದಾರರು ಇದ್ದಾರೆ, ಅದರಲ್ಲಿ ಕೇವಲ 14 ಲಕ್ಷ ರೈತರಿಗೆ ಬ್ಯಾಂಕ್, ಸಹಕಾರ ಸಂಸ್ಥೆಗಳಿಂದ ಸಾಲ ನೀಡಲಾಗಿದೆ. ಉಳಿದ ರೈತರಿಗೂ ಸಾಲ ನೀಡಬೇಕು, ಬಡತನ ರೇಖೆಗಿಂತ ಕಡಿಮೆ ಇರುವವರು ಹೆಚ್ಚಾಗಿದ್ದು, ವಾರ್ಷಿಕ 24 ಸಾವಿರ ಆದಾಯವಿರುವ ಕುಟುಂಬಗಳಿಗೆ ರೇಷನ್ ಕಾರ್ಡುಗಳನ್ನು ಮಂಜೂರು ಮಾಡಬೇಕು, ಭಾಗ್ಯಜ್ಯೋತಿ, ಕುಟೀರಜ್ಯೋತಿ, ಬಾಕಿ ಮನ್ನ ಮಾಡಬೇಕು, ವಿದ್ಯುತ್ ವಲಯದ ಖಾಸಗೀಕರಣ ತಡೆಗಟ್ಟಬೇಕು, ಮುಂತಾದ ಬೇಡಿಕೆಗಳ ಮನವಿ ಪಟ್ಟಿಯನ್ನು ಜುಲೈ-20 ರಂದು ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು. ದಿನಾಂಕ 13.09.04 ರಂದು ಸೇರಿದ ರಾಜ್ಯಮಟ್ಟದ ಭೂ ಸಮಾವೇಶವು ಸೆಪ್ಟೆಂಬರ್ 30 ರಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಧರಣಿ ನಡೆಸಲು ಕರೆ ನೀಡಿತ್ತು. ನಂತರ ಅಕ್ಟೋಬರ್ 8 ರಂದು ರಾಜ್ಯ ಮಟ್ಟದ ರೈತ ಕೂಲಿಕಾರರ ರ್‍ಯಾಲಿ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಮೇಲಿನ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ತಾಲೂಕು ಕಛೇರಿಗಳಿಗೆ, ಮುತ್ತಿಗೆ ಹಾಕಲು, ಪ್ರತಿಭಟನೆ ನಡೆಸಲು ಕರೆ ನೀಡಿತ್ತು. ಇದರ ಭಾಗವಾಗಿ ರಾಜ್ಯ ಹಲವು ತಾಲೂಕುಗಳ ಪ್ರತಿಭಟನೆಗಳು ನಡೆದಿವೆ.

ಉಡುಪಿ : ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಒತ್ತಾಯಿಸಿ ತಾಲೂಕು ಕಛೇರಿಗೆ ಮುತ್ತಿಗೆ: ರಾಜ್ಯ ಸರಕಾರವು ಕಲವರಿಗೆ ಮಾತ್ರ ಹಳದಿ ಪಡಿತರ ಚೀಟಿ ನೀಡಿ ತಾರತಮ್ಯ ತೋರಿಸುವ ಬದಲು ಬಡವರೆಲ್ಲರಿಗೂ ಹಳದಿ ಪಡಿತರ ಚೀಟಿ ನೀಡಿ ಕೆ.ಜಿ.ಗೆ ರೂ. 3 ದರದಲ್ಲಿ ಅಕ್ಕಿ, ಗೋಧಿ ನೀಡಬೇಕೆಂದು ಒತ್ತಾಯಿಸಿ ಅಕ್ಟೋಬರ್ 29 ರಂದು ನೂರಾರು ಕೃಷಿ ಕಾರ್ಮಿಕರು, ಬೀಡಿ ಕಾರ್ಮಿಕರು, ನೇಕಾರರು ಮೊದಲಾದವರು ತಾಲೂಕ ಕಛೇರಿಗೆ ಮೆರವಣಿಗೆ ನಡೆಸಿ ಮುತ್ತಿಗೆ ಕಾರ್ಯಕ್ರಮ ಹಾಕಿದರು. ಪ್ರತಿಭಟನೆಕಾರರನ್ನು ಉದ್ದೇಶಿಸಿ ಉಡುಪಿ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಡೇವಿಡ್.ಎ.ಕರ್ಕಡ ರವರು ಸರಕಾರದ ಉಗ್ರಾಣಗಳಲ್ಲಿ ಆಹಾರ ಧಾನ್ಯಗಳು "ಹಾಳಾಗುತ್ತಿವೆ, ಬಡವರು ಹೊಟ್ಟೆಗಿಲ್ಲದೆ; ಉಪವಾಸದಿಂದ ಸಾಯುವ ಪರಿಸ್ಥಿತಿಯೂ ಬಂದಿದೆ. ಹಸಿರು ಕಾರ್ಡುಗಳಿಗೆ ಪಡಿತರ ಆಹಾರಧಾನ್ಯ ನೀಡದಿರುವುದನ್ನು ಖಂಡಿಸಿದರಲ್ಲದೆ, ಬಡವರೆಲ್ಲರಿಗೂ ಹಳದಿ ಪಡಿತರ ಚೀಟಿ ಒದಗಿಸಬೇಕು ಎಂದು ಆಗ್ರಹಿಸಿದರು. ಉಪವಾಸ, ಆತ್ಮಹತ್ಯೆಗೆ ಶರಣಾಗುವುದರಿಂದ ಯಾವುದೇ ಸಮಸ್ಯೆಗೆ ಪರಿಹಾರ ಬರಲಾದು, ಚಳುವಳಿ ನಡೆಸುವ ಮೂಲಕ ಸಮಸ್ಯೆಗೆ ಪರಿಹಾರ ಸಾಧ್ಯ ಎಂದು ಹೇಳಿದರು. ವಿವಿಧ ಹಂತದ ಹೋರಾಟಗಳ ಮೂಲಕ ಮನವಿಗಳನ್ನು ಸಲ್ಲಿಸಲಾಗಿದೆ. ಈಗ ಇನ್ನೂ ಹೆಚ್ಚಿನ ಒತ್ತಡದ ಮೂಲಕ ಸರ್ಕಾರದ ಧೋರಣೆಗಳನ್ನು ಬದಲಾಯಿಸುವುದು ನಮ್ಮ ಉದ್ದೇಶವಾಗಿದೆ, ನೀಡಿದ ಭರವಸೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ)ನ ತಾಲೂಕ ಸಮಿತಿ ಕಾರ್ಯದರ್ಶಿ ಪಿ.ವಿಶ್ವನಾಥ, ಎಸ್.ಸಾಧು ಅಮೀನ್, ದೋಗುಸುವರ್ಣ ಎಚ್.ವಿಠಲ್ ಪೂಜಾರಿ, ರಮೇಶ್ ಮೆಂಡನ್, ಕೃಷ್ಣ ಎಸ್.ಅಮೀನ್, ಉಮೇಶ್ ಕುಂದರ್, ಗೋಡ್ವಿನ್ ಡೆನಿಸ್ ಫರ್ನಾಂಡಿಸ್, ಎ.ಎಸ್. ಆಚಾರ್ಯ, ಯಶೋಧ ಕೊಡವೂರು, ಎಂ.ರತ್ನ ನಿಟ್ಟೂರು, ಇಂದಿರಾ ಕುಕ್ಕಿಪಟ್ಟ, ರತ್ನಾವತಿ ಮಾರ್ಪಳ್ಳಿ, ಒಫಿಲಿಯಾ ಫೆರ್ನಾಂಡಿಸ್ ಬ್ರಹ್ಮಾವರ ಮೊದಲಾದವರು ಭಾಗವಹಿಸಿದ್ದರು.

ಬಿಜಾಪುರ : ಅಕ್ಟೋಬರ್ ನೇತೃತ್ವದಲ್ಲಿ ರೈತರು 29.10.04 ರಂದು ಕೆ.ಪಿ.ಆರ್.ಎಸ್. ತಾಲೂಕ ಸಮಿತಿಯಿಂದ ಬೃಹತ್ ಮೆರವಣಿಗೆ ಘೋಷಣೆ ಕೂಗುತ್ತಾ ಮುಖ್ಯ ಬೀದಿಗಳಲ್ಲಿ ಹಾಯ್ದು ತಹಶೀಲದಾರ ಕಛೇರಿಗೆ ತಲುಪಿದಾಗ ತಾಲೂಕು ಕಛೇರಿಯ ಮುಖ್ಯದ್ವಾರವನ್ನು ಕೀಲಿ ಬಡಿದಿದ್ದರೂ ರೈತರು - ಮಹಿಳೆಯರು ಬಲವಂತವಾಗಿ ದ್ವಾರವನ್ನು ಜಗಿಯಲು ಪ್ರಯತ್ನಿಸಿದರು. ಪ್ರತಿಭಟನಾ ಸಭೆಯನ್ನುದ್ದೇಶಿಸಿ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಭೀಮಸಿ ಕಲಾದಗಿ ಮಾತನಾಡುತ್ತಾ ಪಡಿತರ ಚೀಟಿ ಫಲಾನುಬಾವಿಗಳಿಗೆ ಕೊಡದೇ ಅನರ್ಹರಿಗೆ ಕೊಟ್ಟಿದ್ದಾರೆಂದು ಆಪಾದನೆ ಮಾಡಿದರು. ಅಕ್ಕಿ, ಗೋಧಿ ಲಾರಿಗಟ್ಟಲೇ ಕಳ್ಳ ಸಾಗಾಣಿಕೆ ಮಾಡುವುದನ್ನು ಹಿಡಿದರೂ ಅಧಿಕಾರಿಗಳು ಲಂಚ ತಿಂದು ಬಿಟ್ಟಿದ್ದನ್ನು ಕಟುವಾಗಿ ಟೀಕಿಸಿದರು. ಬೆಳೆ ವಿಮೆ ನೆರೆ ಜಿಲ್ಲೆಗಳಿಗೆ ವಿತರಣೆ ಮಾಡಿರುತ್ತಾರೆ. ವಿಜಾಪುರ ಜಿಲ್ಲೆಯೂ ಸತತವಾಗಿ ಬರಗಾಲದಲ್ಲಿದ್ದರೂ ಬೆಳೆ ವಿಮೆಯನ್ನು ಇನ್ನೂವರೆಗೂ ಕೊಡದಿರುವುದನ್ನು ಟೀಕಿಸಿ ತಕ್ಷಣವೆ ಕೊಡಬೇಕು ಎಂದು ಸರ್ಕಾರಕ್ಕೆ ಎಚ್ಚರಿಸಿದರು.

ತಹಶೀಲದಾರ ನಾಗರಾಜ, ಆಹಾರ ನಾಗರಿಕ ಪೂರೈಕೆ ಉಪನಿರ್ದೇಶಕರಾದ ಶ್ರೀಧರ, ಸಹಾಯಕ ನಿರ್ದೇಶಕರ ಸಂಬಯ್ಯ ಇವರಿಗೆ ಪರುಪತಯ್ಯ ಹಿರೇಮಠ ಕೆಪಿಆರ್ಎಸ್ ತಾಲೂಕ ಅಧ್ಯಕ್ಷರು ಹತ್ತು ಪ್ರಮುಖ ಬೇಡಿಕೆ ಮನವಿ ಪತ್ರ ಸಲ್ಲಿಸಿದರು. ಮನವಿ ಸ್ವೀಕರಿಸಿದ ಅಧಿಕಾರಿಗಳು ಕೂಡಲೇ, ಮಹಿಳೆಯರು ಮತ್ತು ರೈತರ ಮುಂದೆ ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಿದರು.

ಡಾ|| ಶಂಕರ ದೇಸಾಯಿ ಕೆಪಿಆರ್ಎಸ್ ಮುಖಂಡರು, ಸುರೇಖಾ ರಜಪೂತ ಜೆಎಂಎಸ್ ಕಾರ್ಯದರ್ಶಿಗಳು, ಕಾರ್ಮಿಕ ಮುಖಂಡ ವಿ.ಎಂ. ಸೊನ್ನಾದ, ಬಸಲಿಂಗ ಕಪಾಳೆ, ಡಿವೈಎಫ್ಐ ಸಂಚಾಲಕರು ಮಾತನಾಡಿದರು. ಪ್ರತಿಭಟನೆ ನೇತೃತ್ವವನ್ನು ನಬಿಸಾಬಡಪಳಗಿ, ರಾಮಣ್ಣ ಶಿರಾಗೋಳ್, ಸಾಬು ಮೂಲಿಮನಿ ಡಿವೈಎಫ್ಐನ ಶಿವಶರಣಕಾಂಬಳೆ, ರಾಜಪ್ಪ ಹಡಪದ, ಜೆ.ಎಂ.ಎಸ್ ನ ಮುಖಂಡರು ಇನ್ನೂ ಮುಂತಾದವರು ಭಾಗವಹಿಸಿದ್ದರು.

ಗಂಗಾವತಿ : ತಹಶೀಲದಾರ ಕಛೇರಿಗೆ ಮುತ್ತಿಗೆ ಹಾಕಿದರು. ಸುಮಾರು 600 ರಿಂದ 700 ರಷ್ಟು ರೈತರು - ಕೂಲಿಕಾರರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಶೀಲದಾರರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ತಹಶೀಲದಾರರು ನವೆಂಬರ್ 8 ರಂದು ಸಭೆಗೆ ಆಹ್ವಾನಿಸಿ ಚರ್ಚಿಸುವುದಾಗಿ ಲಿಖಿತ ಹೇಳಿಕೆ ನೀಡಿದರು. ಈ ಭರವಸೆಯ ಮೇರೆಗೆ ಒಂದು



ಕಾರವಾರದಲ್ಲಿ ರೈತರ ಪ್ರತಿಭಟನೆ

ಗಂಟೆಗಳ ನಂತರ ಮುತ್ತಿಗೆಯನ್ನು ವಾಪಾಸು ತೆಗೆದುಕೊಳ್ಳಲಾಯಿತು. ಪ್ರತಿಭಟನೆಯಲ್ಲಿ ಕೃಷಿ - ಕೂಲಿಕಾರರ ಕಾರ್ಯಾಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ್ನು ಕೃಷಿ ಕೂಲಿಕಾರರ ತಾಲೂಕ ಸಮಿತಿಯ, ಬಾಳಪ್ಪ, ಗಂಗಾಧರ ಸ್ವಾಮಿ, ನಿಂಗಪ್ಪ ಹಾಗೂ ಎಸ್ಎಫ್ಐ - ಡಿವೈಎಫ್ಐ ನ ಕಾರ್ಯಕರ್ತರು ಭಾಗವಹಿಸಿದ್ದರು. ದಿನಾಂಕ 29 ರಂದು ರಾತ್ರಿ 2 ಗಂಟೆಯ ವರೆಗೆ ಪ್ರತಿಭಟನೆ ನಡೆಸಿದರು. ಸುಮಾರು 300 ಕ್ಕೂ ಹೆಚ್ಚು ರೈತ ಕೂಲಿಕಾರರು ಭಾಗವಹಿಸಿ ಅಧಿಕಾರಿಗಳು ಜೊತೆಗೆ ಇತ್ಯರ್ಥ ಗೊಳಿಸಿದ ನಂತರ ಪ್ರತಿಭಟನೆ ವಾಪಾಸ ತೆಗೆದುಕೊಂಡು ಯಶಸ್ವಿಗೊಳಿಸಿದರು.

ಗುಲ್ಬರ್ಗಾ: ಗುಲ್ಬರ್ಗಾ ಜಿಲ್ಲೆಯಲ್ಲಿ ಚಿಂಚೋಳಿ, ಆಳಂದ, ಶಹಾಪುರ, ಗುಲ್ಬರ್ಗಾದಲ್ಲಿ ವ್ಯಾಪಕವಾಗಿ ಪ್ರತಿಭಟನೆ ನಡೆದಿವೆ. ಚಿಂಚೋಳಿಯಲ್ಲಿ ಸುಮಾರು 3 ಸಾವಿರ ರೈತ ಕೂಲಿಕಾರರು ಮೆರವಣಿಗೆ ಮೂಲಕ ತಾಲೂಕು ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಆಳಂದದಲ್ಲಿಯೂ ಸುಮಾರು 500ಕ್ಕೂ ಹೆಚ್ಚು ರೈತ - ಕೂಲಿಕಾರರು ಪಡಿತರ ಚೀಟಿಗಾಗಿ ಆಗ್ರಹಿಸಿ ಒಂದು ದಿನ ಧರಣಿ ಮುತ್ತಿಗೆ ಕಾರ್ಯಕ್ರಮ ನಡೆಸಿದರು. ರೈತ ಮುಖಂಡರಾದ ಮಾರುತಿ ಮಾನ್ಪಡೆ, ಇತರರೂ ಭಾಗವಹಿಸಿ ಪ್ರತಿಭಟನೆ ಯಶಸ್ವಿಗೊಳಿಸಿದರು.

ಉತ್ತರ ಕನ್ನಡ : ಉತ್ತರ ಕನ್ನಡ ಜಿಲ್ಲೆ ಕಾರವಾರದಲ್ಲಿ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಸುಮಾರು 500ಕ್ಕೂ ಹೆಚ್ಚು ರೈತ, ಕೂಲಿಕಾರ, ವಿದ್ಯಾರ್ಥಿ, ಯುವಜನ, ಮಹಿಳೆಯರು ಭಾಗವಹಿಸಿದರು. ಜಿಲ್ಲಾಧಿಕಾರಿಗಳಿಗೆ ರೈತ ಮುಖಂಡರಾದ ಶಾಂತರಾಮ ನಾಯಕ ಮನವಿ ಪತ್ರ ಸಲ್ಲಿಸಿದರು. ಇದೇ ರೀತಿಯಾಗಿ ಅಂಕೋಲ, ಹೊನ್ನಾವರ ದಲ್ಲಿ ಪ್ರತಿಭಟನೆ ನಡೆಸಿದರು. ಈ ಮುತ್ತಿಗೆ ಕಾರ್ಯಕ್ರಮದಲ್ಲಿ ಎಸ್ಎಫ್ಐ-ಡಿವೈಎಫ್ಐ ಇತರೆ ಕಾರ್ಯಕರ್ತರು ಸಹ ಭಾಗವಹಿಸಿದ್ದರು.

ಬಳ್ಳಾರಿ : ಬಳ್ಳಾರಿ, ಸಿರಗುಪ್ಪ, ಕುರುಗೋಡು ತಾಲೂಕಿನಲ್ಲಿ ಕೂಡಾ ತಾಲೂಕು ಕಛೇರಿಗೆ ಮುತ್ತಿಗೆ ಹಾಕಿ ಚಳುವಳಿ ನಡೆಸಿದರು. ತಹಶೀಲ್ದಾರರಿಗೆ ಕೂಡಲೇ ರೇಷನ್ ಕಾರ್ಡ್‌ಗಳನ್ನು ಕೊಡಬೇಕು, ವಿದ್ಯುತ್ ಖಾಸಗೀಕರಣ ನಿಲ್ಲಿಸಬೇಕು, ರೈತರಿಗೆ ಸಾಲ ಸೌಲಭ್ಯ ನೀಡಬೇಕು. ಇತರೆ ಬೇಡಿಕೆಗಳ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಯು.ಬಸವರಾಜು, ಯಲ್ಲಪ್ಪ, ಅಡಿವೆಪ್ಪ, ನೇತೃತ್ವದಲ್ಲಿ ರೈತ ಕೃಷಿ ಕೂಲಿಕಾರರು ಮುತ್ತಿಗೆ ಯಶಸ್ವಿಗೊಳಿಸಿದರು.

ರಾಯಚೂರಿನ ದೇವದುರ್ಗ, ಬೆಳಗಾಂ ಜಿಲ್ಲೆಯ ಸವದತ್ತಿ, ಇತರೆಡೆಗಳಲ್ಲಿ ಪ್ರತಿಭಟನೆ ನಡೆಸಿದ ವರದಿಯಾಗಿದೆ.

ವರದಿ: ಕರಿಬಸಪ್ಪ.ಪಿ.

ಅಕ್ಕಿಹಗರಣ

ಮಂತ್ರಿಗಳ ಶಾಮೀಲು ಇಲ್ಲದೇ
ಕೇಳು ಇಂಥಹಾ ಹಗರಣವು ನಡೆದೀತೆ ಹೇಳು?
ಹಿಂಬದಿಗೆ ಅವಿತಿರುವ ಬಹುದೊಡ್ಡ ಕಳ್ಳ
ಇಂಥವನ ತೆರೆಹಿಡಿವ ಎದೆಗಾರ ಇಲ್ಲ.

ತನಿಖಾ ಸಮಿತಿಗಳು

ರಚಿತವಾದ ತನಿಖಾ ಸಮಿತಿಗಳು ಒಟ್ಟು
ಸಾವಿರಾರು ಖರ್ಚಾದ ಹಣವಿನ್ನು ಎಷ್ಟು
ನೂರಾರು ಕೋಟಿಗಳು ಫಲಕೇಳಬೇಡಿ
ಎಲ್ಲವೂ ಪ್ರಜೆಗಳನೆ ವಂಚಿಸಲು ನೋಡಿ

- ವಿಡಂಬಾರಿ


ಪೆಟ್ರೋಲ್, ಡಿಸೇಲ್ ಮತ್ತು ಅಡುಗೆ ಅನಿಲದ ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ

ಸಿಪಿಐ(ಎಂ) ಕೇಂದ್ರ ಮತ್ತು ರಾಜ್ಯ ಸಮಿತಿಯ ಕರೆಯ ಮೇರೆಗೆ ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ತಾರೀಕು ನವಂಬರ್ 10 ರಂದು ತಾಲೂಕು ಕಛೇರಿಯ ಎದುರು ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆ ಏರಿಕೆ ವಿರುದ್ಧ ಪ್ರತಿಭಟನಾ ಮತ ಪ್ರದರ್ಶನ ನಡೆಯಿತು. ಪಕ್ಷದ ಸದಸ್ಯರು, ಕಾರ್ಮಿಕರು ಹಾಗೂ ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು ಶಾಸ್ತ್ರಿ ಸರ್ಕಲಿನಿಂದ ತಾಲ್ಲೂಕು ಕಛೇರಿಯವರೆಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿ ಯವರಿಗೆ ತಹಶೀಲ್ದಾರರ ಮೂಲಕ ಮನವಿ ಅರ್ಪಿಸಲಾಯಿತು. ಬೆಲೆ ಏರಿಕೆಯನ್ನು ಹಿಂತೆಗೆದುಕೊಳ್ಳಲು ಮನವಿಯಲ್ಲಿ ಒತ್ತಾಯಿಸಲಾಯಿತು.

ಪ್ರತಿಭಟನಾಗಾರರನ್ನು ಉದ್ದೇಶಿಸಿ, ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡಿದರು. ಚಳುವಳಿಯ ನೇತೃತ್ವವನ್ನು ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಮಹಾಬಲ ವಡೇರ ಹೋಬಳಿ ಹಾಗೂ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ರಾದ ಯು.ದಾಸ ಭಂಡಾರಿ, ಸಿ.ನಾರಾಯಣ, ಎಚ್.ನರಸಿಂಹ ಮತ್ತು ಚಂದ್ರಶೇಖರ ವಿ.ವಹಿಸಿದ್ದರು.





ಅರಾಫತ್ ಇನ್ನಿಲ್ಲ

ಪ್ಯಾಲೆಸ್ಟೈನ್ ಸ್ವಾತಂತ್ರ್ಯದ ಕನಸಿಗೆ ಸಾವಿಲ್ಲ !

ಪ್ಯಾಲೆಸ್ಟೇನ್ ಅಧ್ಯಕ್ಷ ಮತ್ತು ಪ್ಯಾಲೆಸ್ಟೇನ್ ವಿಮೋಚನಾ ಸಂಘಟನೆಯ ನಾಯಕ ಯಾಸೆರ್ ಅರಾಫತ್ ನಿಧನ ಪ್ಯಾಲೆಸ್ಟೇನ್ ತಾಯ್ನಾಡಿಗಾಗಿ ಹೋರಾಟಕ್ಕೆ ದೊಡ್ಡ ಆಘಾತ ತಂದಿದೆ. ತನ್ನ ಜೀವನವನ್ನು ಈ ಹೋರಾಟಕ್ಕೆ ಮುಡಿಪಾಗಿಟ್ಟ ಅರಾಫತ್ ನಿಧನ ಸ್ವಾಭಾವಿಕವಾಗಿಯೇ ಪ್ಯಾಲೆಸ್ಟೇನ್ನರಿಗೆ ದುಃಖ ತಂದಿದೆ. ಅರಾಫತ್ ನಿಧನದ ನಂತರವೂ ಸಾಮ್ರಾಜ್ಯಶಾಹಿಗಳು ಮತ್ತು ಮಾಧ್ಯಮಗಳಲ್ಲಿರುವ ಅವರ ತೊತ್ತುಗಳು ಅರಾಫತ್ ಮೇಲೆ ಅಪಕೀರ್ತಿ ಹೊರಿಸುವುದರಲ್ಲಿ ತೊಡಗಿದ್ದಾರೆ. ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ. ಆ ಮೂಲಕ ಪ್ಯಾಲೆಸ್ಟೇನ್ನರ ವಿಮೋಚನೆಯ ಉದ್ದೇಶದ ಪಾವಿತ್ರ್ಯತೆಗೆ ಭಂಗ ತರಲು ಪ್ರಯತ್ನಿಸುತ್ತಿದ್ದಾರೆ.

ಇಂಜನಿಯರ್‌ನಿಂದ ಕ್ರಾಂತಿಕಾರಿಯತ್ತ

ಆಗಸ್ಟ್ 4, 1929 ರಂದು ಸಫಲ ಪ್ಯಾಲೆಸ್ಟೇನ್ ವರ್ತಕನ ಮಗನಾಗಿ ಹುಟ್ಟಿದ್ದರು ಅರಾಫತ್. ಎರಡು ವರ್ಷಗಳ ಹಿಂದೆಯಷ್ಟೇ ಅರಾಫತ್ ತಂದೆ ಕೈರೋಗೆ ಬಂದಿದ್ದು, ತಮ್ಮ ವ್ಯಾಪಾರದಲ್ಲಿ ಸಫಲರಾಗಿದ್ದರು. ಅರಾಫತ್ ಅವರ ಬಾಲ್ಯದ ಹೆಸರು ಮಹಮ್ಮದ್ ಅಬ್ದೆಲ್ - ರಾವೂಫ್ ಅರಾಫತ್ ಅಲ್-ಖುದವಾ ಅಲ್-ಹುಸೇನಿ. ಅವರು ತಮ್ಮ ಬಾಲ್ಯ ಮತ್ತು ಕೌಮಾರ್ಯವನ್ನು ಜೆರೊಸೆಲಂನಲ್ಲೇ ಕಳೆದಿದ್ದರು. 1945 ರಲ್ಲಿ ಉನ್ನತ ಶಿಕ್ಷಣಕ್ಕೆ ಕೈರೋಗೆ ವಾಪಸಾದರು. 1951 ರಲ್ಲಿ ಇಂಜನಿಯರಿಂಗ್ ಡಿಗ್ರಿ ಪಡೆದರು. ಅರಾಫತ್‌ಗೆ ಐಷಾರಾಮದ ಜೀವನ ಸಾಧ್ಯವಿತ್ತು. ಆದರೆ ಅರಾಫತ್ ಹೋರಾಟ ಮತ್ತು ತ್ಯಾಗದ ಬದುಕು ಆಯ್ದುಕೊಂಡರು. ಆ ಮೂಲಕ ಸ್ವಾತಂತ್ರ್ಯ-ಪ್ರಿಯ ಪ್ಯಾಲೆಸ್ಟೇನ್ನರ ಮಾತ್ರವಲ್ಲ, ಇಡೀ ಜಗತ್ತಿನ ಸ್ವಾತಂತ್ರ್ಯಪ್ರಿಯ ಜನತೆಯ ಹೃದಯ ಗೆದ್ದರು.

ಅರಾಫತ್ ಇಂತಹ ಆಯ್ಕೆ ಏಕೆ ಮಾಡಿದರು ಎಂಬುದು ಭಾರಿ ಆಶ್ಚರ್ಯವೇನಲ್ಲ. ಬಾಲ್ಯ ಮತ್ತು ಕೌಮಾರ್ಯದಲ್ಲಿ ಸಾಮ್ರಾಜ್ಯಶಾಹಿ ಘಾತಕ ಬುದ್ಧಿಯನ್ನು ಹತ್ತಿರದಿಂದ ನೋಡಿದವರು. ಅವರ ಬಾಲ್ಯ ಮತ್ತು ಕೌಮಾರ್ಯದ ಕಾಲದಲ್ಲಿ ಪ್ಯಾಲೆಸ್ಟೇನ್ ಬ್ರಿಟಿಷ್ ವಸಾಹತುವಿನಂತಿತ್ತು. ತನ್ನ ಸ್ವಾತಂತ್ರ್ಯಕ್ಕೆ ಹೋರಾಡುತ್ತಿತ್ತು. ಎರಡನೇ ಮಹಾಯುದ್ಧದ ನಂತರ ಮತ್ತು ವಸಾಹತಶಾಹಿ -ವಿರೋಧಿ ವಿಮೋಚನಾ ಹೋರಾಟದ ಕಾಲ ಅದು. ಹೊಸದಾಗಿ ರಚಿತವಾದ ವಿಶ್ವಸಂಸ್ಥೆ ಜೋರ್ಡಾನ್ ನದಿಯ ಅಕ್ಕ-ಪಕ್ಕ ಎರಡು ದೇಶಗಳು ಹುಟ್ಟಬೇಕು ಎಂದು ನಿರ್ಧರಿಸಿತ್ತು. ಒಂದು ಪ್ಯಾಲೆಸ್ಟೇನ್ ಇನ್ನೊಂದು ಇಸ್ರೇಲ್. ಆದರೆ ಕೂಡಲೇ ಸಾಮ್ರಾಜ್ಯಶಾಹಿಗಳು ಮಧ್ಯಪ್ರವೇಶ ಮಾಡಿ ಇದು ಆಗದಂತೆ ತಡೆದರು. ಜ್ಯೂಗಳಿಗೆ ತಮ್ಮದೇ ತಾಯ್ನಾಡು ದೊರಕಿತು - ಇಸ್ರೇಲ್. ಪ್ಯಾಲೆಸ್ಟೇನ್ನರಿಗೆ ತಾಯ್ನಾಡು ಸಿಗಲಿಲ್ಲ, ಇನ್ನೂ ಸಿಕ್ಕಿಲ್ಲ. ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ್ದ

ಪ್ಯಾಲೆಸ್ಟೇನ್ ಜನತೆಯ ವಿಮೋಚನಾ ಹೋರಾಟದ ಅಪ್ರತಿಮ ನಾಯಕ ಯಾಸೆರ್ ಅರಾಫತ್ ಇನ್ನಿಲ್ಲ. ಪ್ಯಾಲೆಸ್ಟೇನ್ ಜನತೆಯ ಹೋರಾಟದಲ್ಲಿ ಅರಾಫತ್ ಕೊಡುಗೆ ವಿವರಿಸುತ್ತಾ, ಅವರ ಪಾತ್ರದ ಬಗ್ಗೆ ಸಾಮ್ರಾಜ್ಯಶಾಹಿ ಅಪಪ್ರಚಾರವನ್ನು ಪುನಃ-ಪ್ರಸಾರ ಮಾಡುವ ನಮ್ಮ ಪತ್ರಿಕೆಗಳ ವೈಖರಿ ಬಗ್ಗೆ ಕಿಡಿಕಾರುತ್ತಾರೆ ಸುರ್ಜಿತ್. ಅರಾಫತ್ ನಿಧನ, ಪ್ಯಾಲೆಸ್ಟೇನ್ ಹೋರಾಟಕ್ಕೆ ದೊಡ್ಡ ಆಘಾತ. ಆದರೆ ಆ ಹೋರಾಟ ನಿಲ್ಲದು - ಎನ್ನುತ್ತಾರೆ ಸುರ್ಜಿತ್ ತಮ್ಮ ಶ್ರದ್ಧಾಂಜಲಿಯಲ್ಲಿ.


ಯುವಕನಿಗೆ ಐಷಾರಾಮದ ಜೀವನಕ್ಕಿಂತ ಹೋರಾಟದ ಬದುಕು ಹೆಚ್ಚು ಅರ್ಥಪೂರ್ಣವಾಗಿ ಕಂಡಿರಬೇಕು. ಪ್ಯಾಲೆಸ್ಟೇನ್ ವಿಮೋಚನಾ ಹೋರಾಟಕ್ಕಾಗಿ - ಗೆರಿಲ್ಲಾ ಹೋರಾಟ ಆರಂಭಿಸಿದರು. ಗೆರಿಲ್ಲಾ ಹೋರಾಟ ಗಾರನಾಗಿ ಆತ ಸಾಮ್ರಾಜ್ಯಶಾಹಿಯ ಬೇಟೆಗೆ ಸಿಕ್ಕಿ, ತಲೆ ಮರೆಸಿಕೊಂಡು ದೇಶದಿಂದ ದೇಶಕ್ಕೆ ಅಲೆಯಬೇಕಾಗಿತ್ತು. ಈಜಿಪ್ಟ್, ಜೋರ್ಡಾನ್, ಲೆಬನಾನ್, ಟ್ಯೂನಿಶಿಯಾ. 1958 ರಲ್ಲಿ ಅಲ್ ಫಾತೆಹ್ ಗೆರಿಲ್ಲಾ ಸಂಘಟನೆ ಸ್ಥಾಪಿಸಿದ. ಇದು ಪ್ಯಾಲೆಸ್ಟೇನ್ ಸ್ವಾತಂತ್ರ್ಯ ಗೆರಿಲ್ಲಾ ಹೋರಾಟಗಾರರ ಪ್ರಮುಖ ಸಂಘಟನೆಯಾಗಿ ಬೆಳೆಯಿತು. ಆಗಲೇ 29 ವರ್ಷ ಮುಹಮ್ಮದ್ ಅಲ್-ಹುಸೇನಿ, ಯಾಸೆರ್ ಅರಾಫತ್ ಎಂದು ಹೆಸರಿಟ್ಟುಕೊಂಡಿದ್ದು. ಅಂದಿನಿಂದ ಅದೇ ಹೆಸರಿನಿಂದ ಹೆಸರಾದರು.

1969 ರಲ್ಲಿ ಎಲ್ಲಾ ಪ್ಯಾಲೆಸ್ಟೇನ್ ಸಂಘಟನೆಗಳು ಐಕ್ಯರಂಗ ಕಟ್ಟಲು ನಿರ್ಧರಿಸಿದಾಗ ಸ್ವಾಭಾವಿಕ ವಾಗಿಯೇ ಆ ಸಂಘಟನೆ - ಪ್ಯಾಲೆಸ್ಟೇನ್ ವಿಮೋಚನಾ ಸಂಘಟನೆಯ(PLO) - ಅಧ್ಯಕ್ಷರಾದರು. ಅರಾಫತ್ ಮತ್ತೆಂದು ಹಿಂದೆ ನೋಡಲಿಲ್ಲ, ಪ್ಯಾಲೆಸ್ಟೇನ್ ಸ್ವಾತಂತ್ರ್ಯ ಹೋರಾಟದ ಜತೆ ಆದರ ಅಪ್ರತಿಮ ನಾಯಕನಾಗಿ ಬೆಳೆಯುತ್ತಾ ಹೋದರು.

PLO ಗೆ ತೊಡಕುಗಳು

ಪ್ಯಾಲೆಸ್ಟೇನ್ ಹೋರಾಟದ ಸಂಕಟ-ಭರಿತ ಚರಿತ್ರೆಯಲ್ಲಿ ಅದು ಎದುರಿಸಬೇಕಾದ ತೊಡಕುಗಳು ಕಡಿಮೆಯಲ್ಲ. PLO ಹುಟ್ಟುತ್ತಿದ್ದಂತೆ ಜೋರ್ಡಾನ್ ದೊರೆ ಶಾ ಹುಸೇನ್, ಪಾಕಿಸ್ತಾನಿ ಸೈನ್ಯವನ್ನು ಬಳಸಿ PLO ವನ್ನು ಓಡಿಸಲು ಪ್ರಯತ್ನಿಸಿದ. ಜನರಲ್ ಜಿಯಾ - ಉಲ್ ಹಕ್ ನಾಯಕತ್ವದ ಪಾಕಿಸ್ತಾನಿ ಸೈನ್ಯ ಸೆಪ್ಟೆಂಬರ್ 1970 ರಲ್ಲಿ ಜೋರ್ಡಾನ್‌ನ ಸಾವಿರಾರು ಪ್ಯಾಲೆಸ್ಟೇನರನ್ನು ಕೊಚ್ಚಿ ಹಾಕಿತು. ಆದ್ದರಿಂದ ಅರಾಫತ್ ಗೆರಿಲ್ಲಾ ನೆಲೆಗಳನ್ನು ಜೋರ್ಡಾನ್‌ನಿಂದ ಲೆಬನಾನ್‌ಗೆ ಬದಲಾಯಿಸಬೇಕಾಯಿತು. ಅಲ್ಲೂ PLO ಗೆರಿಲ್ಲಾಗಳು ಶಾಂತಿಯಿಂದ ಇರಲು ಬಿಡಲಿಲ್ಲ. ಏರಿಯಲ್ ಶೆರೂನ್ (ಈಗಿನ ಇಸ್ರೇಲಿ ಪ್ರಧಾನಿ) ನಾಯಕತ್ವದ ಸೈನ್ಯ ಶಾಬ್ರಾ ಮತ್ತು ಶೆಟ್ಟಿಲಾ ಪ್ಯಾಲೆಸ್ಟೇನ್ ನಿರಾಶ್ರಿತರ ಕ್ಯಾಂಪ್‌ನಲ್ಲಿ ಭಾರಿ ನರಮೇಧ ನಡೆಸಿದರು. ಆದ್ದರಿಂದ ಅರಾಫತ್ ಗೆರಿಲ್ಲಾ ಪಡೆ ಲೆಬನಾನ್ ಸಹ ಬಿಟ್ಟು 1982 ರಲ್ಲಿ ಟ್ಯೂನಿಸ್‌ಗೆ ಹೋಗಬೇಕಾಯಿತು.

1967 ರ ಯುದ್ಧದ ನಂತರ ಆಕ್ರಮಿಸಿದ ಅರಬ್ ಪ್ರದೇಶಗಳನ್ನು ತೆರವು ಮಾಡಬೇಕು ಎಂಬ ನಿರ್ಣಯವನ್ನು ಭದ್ರತಾ ಸಮಿತಿ ಅಂಗೀರಿಸಿತು. ಅದನ್ನು ಆಮೇಲೆ ಹಲವು ಬಾರಿ



ಪುನರುಚ್ಚರಿಸಿದೆ. ಅದನ್ನು ಅಮೆರಿಕ ವಿಟೋ ಮಾಡುತ್ತಾ ಬಂದಿದೆ. PLO ಅಮೆರಿಕದಿಂದ ಮಾತ್ರವಲ್ಲ, ಅರಬ್ ದೇಶಗಳ ಘಾತಕ ಸಹ ಎದುರಿಸಬೇಕಾಯಿತು. ಪ್ಯಾಲೆಸ್ಟೇನ್‌ನ ಅರಬ್ ಸೋದರರಿಗೆ ಆಶ್ವಾಸನೆಗಳ ಸುರಿಮಳೆಗೈದರು - ಈ ಅರಬ್ ಸರ್ಕಾರಗಳು. ಶಸ್ತ್ರಗಳು, ಹೋರಾಟಗಾರರು, ನಿರಾಶ್ರಿತರಿಗೆ ವಸತಿ - ಹೀಗೆ ಎಲ್ಲದರ ಆಶ್ವಾಸನೆ ಕೊಟ್ಟವು. ಆದರೆ ಅವು ಜಾರಿಗೆ ಬರಲೇ ಇಲ್ಲ ಅಥವಾ ತೀರಾ ಏನೂ ಸಾಲದೆ ಹೋಯಿತು. ಅಮೆರಿಕದ ಒತ್ತಡದ ಮೇರೆಗೆ ಈಜಿಪ್ಟ್, ಇಸ್ರೇಲ್ ಜತೆ ಮಾಡಿಕೊಂಡ ಕ್ಯಾಂಪ್-ಡೇವಿಡ್ ಒಪ್ಪಂದವಂತೂ ಪ್ಯಾಲೆಸ್ಟೇನ್ ಜನತೆಯ ಬೆನ್ನಿಗೆ ಚೂರಿ ಹಾಕಿದಂತಿತ್ತು.

ಇಂತಹ ಕಷ್ಟದ ಪರಿಸ್ಥಿತಿಯಲ್ಲಿ 1988 ರಲ್ಲಿ ಅರಾಫತ್ ಪ್ಯಾಲೆಸ್ಟೇನ್ನರ ಬೇಡಿಕೆಗಳನ್ನು ಸಾಕಷ್ಟು ಮಂದಗೊಳಿಸಬೇಕಾಯಿತು. ಅದಕ್ಕಾಗಿ ಅರಾಫತ್ ತೀವ್ರ ಖಂಡನೆ, ಟೀಕೆಗೆ ಗುರಿಯಾಗಬೇಕಾಯಿತು. PLO ದಲ್ಲಿ ತೀವ್ರ ಬಿರುಕು ಬಂತು, ಅರಾಫತ್‌ರ ಅಲ್ ಫತೆಹ್‌ನಲ್ಲೇ ಒಂದು ಬಣ ಅರಾಫತ್ ನಾಯಕತ್ವದ ವಿರುದ್ಧ ದಂಗೆ ಎದ್ದಿತು. ಐಕ್ಯತೆಗೆ ಅಪಾಯ ಎದುರಿಸಿದ ಆ ದಿನಗಳು PLO ಗೆ ಅತ್ಯಂತ ಕಷ್ಟದ ದಿನಗಳಾಗಿದ್ದವು. ಬಹಳ ಕಷ್ಟದಲ್ಲಿ PLO ಐಕ್ಯತೆ ಸಾಧಿಸಲು ಸಾಧ್ಯವಾಯಿತು. ಇಸ್ರೇಲ್ ಅಸ್ತಿತ್ವವನ್ನು ಪ್ಯಾಲೆಸ್ಟೇನ್ ಚಳುವಳಿ ಮಾನ್ಯತೆ ಮಾಡಿದರೂ, ಇಸ್ರೇಲ್ ಸ್ವಲ್ಪವೂ ಜಗ್ಗಲಿಲ್ಲ. ಆಮೇಲೆ ಓಸ್ಲೋನಲ್ಲಿ ಮಾಡಿಕೊಂಡು ಒಪ್ಪಂದವನ್ನು ಇಸ್ರೇಲ್ ಎಂದೂ ಜಾರಿಗೊಳಿಸುವ ಯೋಚನೆಯೇ ಹೊಂದಿರಲಿಲ್ಲ. ಹಲವು ಅರಬ್ ದೇಶಗಳಲ್ಲಿ ಚದುರಿ ಹೋಗಿರುವ ಪ್ಯಾಲೆಸ್ಟೇನ್ನರನ್ನು ತಾಯ್ನಾಡಿಗೆ ಮರಳಲು ಬಿಡಲಿಲ್ಲ. ಪ್ಯಾಲೆಸ್ಟೇನ್ ಪ್ರಾಧಿಕಾರ ಎಂದು ಗುರುತಿಸಲಾದ ಗಾಜಾ ಪಟ್ಟಿ ಮತ್ತು ಪಶ್ಚಿಮ ದಂಡೆಯ ಪ್ರದೇಶಗಳಲ್ಲಿ ಜನವರಿ 1996 ರಿಂದ ಅಸ್ತಿತ್ವಕ್ಕೆ ಬಂತು. ಆ ಪ್ರದೇಶಗಳಿಂದ ಇಸ್ರೇಲ್ ಮತ್ತು ಇಸ್ರೇಲ್‌ನಿಂದ ಆ ಪ್ರದೇಶಕ್ಕೆ ಹೋಗಲು ನಿರ್ಬಂಧಗಳನ್ನು ಹೇರಿ ಪ್ಯಾಲೆಸ್ಟೇನ್ನರನ್ನು ಆರ್ಥಿಕವಾಗಿ ಸಾಯಿಸುವ ಪ್ರಯತ್ನ ಮಾಡಿತು.

ಇಸ್ರೇಲಿನ ಝಿಯೋನಿಸ್ಟ್ (ಜ್ಯೂ ಮೂಲಭೂತವಾದ)ದ ಬರ್ಬರತೆ, ಬಾಂಬರ್ ಮತ್ತು ಟ್ಯಾಂಕುಗಳ ದಮನಚಕ್ರದ ವಿರುದ್ಧ ನಿಶ್ಶಸ್ತ್ರರಾಗಿ ಕಲ್ಲುಗಳಿಂದ ಪ್ರತಿರೋಧ ಒಡ್ಡುವ ಎರಡನೇ ಇಂತಿಫದಾ 2001 ರಲ್ಲಿ ಆರಂಭವಾಯಿತು. ಅದು ಆರಂಭವಾಗಿದ್ದು ಏರಿಯಲ್ ಶರೋನ್ (ಲೆಬನಾನ್‌ನಲ್ಲಿ ಶಾಬ್ರಾ ಮತ್ತು ಶೆಟ್ಟಿಲಾ ಕ್ಯಾಂಪ್‌ಗಳ ನರಮೇಧ ಮಾಡಿದ ಕುಖ್ಯಾತಿಯ) ನ ನೇರ ಪ್ರಚೋದನೆಯಿಂದ. ಜೆರೂಸಲೆಂನ ಅಲ್-ಅಕ್ಸ ಮಸೀದಿಗೆ ಬಲಪ್ರಯೋಗ ಮಾಡಿ ಪ್ರವೇಶ ಮಾಡಿದ್ದೆ ಈ ಪ್ರಚೋದನೆ. ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಗಾಳಿಗೆ ತೂರಿ, ಸಾಮ್ರಾಜ್ಯಶಾಹಿ ಕುಮ್ಮಕ್ಕಿನಿಂದ ಪ್ಯಾಲೆಸ್ಟೇನ್ ಪ್ರಾಧಿಕಾರದ ಅರಾಫತ್ ಆಫೀಸು ಇರುವ ರಮಲ್ಲಾ ಮುಖ್ಯ ಕಚೇರಿ ಮೇಲೆ ಬಾಂಬ್ ದಾಳಿ ನಡೆಸಿ ಅರಾಫತ್ ಕೊಲೆ ನಡೆಸಲು ಯತ್ನಿಸಿತು. ಇಸ್ರೇಲಿ ಮಂತ್ರಿಮಂಡಲ ಅರಾಫತ್‌ನನ್ನು 'ಅಧಿಕೃತ ವೈರಿ' ಎಂದು ಘೋಷಿಸಿ ಅವರ ಕೊಲೆಗೆ ಆಜ್ಞೆ ಹೊರಡಿಸಿತು. 40 ದಿನಗಳ ಕಾಲ ರಮಲ್ಲಾ ದಿಗ್ಬಂಧನ ಹೊರಿಸಿತು. ಬರಿಯ ಅಂತರ್ರಾಷ್ಟ್ರೀಯ

ಪುಟ 11 ಕ್ಕೆ



ಅರಾಫತ್‌ರೊಂದಿಗೆ ಸುರ್ಜಿತ್

"ಬದುಕೆಲ್ಲಾ ಗಾಯುಗಳು ಚಿಂದಮಾಮ - ಗುಂಡಿಗೆ ತುಂಬ ಗಾಯುಗಳು ಚಂದಮಾಮ" ಒತ್ತಾಸೆಯೊಂದಿಗೆ 2004'ರ ಜನಾದೇಶ ಹೊರಹೊಮ್ಮಿದೆ. ಚುನಾವಣೆಯಲ್ಲಿ ಮತ ಚಲಾ "ಉದ್ಯೋಗದ ಹಕ್ಕಿಗಾಗಿನಡೆ" ಆಗಿದೆ. ಈ ನಿಟ್ಟಿನಲ್ಲಿ ಯುಪಿಎ ಸರ್ಕಾರದ "ಗ್ರಾಮೀ ತಯಾರಾಗಿದೆ. ಪ್ರಸಕ್ತ ಬಿಕ್ಕಟ್ಟಿಗೆ ಇದು ಮೂಲಭೂತ ಪರಿಹಾರ ವಲ್ಲದಿದ್ದರೂ, ರಾಷ್ಟ್ರವನ್ನಾ ಅಗತ್ಯವಾಗಿ ಹಚ್ಚಲೆಬೇಕಾದ ಮುಲಾಮಿನಂತಿದೆ. ಈ ಕುರಿತ ಲೇಖನ....

ಉದ್ಯೋಗ ಭರವಸೆ ಕ

ಉದ್ಯೋಗದ ಹಕ್ಕಿನೆಡೆ

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಚನ್ನಪಟ್ಟಣ ದಾಟಿ ಮುಂದೆ ಸಾಗಿದಲ್ಲಿ ಮುಂಜಾನೆ ವೇಳೆ ಅಲ್ಲಲ್ಲಿ 5-10 ಜನರ ತಂಡ, ಮಂಕರಿ-ಗುದ್ದಲಿಯೊಂದಿಗೆ ಕಾದು ಕುಳಿತು, ಬಂದ ಲಾರಿಗೆಲ್ಲ ಕೈಹಾಕಿ ನಿಲ್ಲಿಸುವ ಪರಿಪಾಟಲಿನ ದೃಶ್ಯ 6 ತಿಂಗಳ ಹಿಂದೆ ಯಥೇಚ್ಛವಾಗಿತ್ತು. ಇಂದೂ ಸಹಾ ಇದು ನಡೆದೆ ಇದೆ. ಇವರು ಮಳವಳ್ಳಿ, ಮದ್ದೂರು, ಮಂಡ್ಯ ತಾಲ್ಲೂಕಿನವರು. ಮರಳು ತುಂಬಿಕೊಳ್ಳಲು ಬರುವ ಲಾರಿಗಳಿಗೆ ಅಡ್ಡ ಹಾಕುವುದು ಅತಿ ಕಡಿಮೆ ಹಣಕ್ಕೆ ಮರಳನ್ನು ತುಂಬಿಕೊಡುತ್ತೇವೆ. ದಯುವಿಟ್ಟು ನಮ್ಮನ್ನು ಹತ್ತಿಸಿಕೊಳ್ಳಿ ಎಂದು ಅಂಗಲಾಚುವುದು. ಇದು ಪೈಪೋಟಿಯೊಂದಿಗೆ ನಡೆಯುತ್ತಿದೆ. ಚನ್ನಪಟ್ಟಣ ದಾಟಿದರೆ ಪ್ರತಿ ಐದು ಕಿ.ಮಿಗೆ ಒಂದು ಇಂತಹ ಗುಂಪು ಸಿಗುತ್ತವೆ. ಬೆಳಿಗ್ಗೆ 5.00 ಗಂಟೆಗೆಲ್ಲಾ ಅವರು ಮರಳು ಲಾರಿಗಾಗಿ ಕಾಯುವ ಕಾಯಕ ಆರಂಭ. ಲಾರಿಗೆ ಮೊದಲು ಸಿಕ್ಕಿದ ಗುಂಪು ಅತಿ ಕಡಿಮೆ ಹಣ ಕೇಳುತ್ತಿತ್ತು. ಅದಕ್ಕಾಗಿ ಊರಿನಿಂದ 10-20 ಕಿ.ಮೀ ಬೆಂಗಳೂರು ಕಡೆಗೆ ದಾವಿಸಿ ಬಂದು ಕಾಯುತ್ತಾರೆ.

ಅಂತೆಯೇ ಬೆಂಗಳೂರಿನ ಹೊಸೂರು ರಸ್ತೆಯುಲ್ಲಿರುವ ಸ್ಲಂನಂತಹ ಒಂದು ಏರಿಯಾಗೆ ತನ್ನ ಸಂಘದ ಸಂಗಾತಿಯೊಬ್ಬರನ್ನು ಹುಡುಕಿಬಂದವರೊಬ್ಬರು, ಏರಿಯಾದೊಳಗೆ ಹೋಗಿ "ಇಲ್ಲಿ ಮಳವಳ್ಳಿಯುವರು ಒಬ್ಬರು ವಾಸಿಸಿದ್ದಾರೆ. ಇನ್ನು ಹುಡುಗ ಅವನ ಮನೆ ಗೊತ್ತಾ?" ಎಂದು ಕೇಳಿದೊಡನೆ ಬಂದ ಉತ್ತರ-ಗೌಡ್ರೆ, ಇಡೀ ಈ ಬೀದಿಲಿ ಇರೋರೆಲ್ಲಾ ಮಳವಳ್ಳಿಯವರೇ ಅವರ ಊರು-ಹೆಸರು ಹೇಳಿ ತೋರಿಸ್ತೀವಿ ಎಂಬುದು. ಹೆಸರು-ಊರು ಹೇಳಿದೊಡನೆ ತೋರಿಸಿದ ಮಾತ್ರವಲ್ಲ - ನಾನು ಮಳವಳ್ಳಿಯವನೆ ಏನಾಗಬೇಕಿತ್ತು? ಎಂದ. ಮನೆ ಹತ್ತಿರ ಹೋದೊಡನೆ ಕಾಮ್ರೇಡ್ ಅಂತಹ ಬಂದ ಹುಡುಗ, ಬನ್ನಿ ಬನ್ನಿ ಎಂದ. ಮನೆಗೆ ಬೀಗ ಹಾಕಿಕೊಂಡು ಹೀಗೆ ಬಂದು ಬಿಡೋದ? ಎಂದರೆ. ಏನ್ಮಾಡೋದು ಕಾಮ್ರೇಡ್ ಕೆಲಸ ಇಲ್ಲ, ಹೊಲದಲ್ಲಿ ಬೆಳೆ ಇಲ್ಲ, ಮಾಡಿದ ಸಾಲ, ಊಟ- ಬಟ್ಟೆ ಹಿಂಗೆ ಮಾಡ್ಬುತ್ತೆ ಎಂದ. ಯಾವುದೋ ಕಾರ್ಖಾನೆಯಲ್ಲಿ ವಾಚ್‌ಮೆನ್ ಆಗೀನಿ, ಇಲ್ಲಿರೋರೆಲ್ಲಾ ನಮ್ಮ ಕಡೆಯೋರೆ, ಕರೀಲಾ ಎಂದವನೆ ಎಲ್ಲರನ್ನು ಕರೆದ. 5 ನಿಮಿಷದಲ್ಲಿ 20-30 ಯುವಕರು ಬಂದು ಕೂತರು. ಚರಂಡಿ ತೋಡೋದು, ರಸ್ತೆ ಕೆಲಸ, ವಾಚ್‌ಮೆನ್ ಕೆಲಸ, ಬಿಲ್ಡಿಂಗ್-ಕಟ್ಟಡ ಕೆಲಸ, ಕಾರ್ಖಾನೆ ಮುಂದಿನ ಹುಲ್ಲು ಹಾಸು-ನೋಡಿಕೊಳ್ಳುವ ಕೆಲಸ, ಹೋಟೆಲ್‌ಗಳಲ್ಲಿ ಸಪ್ಲಯರ್ ಮುಂತಾದ ಕೆಲಸ ಮಾಡಿಕೊಂಡೀವಿ. ಊರಲ್ಲೂ ಇದೇ ಕೆಲ್ಸ ಸಿಕ್ಕಿದ್ದರೆ ನಾವ್ಯಾಕೆ ಇಲ್ಲಿಗೆ ಬರೋವಿ ಎಂಬುದು ಎಲ್ಲರೊಳಗಿನ ನೋವಿನ ನುಡಿ.

ದೂರದ ಕೊಪ್ಪಳದ ಸ್ಲಂ ಒಂದರಲ್ಲಿ ಸಕ್ರಿಯವಾಗಿದ್ದ ಕಾರ್ಯಕರ್ತ ಬಿಟಿಎಸ್ ಬಸ್ಸಿನಲ್ಲಿ ಸಿಕ್ಕ, ಏನಪ್ಪ ಇಲ್ಲಿ? ಎಂದರೆ ಕಾಮ್ರೇಡ್ ನಾ ಬಂದಾಗಲೇ ತಿಂಗಳಾಯ್ತು. ಕಸಬರಕೆ ಮಾರುತ್ತಿದ್ದೇನೆ. ತುಮಕೂರು ರಸ್ತೆಯ ನೆಲಮಂಗಲ ಕ್ರಾಸ್ ಬಳಿ ದಾಬಾ ಹಿಂದೆ ಸರ್ಕಾರಿ ಜಾಗದಲ್ಲಿ ಗುಡಿಸಲು ಹಾಕಿಕೊಂಡಿದ್ದೇವೆ. 20-30 ಮಂದಿ ಬಂದಿದ್ದೇವೆ. ಕಸಬರಿಕೆ (ಪೊರಕೆ) ಮಾರಿ ಸ್ವಲ್ಪ ದುಡ್ಡು ಮಾಡಿಕೊಂಡು ವಾಪಸ್ಸು ಹೋಗುತ್ತೇವೆ ಎಂದ.


ಉದ್ಯೋಗದ ಹುಡುಕಾಟದ ಓಟ

ಗುಲ್ಬರ್ಗಾ- ರಾಯಚೂರಿನಿಂದ ಉದ್ಯಾನ್ ಜನರಲ್ ಬೋಗಿ ಹತ್ತಿದರೆ ಬೋಗಿ ತುಂಬ ಊರಿಗೆ-ಊರೆ ಪಾತ್ರೆ-ಪಂಗಡ ಮಕ್ಕಳು-ಮರಿ, ಜೋಳದ ಮೂಟೆಯೊಂದಿಗೆ ಬೆಂಗಳೂರಿಗೆ ಬರುವ ನೂರಾರು ಮಂದಿಯು ಬವಣೆ ಕಣ್ಣಿಗೆ ರಾಚುತ್ತದೆ. ಬೆಂಗಳೂರಿಗೆ ಬಂದು ಚರಂಡಿ ತೊಡುವ, ಕಟ್ಟಡ ಕಟ್ಟುವ ಕೆಲಸದಲ್ಲಿ ಸ್ವಲ್ಪ ದುಡ್ಡು ಸಿಕ್ಕಿತು, ಬದುಕು ಉಳಿದೀತು ಎಂಬ ಆಸೆ ಅವರದು. ಬಂದವರಲ್ಲಿ ಕೆಲವರು ಹೆಣವಾಗೆ ವಾಪಸ್ಸಾಗುವುದು. ಚರಂಡಿ ತೊಡುವಾಗ ಮಣ್ಣು ಕುಸಿದು ಸತ್ತರು ಎಂಬ ಸುದ್ದಿಗಳು ಆಗಿಂದಾಗ್ಗೆ ಬರುತ್ತವೆಯಲ್ಲ. ಅಲ್ಲೆಲ್ಲಾ ಹೆಣವಾವಾಗುವವರು ಇವರೆ.


ಕಮಲಾಪುರ ತಾಂಡಾಗಳಲ್ಲಿ ಕನಿಷ್ಠ ಅರ್ಧಕ್ಕರ್ಧ ತಾಂಡಾಗಳ ಗಂಡಸರು ಮುಂಬಾಯಿಗೆ ಹೋಗಿದ್ದಾರೆ. ದುಡಿಮೆಗಾಗಿ ಎಂಬುದು ಇತ್ತೀಚಿನ ಚುನಾವಣೆಗಳ ಸಮಯದಲ್ಲಿ ಅರಿವಿಗೆ ಬಂದಿದ್ದ ವಿಷಯು. ಅಂತೆಯೇ ಹೈದರಾಬಾದ್ ಹತ್ತಿರದ ಕರ್ನಾಟಕದ ಜಿಲ್ಲೆಗಳಿಂದ ಹೈದರಾಬಾದ್‌ಗೆ ಮುಂಬಯಿ, ಬೆಂಗಳೂರು, ಮಂಗಳೂರಿಗೆ ವರ್ಷವಿಡಿ ಗುಳೆ ಹೋಗುವ ಮಂದಿ ಹತ್ತಾರು ಸಾವಿರಾರು.

ಪಕ್ಕದ ಕೇರಳಕ್ಕೆ ನಾಟಿ ಹಾಗೂ ಕುಯ್ಯಲು ಸಮಯದಲ್ಲಿ ಗುಳೆ ಹೋಗುತ್ತೇವೆ. ಅದಾದ ನಂತರ ಊರಿಗೆ ಹಿಂತಿರುಗಿ ಕಾಡಿನಲ್ಲಿ ಗಾಂಜಾ ಬೆಳೆಯುತ್ತೇವೆ, ಕಳ್ಳಬಟ್ಟಿ ಕಾಯಿಸುತ್ತೇವೆ ಸಿಕ್ಕಿಬಿದ್ದರೆ ಜೈಲಲ್ಲಾದರೂ ಊಟ ಹಾಕುತ್ತಾರೆ ಬಿಡಿ! ಎನ್ನುವ ಹಂತಕ್ಕೆ ಕೊಳ್ಳೆಗಾಲದ ಕಾಡಂಚಿನ ತಾಂಡಾಗಳ ಕೆಲವು ಯುವಕರು ಮಾತನಾಡುತ್ತಾರೆ.

ಇವು ಗ್ರಾಮೀಣ ಕರ್ನಾಟಕದಲ್ಲಿನ ಯುವಜನರ ಬದುಕಿನ ಬವಣೆಗಳನ್ನು ತೊರುವ ಕೆಲವು ಘಟನೆಗಳು ಮಾತ್ರ. ಸ್ವತಂತ್ರ್ಯ ನಂತರದ ದೇಶದಲ್ಲಿನ ಸರ್ಕಾರಗಳ ನೀತಿ ಗ್ರಾಮೀಣ ಜನತೆಯನ್ನು ಈ ಹಂತಕ್ಕೆ ತಂದು ನಿಲ್ಲಿಸಿವೆ. ಇದರೊಂದಿಗೆ ಜಾಗತೀಕರಣ- ಉದಾರೀಕರಣ-ಖಾಸಗೀಕರಣ ಆಧಾರಿತ ವಿಶ್ವಬ್ಯಾಂಕ್-ಐಎಂಎಫ್ ನಿರ್ದೇಶಿತ ನೀತಿಗಳು ಕಳೆದೊಂದು ದಶಕದಲ್ಲಂತೂ ಗ್ರಾಮೀಣ ಜನತೆಯ ಬದುಕನ್ನು ಬಾಣಲಿಯಿಂದ ಬೆಂಕಿಗೆ ಎಸೆದಿವೆ.

ಕೆ.

ಕಳೆದ 6 ವರ್ಷಗಳ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ವಿಶ್ವವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ನಿಬಂಧನೆಗಳನ್ನು ಕಾಲಕ್ಕೆ ಮುಂಚಿತವಾಗಿಯೇ ಜಾರಿಗೆ ತರುವ ತರಾತುರಿಯಲ್ಲಿ ಅನುಸರಿಸಿದ ನೀತಿಗಳಂತೂ ಇಡೀ ಕೃಷಿಯನ್ನು ದಿವಾಳಿಗೊಳಿಸಿ ಕಾರ್ಷಿಕ ಬಿಕ್ಕಟ್ಟನ್ನು ಇನ್ನೂ ತೀವ್ರಗೊಳಿಸಿದೆ. ಪರಿಣಾಮವಾಗಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಸಿಗದೆ, ರೈತರು ಮಾಡಿದ ಸಾಲ ತೀರಿಸಲಾಗದೆ, ಬಡ್ಡಿ ಸಾಹುಕಾರರು ಮಾರ್ವಾಡಿಗಳ ಬಡ್ಡಿ ವ್ಯವಹಾರಕ್ಕೆ ಬಲಿಯಾಗಿ ನೇಣಿಗೆ ಶರಣಾಗಿ ಆತ್ಮಹತ್ಯೆಯು ಹಾದಿ ಹಿಡಿದಿದ್ದಾರೆ. ಇಂದಿಗೂ ಅದು ಕೆಲವೆಡೆ ಮುಂದುವರೆದಿದೆ. 1999-2000' ದ ನಡುವೆ ಆತ್ಮಹತ್ಯೆ ಮಾಡಿಕೊಂಡವರಲ್ಲಿ 10959 ರೈತರು-ಕೂಲಿಕಾರರಾಗಿದ್ದಾರೆ. ಇವರಲ್ಲಿ ಅರ್ಧದಷ್ಟು



ಕಾಯ್ದೆಯು- ಪ್ರಮುಖ ಅಂಶಗಳು

ಉದ್ಯೋಗದ ಹಕ್ಕು: ಶಾಸನಾತ್ಮಕ ಕನಿಷ್ಠ ವೇತನಕ್ಕೆ ದಿನಗೂಲಿಯಾಗಿ ದೈಹಿಕ ಕೆಲಸ ಮಾಡಬಯುಸುವ ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬದ ಒಬ್ಬ ವಯಸ್ಕ ಸದಸ್ಯರಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸದ ಹಕ್ಕು ಲಭ್ಯವಾಗುತ್ತದೆ. ಅರ್ಜಿ ಸಲ್ಲಿಸಿದ 15 ದಿನಗಳ ಒಳಗಾಗಿ ಕೆಲಸ ಒದಗಿಸುವುದು. ಪುರುಷರು ಹಾಗೂ ಮಹಿಳೆಯರಿಗೆ ಸಮಾನ ವೇತನ ನೀಡುವುದು. ಕೆಲಸ ಮಾಡಿದ 7 ದಿನಗಳ ಒಳಗೆ ಕೂಲಿಯುನ್ನು ಬಹಿರಂಗವಾಗಿ ಸಮುದಾಯದ ಎದುರು ನೀಡತಕ್ಕದ್ದು. ಬ್ಲಾಕ್ ವ್ಯಾಪ್ತಿಯಲ್ಲೇ ಕೆಲಸ ಒದಗಿಸುವುದು. ಕೆಲಸದ ಸ್ಥಳ ವಾಸಸ್ಥಳದಿಂದ 5 ಕಿ.ಮಿ ಗಿಂತ ಹೆಚ್ಚಿದಲ್ಲಿ ಅಗತ್ಯ ಪ್ರಯಾಣ ವ್ಯವಸ್ಥೆ ಕಲ್ಪಿಸತಕ್ಕದ್ದು ಹಾಗೂ ಪ್ರಯಾಣ ಭತ್ಯೆ ನೀಡುವುದು. ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಕೆಲಸ ಒದಗಿಸದಿದ್ದಲ್ಲಿ ಶಾಸನಾತ್ಮಕ ಕನಿಷ್ಠ ಕೂಲಿಯ ಕನಿಷ್ಠ ಒಂದನೇ ಮೂರರಷ್ಟು ಭಾಗದ ಹಣವನ್ನು ನಿರುದ್ಯೋಗ ಭತ್ಯೆಯಾಗಿ ನೀಡಬೇಕು.

ಸುರಕ್ಷಿತ ಕುಡಿಯುವ ನೀರು, ತುರ್ತು ಆರೋಗ್ಯ ಸೌಲಭ್ಯ, ಮಹಿಳಾ ಕೆಲಸಗಾರರ ಮಕ್ಕಳ ನೋಡಿಕೊಳ್ಳಲು ಕ್ರೀಚ್, ಅಫಘಾತ ಅಥವಾ ಸಾವು ಸಂಭವಿಸಿದಲ್ಲಿ ಶಾಸನಾತ್ಮಕ ಪರಿಹಾರ ಒದಗಿಸತಕ್ಕದ್ದು. ಪ್ರತಿಯೊಬ್ಬ ಅರ್ಜಿದಾರರಿಗೂ ದಿನಾಂಕ ಹಾಗೂ ಫೋಟೋದೊಂದಿಗೆ "ಉದ್ಯೋಗ ಕಾರ್ಡ್" (JOB CARD) ನೀಡಬೇಕು. ಕುಟುಂಬದ ಇತರೆ ಸದಸ್ಯರು ಸಹಾ ಇದೆ ಕಾರ್ಡನ್ನು ಬಳಸಬಹುದು. ಕಾರ್ಮಿಕ ಕಾನೂನುಗಳಾದ ವೇತನ ನೀಡಿಕೆ ಕಾಯ್ದೆ, ಕಾರ್ಮಿಕ ಪರಿಹಾರ ಕಾಯ್ದೆ, ಸಮಾನ ವೇತನ ಕಾಯ್ದೆ ಅನ್ವಯವಾಗಲಿವೆ.

ಕೆಲಸದ ಸ್ವರೂಪ : ಕಾಯ್ದೆಯುಡಿ ಕೈಗೊಳ್ಳಲಾಗುವ ಕೆಲಸವು ಉತ್ಪಾದಕವಾಗಿರಬೇಕು. ಉತ್ಪಾದನೆಯನ್ನು ಹೆಚ್ಚಿಸಲು ನೇರವಾಗಿ ಅಥವಾ ಪರೋಕ್ಷವಾಗಿ ಈ ಕೆಲಸವು ಕೊಡುಗೆ ನೀಡಬೇಕು. ಬಾಳಿಕೆ ಬರುವ ಆಸ್ತಿ ನಿರ್ಮಿಸಲು, ಸಾರ್ವಜನಿಕ ಸೇವೆ ಅಥವಾ ಬಳಕೆಗೆ ಬರುವ ಆಸ್ತಿಗಳನ್ನು ನಿರ್ಮಿಸುವುದು. ಜೀವನ ಮಟ್ಟ ಹೆಚ್ಚಿಸಲು ಹಾಗೂ ಪರಿಸರ ರಕ್ಷಣೆಗೆ ಈ ನಿರ್ಮಾಣಗಳು / ಕೆಲಸಗಳು ಕೊಡುಗೆ ನೀಡಬೇಕು.

ಗುತ್ತಿಗೆದಾರರು: ಈ ಯೋಜನೆ ಜಾರಿಗೊಳಿಸುವ ಗ್ರಾಮ ಪಂಚಾಯತಿಗಳು ಗುತ್ತಿಗೆದಾರರನ್ನು ಬಳಸಬಾರದು. ಅತಿ ಅಗತ್ಯವಿದ್ದಲ್ಲಿ ಅಂತಹ ಕೆಲಸಗಳ ಪಟ್ಟಿಯುನ್ನು ಸರ್ಕಾರಗಳು ಮಾಡತಕ್ಕದ್ದು. ಗುತ್ತಿಗೆದಾರರನ್ನು ಬಳಸಿದ ಕೆಲಸದಲ್ಲೂ ಸಹ ಗ್ರಾಮ ಪಂಚಾಯುತಿಗಳೇ ನೇರವಾಗಿ ಬಹಿರಂಗವಾಗಿ ಸಮುದಾಯದ ಮುಂದೆ ಕೂಲಿಯನ್ನು ನೀಡತಕ್ಕದ್ದು.

ಹಣಕಾಸು : ರಾಷ್ಟ್ರೀಯ ಉದ್ಯೋಗ ಭರವಸೆ ನಿಧಿಯಿಂದ ಕೇಂದ್ರ ಸರ್ಕಾರವು ವೇತನವನ್ನು ನೀಡಲಿದೆ. ಆಡಳಿತಾತ್ಮಕ ವೆಚ್ಚ ಹಾಗೂ ಆಹಾರಸಾಮಗ್ರಿ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮಾನವಾಗಿ ಭರಿಸತಕ್ಕದ್ದು. ನಿರುದ್ಯೋಗ ಭತ್ಯೆಯು ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕು.

ವಿಕೇಂದ್ರಿಕೃತ ಯೋಜನೆ, ಪಾರದರ್ಶಕತೆ: ಕನಿಷ್ಠ ಶೇ.50 ರಷ್ಟು ಹಣವನ್ನು ಗ್ರಾಮ ಪಂಚಾಯತಿಗಳಿಗೆ ಯೋಜನೆ ಅನುಷ್ಠಾನಕ್ಕೆ ನೀಡತಕ್ಕದ್ದು. ಗ್ರಾಮಮಟ್ಟದ ಕೆಲಸಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲೇ ಯೋಜಿಸಿ-ಜಾರಿಗೊಳಿಸತಕ್ಕದ್ದು, ಗ್ರಾಮ ಸಭೆಗಳ ತೀರ್ಮಾನಗಳ ಆಧಾರದಲ್ಲಿ ಇದನ್ನು ನಡೆಸತಕ್ಕದ್ದು. ಅರ್ಜಿದಾರರ ಪಟ್ಟಿ, ನೀಡಲಾದ ಕೆಲಸದ ದಿನಗಳು, ನೀಡಲಾದ ವೇತನ, ಉದ್ಯೋಗ ಕಾರ್ಡ್‌ಗಳ ಸಮರ್ಪಕ ನಿರ್ವಹಣೆ ಮುಂತಾದವನ್ನು ಪಾರದರ್ಶಕವಾಗಿ ಇಡತಕ್ಕದ್ದು.

ನಿರ್ವಹಣೆ ಮತ್ತು ಕುಂದುಕೊರತೆ: ಇಡೀ ಯೋಜನೆಯ ನಿರ್ವಹಣೆಯನ್ನು ಕೇಂದ್ರದಲ್ಲಿ ಕೇಂದ್ರೀಯ ಉದ್ಯೋಗ ಭರವಸೆ ಮಂಡಳಿ ನೇತೃತ್ವದಲ್ಲಿ ಹಾಗೂ ರಾಜ್ಯದಲ್ಲಿ ರಾಜ್ಯ ಉದ್ಯೋಗ ಭರವಸೆ ಮಂಡಳಿ ನೇತೃತ್ವದಲ್ಲಿ ನಡೆಸತಕ್ಕದ್ದು. ಇದರ ಜಾರಿಗೆ ಕ್ರಮವಹಿಸದ ಅಧಿಕಾರಿಗಳ ಮೇಲೆ ಅಥವಾ ದುರುಪಯೋಗ ಪಡಿಸುವವರ ಮೇಲೆ ಅಗತ್ಯ ಕಾನೂನು ಕ್ರಮ ವಹಿಸಲು ಅಗತ್ಯ ಅರೆ ನ್ಯಾಯಿಕ ಮಂಡಳಿಗಳನ್ನು ರಚಿಸುವುದು.

ವ್ಯಾಪ್ತಿ ಮತ್ತು ಕಾಲಮಿತಿ: ಹೆಚ್ಚು ಬಡತನ ಹೊಂದಿರುವ ಆಧ್ಯತೆಯು ಜಿಲ್ಲೆಗಳ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಮೊದಲು ಜಾರಿಗೊಳಿಸಿ ಆನಂತರ ಕಾಯ್ದೆ ಜಾರಿಗೆ ಬಂದ 5 ವರ್ಷಗಳಲ್ಲಿ ಇಡೀ ಭಾರತದ ಎಲ್ಲಾ ಜಿಲ್ಲೆಗಳಿಗೆ ಇದನ್ನು ಜಾರಿಗೊಳಿಸುವುದು. ಗ್ರಾಮೀಣ ಪ್ರದೇಶಗಳ ವ್ಯಾಪ್ತಿಗೆ ಬಿ ಮತ್ತು ಸಿ ವರ್ಗದ ಮುನ್ಸಿಪಾಲಿಟೀಸ್‌ಗಳು ಸಹ ಒಳಪಟ್ಟಿವೆ.

ಬದುಕಿನ ಬವಣೆಗಳಿಗೆ ಪರಿಹಾರ ಬೇಕೆಂಬ
ಶೇ.54 ರಷ್ಟಿದ್ದ ಯುವಜನತೆಯ ಒತ್ತಾಯ
ಗ ಭರವಸೆ ಕಾಯ್ದೆ - 2004" ರ ಕರಡು
ಳ ನೀತಿಗಳು ಸೃಷ್ಟಿಸಿದ ಬದುಕಿನ ಗಾಯಗಳಿಗೆ

- 2002

ಂದು ಭರವಸೆಯ ಹೆಜ್ಜೆ


ಯುವಜನರು.

1998-99 ರಲ್ಲಿ ರಾಜ್ಯದ ರೇಷ್ಮೆ ಕೃಷಿಯೊಂದರಲ್ಲೇ ತೊಡಗಿದ್ದ 18 ಲಕ್ಷದ 60 ಸಾವಿರ ಜನರ ಸಂಖ್ಯೆ 2002-03 ರಲ್ಲಿ 11 ಲಕ್ಷ 60 ಸಾವಿರಕ್ಕೆ ಇಳಿದಿದೆ ಎಂಬುದು ರಾಜ್ಯ ಸರ್ಕಾರದ ಅಧಿಕೃತ ಅಂಕಿಸಂಖ್ಯೆಗಳು ತೋರುವ ಅಂಶ. ಅಂತೆಯೇ ಕೇಂದ್ರ ಸರ್ಕಾರದ ಸ್ವರ್ಣಜಯಂತಿ ಗ್ರಾಮೀಣ ಸ್ವರೋಜಗಾರ್ ಯೋಜನೆಯಡಿ ರಾಜ್ಯದಲ್ಲಿ ನೀಡಲಾದ ಸಾಲದ ಮೊತ್ತ ಹಾಗೂ ಫಲಾನುಭವಿಗಳ ಸಂಖ್ಯೆಯು ಎನ್‌ಡಿಎ ಸರ್ಕಾರದ ಆಡಳಿತಾವಧಿಯಲ್ಲಿ ಕುಸಿದಿದೆ. 94690 ಫಲಾನುಭವಿಗಳಿಗೆ ಈ ಯೋಜನೆಯಡಿ 1988 ರಲ್ಲಿ ಸಾಲ ನೀಡಲಾಗಿದ್ದರೆ 2002 ರಲ್ಲಿ ಕೇವಲ 49940 ಜನರಿಗೆ ಮಾತ್ರ ಸಾಲ ನೀಡಲಾಗಿದೆ.

ಈ ನೀತಿಗಳಿಂದಾಗಿ ಜನತೆ ಅನುಭವಿಸಿದ ಸಂಕಷ್ಟದ, ಬವಣೆಯ ಮೂರ್ತ ರೂಪವಾಗಿ 2004'ರ ಚುನಾವಣೆಗಳ ಜನಾದೇಶ ಹೊರಹೊಮ್ಮಿದೆ. ಪರಿಣಾಮವಾಗಿ ಕೇಂದ್ರ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳೆರಡನ್ನು ಜನತೆ ಸೋಲಿಸಿದ್ದಾರೆ. ವರ್ಷಕ್ಕೆ ಒಂದು ಕೋಟಿ ಉದ್ಯೋಗದ ಭರವಸೆ ನೀಡಿದ ವಾಜಪೇಯಿ ಸರ್ಕಾರ ದೇಶಾದ್ಯಂತ ಕೋಟಿ-ಕೋಟಿ ಜನರ ಉದ್ಯೋಗಹರಣ ಮಾಡಿ ಬದುಕನ್ನು ಬರಬಾದ್ ಮಾಡಿದೆ ಎಂಬ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ.

2004'ರ ಜನಾದೇಶದ ಮೇರೆಗೆ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದಿರುವ ಎಡಪಕ್ಷಗಳ ಬೆಂಬಲಿತ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದ ಒಬ್ಬರಿಗೆ ವರ್ಷದಲ್ಲಿ 100 ದಿನಗಳ ಕೆಲಸ ಒದಗಿಸುವುದಾಗಿ ಪ್ರಕಟಿಸಿದೆ.

ಅದರ ಭಾಗವಾಗಿ ಕೇಂದ್ರ ಗ್ರಾಮೀಣ ಅಭಿವೃದ್ಧಿ ಸಚಿವಾಲಯವು ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ-2004" ರ ಕರಡನ್ನು ರೂಪಿಸಿ ಜನಾಭಿಪ್ರಾಯ ಸಂಗ್ರಹಣೆಗಾಗಿ ಪ್ರಕಟಿಸಿದೆ.



ಗುಳೆ ಹೊರಟ ಗ್ರಾಮೀಣ ಜನತೆ

ಸಂಸತ್ತಿನ ಬರಲಿರುವ ಚಳಿಗಾಲ ಅಧಿವೇಶನದಲ್ಲಿ ಅದನ್ನು ಮಂಡಿಸಿ ಅಂಗೀಕರಿಸುವ ಉದ್ದೇಶ ಸರ್ಕಾರದ್ದು. ಇದೇ ಒತ್ತಾಯವನ್ನು ಸಿಪಿಐ(ಎಂ) ಹಾಗೂ ಎಡ ಪಕ್ಷಗಳು ಮಾಡುತ್ತಿವೆ. ಒಂದಲ್ಲೊಂದು ಕಾರಣ ನೀಡಿ ಅಧಿವೇಶನ ನಡೆಯದಂತೆ ಮಾಡುತ್ತಿರುವ ಬಿಜೆಪಿ ಮತ್ತು ಇತರೆ ಎನ್‌ಡಿಎ ಮೈತ್ರಿಕೂಟದ ಪಕ್ಷಗಳು ಈ ಅಧಿವೇಶನವನ್ನು ಈ ಹಿಂದಿನಂತೆ ನಡೆಯದಂತೆ ಮಾಡಿದಲ್ಲಿ ಗ್ರಾಮೀಣ ಯುವ ಜನತೆಯ ಉದ್ಯೋಗದ ಹಕ್ಕಿನೆಡೆಗಿನ ಒಂದು ಭರವಸೆಯ ಹೆಜ್ಜೆಯಾದ "ಉದ್ಯೋಗ ಭರವಸೆ ಕಾಯ್ದೆ -2004" ಅನ್ನು ಸಂಸತ್ತು ಅಂಗೀಕರಿಸದಂತೆ ಮಾಡಲಿದೆ. ಈ ಕುರಿತು ಎಲ್ಲಾ ಜನಪರ ಶಕ್ತಿಗಳು ಎಚ್ಚರಿಕೆಯಿಂದ, ಇಂತಹ ಕುತಂತ್ರಗಳನ್ನು ಸೋಲಿಸಲು ಸನ್ನದ್ಧಾಗಬೇಕಿದೆ. ಉದ್ಯೋಗ ಭರವಸೆ ಕಾಯ್ದೆಯ ಅಂಗೀಕಾರ ಹಾಗೂ ಜಾರಿಗಾಗಿನ ಹೋರಾಟವನ್ನು ತೀವ್ರಗೊಳಿಸಬೇಕಿದೆ.



ಕಾಯ್ದೆ ಕುರಿತು

ಪ್ರಸಕ್ತ ಸನ್ನಿವೇಶದಲ್ಲಿ ನವ ಉದಾರವಾದಿ ನೀತಿಗಳಿಗೆ ಪ್ರತಿರೋಧ ಒಡ್ಡಲು ಅಗತ್ಯವಿರುವ ಜನಸಮೂಹಗಳನ್ನು ಅಣಿನೆರೆಸಲು ಕಾಯ್ದೆಯು ಪ್ರಮುಖವಾದ ಸಾಧನ.

ಅರುಣ ರಾಯ್
ಸಾಮಾಜಿಕ ಕಾರ್ಯಕರ್ತರು

★

ಎಲ್‌ಪಿಜಿ ನೀತಿಗಳು ಹಾಗೂ ಉದ್ಯೋಗ ಭರವಸೆ ಮುಂತಾದ ಯೋಜನೆಗಳ ನಡುವೆ ಯಾವುದೇ ವಿರೋಧಾಭಾಸವಿಲ್ಲ. ಅದೇನಿದ್ದರೂ ಅಸಂಘಟಿತ ಗ್ರಾಮೀಣ ಕಾರ್ಮಿಕರು ಮತ್ತು ಸಣ್ಣ ವಿಭಾಗವಾದ ಸರ್ಕಾರಿ ನೌಕರರ ನಡುವೆ ಇದೆ. ಸರ್ಕಾರದಲ್ಲಿನ ಸಂಪನ್ಮೂಲದ ಕೊರತೆಯಿಂದಾಗಿ 6ನೇ ವೇತನ ಆಯೋಗವು ಇಡೀ ಉದ್ಯೋಗ ಭರವಸೆ ಕಾಯ್ದೆಯನ್ನು ಇಲ್ಲದಾಗಿಸಲಿದೆ. ಹಾಗಾಗಿ ಸರ್ಕಾರಿ ನೌಕರರು ಸೌಲಭ್ಯ ಮತ್ತು ಸಾರ್ವತ್ರಿಕ ಉದ್ಯೋಗ ಭರವಸೆ ನಡುವೆ ಆಯ್ಕೆ ಮಾಡಿಕೊಳ್ಳಬೇಕಿದೆ.

ಜೈರಾಮ್ ರಮೇಶ್
ಕಾಂಗ್ರೆಸ್(ಐ) ಮುಖಂಡರು

★

ಉದ್ಯೋಗ ಭರವಸೆ ಕಾಯ್ದೆ ಅಥವಾ ಸಂಘಟಿತ ನೌಕರರ ಸೌಲಭ್ಯ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಿ ಎಂಬ ವಾದ ಒಪ್ಪಲು ಸಾಧ್ಯವಿಲ್ಲ. ಸಂಘಟಿತರು ಮತ್ತು ಅಸಂಘಟಿತರು ಎಂಬ ವಾದ ಅಸಂಗತ. ಶ್ರೀಮಂತರಿಗೆ ತೆರಿಗೆ ವಿಧಿಸಿ ಇದನ್ನು ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಇದನ್ನು ಜಾರಿಗೊಳಿಸದಿದ್ದಲ್ಲಿ ಯುಪಿಎ ಸರ್ಕಾರಕ್ಕೆ ಲಭ್ಯವಾಗಿರುವ ಜನಾದೇಶಕ್ಕೆ ದ್ರೋಹಬಗೆದಂತಾಗುತ್ತದೆ. ಗ್ರಾಮೀಣ ಉದ್ಯೋಗ ಭರವಸೆಯೊಂದಿಗೆ ನಗರ ಉದ್ಯೋಗ ಭರವಸೆಯನ್ನು ಕೈಗೆತ್ತಿಕೊಳ್ಳಬೇಕು.

ಸೀತಾರಾಮ ಯೆಚೂರಿ
ಸಿಪಿಐ(ಎಂ) ಪಿ.ಬಿ.ಸದಸ್ಯರು

★

ಸ್ಥಳೀಯ ಹಂತದಲ್ಲಿರುವ ಪರಿಸ್ಥಿತಿಯ ಗಂಭೀರತೆಯನ್ನು ಯುಪಿಎ ಸರ್ಕಾರ ಅರ್ಥಮಾಡಿಕೊಂಡು, ಸಾರ್ವತ್ರಿಕ ಉದ್ಯೋಗ ಭರವಸೆ ಜಾರಿಗೊಳಿಸಬೇಕು.

ಡಿ.ರಾಜಾ
ಸಿಪಿಐ ಮುಖಂಡರು

★

ಸಾರ್ವತ್ರಿಕ ಉದ್ಯೋಗ ಭರವಸೆ ಯೋಜನೆಯು ಮಧ್ಯಮ ವರ್ಗದ ಮೇಲೆ ತೆರಿಗೆ ಹೊರೆಯನ್ನು ಹೊರಿಸಲಿದೆ ಎಂಬ ಮಾಧ್ಯಮಗಳ ವಾದ ಅರ್ಥಹೀನವಾದದ್ದು. ಶ್ರೀಮಂತರಿಗೆ ನೀಡುತ್ತಿರುವ ತೆರಿಗೆ ವಿನಾಯ್ತಿ ತಡೆದಲ್ಲಿ ಇಂತಹ ಅನೇಕ ಯೋಜನೆಗಳನ್ನು ಕೈಗೊಳ್ಳಬಹುದು. ಸರ್ಕಾರದ ಕೈಕಟ್ಟಿ ಹಾಕುವ ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ ಅತ್ಯಂತ ಅಪಾಯಕಾರಿ.

ಪ್ರೊ.ಜಯತಿ ಘೋಷ್
ಅರ್ಥಶಾಸ್ತ್ರಜ್ಞರು

★

ಕಾಯ್ದೆಯು ಸರಿದಾರಿಯಲ್ಲಿರುವ ಸರಿಯಾದ ಕ್ರಮ. ಅದರೆ ಇದೇ ಎಲ್ಲದಕ್ಕೂ ಪರಿಹಾರವಲ್ಲ. ಕುಟುಂಬದ ಪರಿಭಾಷೆಯನನು ಎಚ್ಚರಿಕೆಯಿಂದ ಮಾಡಬೇಕು. ದೊಡ್ಡ ಕುಟುಂಬಗಳು ಒಂದೇ ಅಡುಗೆ ಮನೆ ಹೊಂದಿರುವ ಕಾರಣ, ಅಂತಹವನ್ನು ಒಂದು ಕುಟುಂಬ ಎಂದು ಪರಿಗಣಿಸಿದಲ್ಲಿ ಇಡೀ ಯೋಜನೆ ನಿರರ್ಥಕವಾಗುತ್ತದೆ.

ಬೃಂದಾ ಕಾರಟ್
ಜೆ.ಎಂ.ಎಸ್.ಮುಖಂಡರು

★

ಮಹಿಳೆಯರನ್ನು ಯೋಜನೆಯಿಂದ ಹೊರಗುಳಿಸದಂತೆ ಎಚ್ಚರಿಕೆ ವಹಿಸಬೇಕು

ಸಾಬಾ ಫರೂಕಿ
ಸಾಮಾಜಿಕ ಕಾರ್ಯಕರ್ತರು

★

ಉದ್ಯೋಗ ಭರವಸೆಗೆ ಅಡ್ಡಿ ಉಂಟುಮಾಡುವ ಶಕ್ತಿಗಳನ್ನು ಗುರುತಿಸಿ ಪ್ರತಿರೋಧಿಸಬೇಕು. ಯೋಜನೆಗೆ ಹಣವಿಲ್ಲದಿದ್ದರೆ ಗುರುತಿಸಿ ಪ್ರತಿರೋಧಿಸಬೇಕು, ಯೋಜನೆಗೆ ಹಣವಿಲ್ಲದಿದ್ದರೆ ಹಣ ನೀಡುತ್ತೇವೆ ಎಂಬ ಪ್ರಸ್ತಾಪ ವಿಶ್ವಬ್ಯಾಂಕ್‌ನಿಂದಲು ಬರಬಹುದು. ಆ ಮೂಲಕ ತಮ್ಮ ಶರತ್ತುಗಳಿಗೆ ಜನಮನ್ನಣೆ ಪಡೆಯುವ ಯತ್ನವನ್ನು ಅದು ಮಾಡಲಿದೆ. ಇದರ ಬಗ್ಗೆ ಎಚ್ಚರವಿರಬೇಕು.

ಪ್ರೊ.ಪ್ರಭಾತ್ ಪಟ್ನಾಯಕ್
ಅರ್ಥಶಾಸ್ತ್ರಜ್ಞರು


★

ಉದ್ಯೋಗ ಭರವಸೆ ಕಾಯ್ದೆಯ ಸಮರ್ಪಕ ಜಾರಿಗೆ ವಿಕೇಂದ್ರೀಕೃತ ಯೋಜನೆ ಮತ್ತು ಭೂಮಿ ಹಾಗೂ ನೀರಿನ ನಿರ್ವಹಣೆಯನ್ನು ಜನತೆ ಮಾಡುವುದು ಅಗತ್ಯವಾಗಿದೆ.

ಮೇಧಾ ಪಾಟ್ಕರ್
ಸಾಮಾಜಿಕ ಕಾರ್ಯಕರ್ತರು

ಕಾಯ್ದೆ ಕುರಿತ ಸಹಮತ್ ಸಮಾವೇಶ

ಉದ್ಯೋಗ ಭರವಸೆ ಕಾಯ್ದೆ ಕುರಿತು ಸಹಮತ್ ಸಂಘಟನೆಯು ದೆಹಲಿಯಲ್ಲಿ ಸಮಾವೇಶವನ್ನು ಸಂಘಟಿಸಿತ್ತು. ಅರ್ಜಿ ಸಲ್ಲಿಸಿದ ಎಲ್ಲರಿಗೂ ಬಯಸಿದಷ್ಟು ದಿನಗಳ ಕೆಲಸ ಒದಗಿಸಬೇಕು; ಕೆಲಸ ಒದಗಿಸದಿದ್ದಲ್ಲಿ ಶಾಸನಾತ್ಮಕ ಕನಿಷ್ಠ ಕೂಲಿಯ ಕನಿಷ್ಠ ಅರ್ಧದಷ್ಟು ಹಣವನ್ನು ನಿರುದ್ಯೋಗ ಭತ್ಯೆಯಾಗಿ ನೀಡಬೇಕು; ಪ್ರತಿ ಬ್ಲಾಕ್‌ನಲ್ಲೂ ಕನಿಷ್ಠ 40 ರಷ್ಟು ಮಹಿಳೆಯರಿಗೆ ಕೆಲಸ ಒದಗಿಸುವಂತಾಗಬೇಕು- ಅವರನ್ನು ಗಮನದಲ್ಲಿರಿಸಿ ಕೆಲಸಗಳನ್ನು ರೂಪಿಸಬೇಕು; ರಾಜ್ಯ ಸರ್ಕಾರಗಳ ಮೇಲೆ ಯೋಜನೆಯ ಹೊರೆಯನ್ನು ಹೇರಬಾರದು. ಕೇಂದ್ರ ಸರ್ಕಾರವೇ ಎಲ್ಲಾ ಹಣವನ್ನು ಕೇಂದ್ರೀಯ ಉದ್ಯೋಗ ಭರವಸೆ ಮಂಡಳಿ ಮೂಲಕ ರಾಜ್ಯ ಮಂಡಳಿಗಳಿಗೆ ನೀಡಬೇಕು; ಕನಿಷ್ಠ ಕೂಲಿಯನ್ನು ಆರಂಭದಲ್ಲಿ 66 ರೂಪಾಯಿಗಳೆಂದು ನಿಗದಿಗೊಳಿಸಿ, ಹಂತ-ಹಂತವಾಗಿ ಬೆಲೆ ಏರಿಕೆಗೆ ಅನುಗುಣವಾಗಿ ಅದನ್ನು ಹೆಚ್ಚಿಸಬೇಕು; ವೇತನ ಹಾಗೂ ಆಹಾರ ವೆಚ್ಚವನ್ನು 70:30 (ಕೂಲಿ: ಆಹಾರ) ಪ್ರಮಾಣದಲ್ಲಿ ಕೇಂದ್ರ ಸರ್ಕಾಜವೇ ಭರಿಸಬೇಕು; ಹಣ ನೀಡುವಲ್ಲಿ ಆಗುವ ವಿಳಂಭಾತಿಗೆ ಸೂಕ್ತ ನಿರುದ್ಯೋಗ ಭತ್ಯೆ ಹಣವನ್ನು ಕೇಂದ್ರ ಸರ್ಕಾರ ರಾಜ್ಯಗಳಿಗೆ ಭರಿಸಬೇಕು; ಆಡಳಿತಾತ್ಮಕ ವೆಚ್ಚಕ್ಕಾಗಿ ಒಟ್ಟಾರೆ ಅನುದಾನದ ಮೇಲೆ ಶೇ.5 ರಷ್ಟು ಹಣವನ್ನು ಹೆಚ್ಚುವರಿಯಾಗಿ ರಾಜ್ಯಗಳಿಗೆ ನೀಡಬೇಕು; ಕಾಯ್ದೆ ಅಂಗೀಕಾರಗೊಂಡ ಕೂಡಲೇ ರಾಷ್ಟ್ರದ ಒಂದನೆ ಮೂರರಷ್ಟು ಜಿಲ್ಲೆಗಳಲ್ಲಿ ಯೋಜನೆಯನ್ನು ಆರಂಭಿಕವಾಗಿ ಜಾರಿಗೊಳಿಸಿ-ಮೂರು ವರ್ಷದೊಳಗೆ ಇಡೀ ದೇಶಕ್ಕೆ ಯೋಜನೆಯನ್ನು ಜಾರಿಗೊಳಿಸಬೇಕು; ಕಾಯ್ದೆಯ ವ್ಯಾಪ್ತಿ ಗ್ರಾಮೀಣ ಪ್ರದೇಶಗಳಿಗೆ ಸೀಮಿತವಾಗಿರುವ ಕಾರಣ ಇಂತಹದೇ ಶಾಸನವನ್ನು ನಗರ ಪ್ರದೇಶಗಳಿಗೂ ಒಂದು ವರ್ಷದೊಳಗೆ ಮಂಡಿಸಬೇಕು; ಕಾಯ್ದೆಯ ಜಾರಿಯಿಂದಾಗಿ ಕೃಷಿ ವೇತನಗಳ ಮೇಲೆ ಪ್ರಭಾವ ಉಂಟಾಗಿ ಕೂಲಿಕಾರರ ಕೂಲಿ ಹೆಚ್ಚಳವಾಗಲಿರುವ ಕಾರಣ ಪ್ರಸಕ್ತ ಕಾರ್ಷಿಕ ಬಿಕ್ಕಟ್ಟನ್ನು ಗಮನದಲ್ಲಿರಿಸಿ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸುವ ಮೂಲಕ ರೈತರನ್ನು ರಕ್ಷಿಸಬೇಕು ಎಂಬ ಪ್ರಮುಖ ಅಂಶಗಳನ್ನು ಸಮಾವೇಶ ಒತ್ತಾಯಿಸಿದೆ. ಈ ಅಂಶಗಳ ಆಧಾರದಲ್ಲಿ ಸದರಿ ಕಾಯ್ದೆಯ ಕರಡಿನಲ್ಲಿ ತಿದ್ದುಪಡಿಗಳನ್ನು ಮಾಡಬೇಕೆಂದು ಸಮಾವೇಶ ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.



ಸಮಾವೇಶದಲ್ಲಿ ಯೆಚೂರಿ

ಎಡ ಮತ್ತು ಪರಿಸರ ಚಳುವಳಿಗಳು

ಶರತ್‌ಚಂದ್ರ

ಕೆಲವೇ ವರ್ಷಗಳ ಹಿಂದೆ ಇಂತಹ ತಲೆಬರಹ ನೋಡಿದರೆ ಆಶ್ಚರ್ಯವಾಗಿರಬಹುದು. ಈಗಲೂ ಹಲವರಿಗೆ ಆಶ್ಚರ್ಯವಾಗಬಹುದು. ಈ ಎರಡು ಚಳುವಳಿಗೆ ಎತ್ತಣ ಸಂಬಂಧ? ಪರಿಸರ ಚಳುವಳಿಗಳಲ್ಲಿ ಹಲವು ತೊರೆಗಳಿವೆ. 'ನರ್ಮದಾ ಬಚಾವೋ' ನಂತರ ಹಲವು 'ಬಡವರ-ಪರ ಪರಿಸರವಾದಿ'ಗಳು ಮತ್ತು ಎಡ ಚಳುವಳಿಗಳ ನಡುವೆ ಈಗ ಹಲವು ಜಂಟಿ ಹೋರಾಟಗಳು ನಡೆಯುತ್ತಿವೆ. ಜಾಗತೀಕರಣ-ಕೋಮುವಾದದ ವಿರುದ್ಧ ವ್ಯಾಪಕ ಕೂಟ ಕಟ್ಟುವ ಬಹಿರಂಗ ಚರ್ಚೆ ನಡೆದಿದೆ. ಈ ಸನ್ನಿವೇಶದಲ್ಲಿ 'ಎಡ ಮತ್ತು ಪರಿಸರ ಚಳುವಳಿಗಳು' - ಇಂದಿನ ಚರ್ಚೆಗಳು ಮತ್ತು ನಾಳಿನ ಅಜೆಂಡಾಗಳು' ಎಂಬುದು ಮಹತ್ವದ ಪುಸ್ತಕ. 'ಲೆಫ್ಟ್‌ವರ್ಡ್' ಪ್ರಕಟಿಸಿದ ಅರ್ಚನಾ ಪ್ರಸಾದ್ ಬರೆದಿರುವ ಈ ಪುಸ್ತಕ ಬಹಳ ಸಕಾಲವಾಗಿದೆ. ಎರಡು ಚಳುವಳಿಗಳ ನಡುವೆ ಸಮಾನ ಅಂಶಗಳು ಮತ್ತು ಭಿನ್ನಾಭಿಪ್ರಾಯಗಳ ಬಗ್ಗೆ ಜಂಟಿ-ಕಾರ್ಯಾಚರಣೆ ಸಾಧ್ಯತೆಗಳ ಬಗ್ಗೆ ತಿಳಿದುಕೊಳ್ಳಲು ಬಯಸುವವರು ಓದಲೇಬೇಕಾದ ಪುಸ್ತಕ. ಈ ಪುಸ್ತಕದ ಪರಿಚಯ ಇಲ್ಲಿದೆ.


ಪರಿಸರ ಚಳುವಳಿಯಲ್ಲಿ ಹಲವು ತೊರೆಗಳಿವೆ. 'ಸರ್ಕಾರಿ' ಪರಿಸರವಾದ, 'ಎನ್‌ಜಿಓ' ಪರಿಸರವಾದ, 'ಪ್ರತಿಷ್ಠಿತರ ಪರಿಸರವಾದ - ಹೀಗೆ ಹಲವು ಬಗೆ. ಹೆಚ್ಚಿನ ಪರಿಸರವಾದಗಳಲ್ಲಿ ಪ್ರಕೃತಿಗೆ ಪ್ರಾಧಾನ್ಯ. ಹೆಚ್ಚಾಗಿ ಮನುಷ್ಯನಿಗೆ - ಅದರಲ್ಲೂ ಬಡವರಿಗೆ, ಅವರ ಹಿತಾಸಕ್ತಿಗಳಿಗೆ ಇಲ್ಲಿ ಸ್ಥಾನ ಇಲ್ಲ. ಹೆಚ್ಚಿನವರಿಗೆ ಮನುಷ್ಯ ಪಕೃತಿ ಹಾಳುಗೆಡಹುವ ವಿಲನ್. ಅವರಿಗೆ ಅನುದಾನ ನೀಡುವ ಏಜೆನ್ಸಿಗೆ ಹೊಂದಿಕೊಂಡು, ಕೆಲವು ಪರಿಸರಕ್ಕೆ ಹಾನಿಕಾರಕ. ರೈಲಿಗೆ ಹಾದಿ ಮಾಡಿಕೊಡಲು ಮರ ಕಡಿಯುವುದು ಹಾನಿಕಾರಕ. ಆದರೆ ರಸ್ತೆಗಳು, ಅವುಗಳ ಮೇಲೆ ಹೊಗೆ ಉಗುಳುತ್ತಾ ಓಡಾಡುವ ಕಾರು-ವಾಹನಗಳ ಬಗ್ಗೆ ಮೌನವಾಗಿರುತ್ತಾರೆ. ತಾವು ವಿದ್ಯುತ್ ಬಳಸಿದರೂ, ವಿದ್ಯುತ್ ಸೇವೆ ಸಾರ್ವತ್ರಿಕಗೊಳಿಸುವ ದೊಡ್ಡ ಯೋಜನೆಗಳನ್ನು ವಿರೋಧಿಸುತ್ತಾರೆ. ಇದರ ಜತೆಗೆ ಈಗ ಇನ್ನೊಂದು ತೊರೆ ಹುಟ್ಟಿಕೊಂಡಿದೆ. ಇವರು ತಮ್ಮನ್ನು 'ಬಡವರ ಪರ ಪರಿಸರವಾದಿ'ಗಳು ಎಂದು ಕರೆದುಕೊಳ್ಳುತ್ತಾರೆ. ಇವರಲ್ಲಿ ಹಲವು ನವ-ಗಾಂಧಿವಾದಿಗಳು. ಕೆಲವರು ಬೇರೆ ಬೇರೆ ತೊರೆಗಳಿಂದ, ಚಳುವಳಿಗಳಿಂದ ಬಂದು ತಮ್ಮ ಅನುಭವದಿಂದ ಈ ನಿಲುವಿಗೆ ಬಂದವರು.

ಬಡವರ - ಪರ ಪರಿಸರವಾದ

ಮಾನವ ಬೆಳವಣಿಗೆಯ ಹಾದಿಯ ಚರ್ಚೆಯಲ್ಲಿ ಪರಿಸರ ತಾಳಿಕೊಳ್ಳುವ ಶಕ್ತಿ ಮತ್ತು ಸ್ಥಳೀಯರ ಜೀವನೋಪಾಯದ ಪ್ರಶ್ನೆಗೆ ಪ್ರಾಧಾನ್ಯತೆ ಕೊಡುವುದು ಇವರ ನಿಲುವು. 70 ರ ದಶಕದಲ್ಲಿ 'ಚಿಪ್ಕೊ ಚಳುವಳಿ' ಯಿಂದ ಆರಂಭವಾಗಿ ಹಲವು ಇಂತಹ ಸ್ಥಳೀಯ ಚಳುವಳಿಗಳಗಳ ಮೂಲಕ ಹಾದೂ, 'ನರ್ಮದಾ ಬಚಾವೋ' ಆಂದೋಲನದ ರೂಪದಲ್ಲಿ ದೇಶದ ಗಮನ ಸೆಳೆಯಿತು. ಈಗ ಚಳುವಳಿಗಳು ಸೇರಿ 'ಜನತಾ ಚಳುವಳಿಗಳ ರಾಷ್ಟ್ರೀಯ ಕೂಟ' ರಚಿಸಿಕೊಂಡಿವೆ. ಈ ಚಳುವಳಿ 'ಆಧುನಿಕ ಬೆಳವಣಿಗೆ'ಯನ್ನು ಸಾರಸಗಟಾಗಿ ತಿರಸ್ಕರಿಸಿ 'ಸ್ವಯಂ-ಪರಿಪೂರ್ಣ ಗ್ರಾಮೀಣ ಆರ್ಥಿಕ' ಕ್ಕೆ ಮರಳಬೇಕೆಂದು ಹೇಳುತ್ತದೆ. ಈ ಚಳುವಳಿ ಆದಿವಾಸಿ-ಗಿರಿಜನರು ಬಹುಸಂಖ್ಯಾತರಾಗಿರುವ ಪ್ರದೇಶಗಳಲ್ಲಿ ಹೆಚ್ಚು ಸಕ್ರಿಯವಾಗಿದೆ. 'ಹಿಂದಿನಿಂದ ಇದ್ದಂತೆ' ಎಲ್ಲಾ ಪ್ರಾಕೃತಿಕ ಸಂಪನ್ಮೂಲಗಳ 'ಸಾಮಾಜಿಕ ಒಡೆತನ ಮತ್ತು ಸಮಾನತೆ'ಯ ವ್ಯವಸ್ಥೆ ಅತ್ಯುತ್ತಮವಾದದ್ದು. ಅವ್ಯವಸ್ಥೆ ಪರಿಸರ ತಾಳಿಕೊಳ್ಳಬಲ್ಲ ವ್ಯವಸ್ಥೆ. ಅಲ್ಲಿಗೆ ಹಿಂದಿರುಗಬೇಕು. ಎಲ್ಲಾ ಆಧುನಿಕ ಬೆಳವಣಿಗೆಗಳನ್ನು ತಿರಸ್ಕರಿಸಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗಳು ಪರಿಸರ ತಾಳಿಕೊಳ್ಳಬಲ್ಲವು ಅಲ್ಲ ಮತ್ತು ಸಮಾನತೆ ಹೊಸಕಿ ಹಾಕುವಂಥ ಪ್ರಕೃತಿಯಲ್ಲಿ ಯಾವುದೇ ದೊಡ್ಡ ಪ್ರಮಾಣದ ಹಸ್ತಕ್ಷೇಪ ಅದಕ್ಕೆ ಹಾನಿಕಾರಕ. ಆದ್ದರಿಂದ ದೊಡ್ಡ ಅಣೆಕಟ್ಟುಗಳು, ಜಲವಿದ್ಯುತ್ ಯೋಜನೆಗಳು ಇವನ್ನೆಲ್ಲಾ ಸಾರಾಸಗಟಾಗಿ ವಿರೋಧಿಸುತ್ತಾರೆ. ಕೈಗಾರೀಕರಣ, ವಸಾಹತುಶಾಹಿ, ಸಾಮ್ರಾಜ್ಯಶಾಹಿ, ಸಮಾಜವಾದಿ ವ್ಯವಸ್ಥೆ - ಇವೆಲ್ಲವೂ ಒಂದೇ ಎಂದು ಪರಿಗಣಿಸುವ ಇವರು, ಪ್ರಾಕೃತಿಕ ಸಂಪನ್ಮೂಲಗಳನ್ನು ಸ್ಥಳೀಯ ಜನತೆಯಿಂದ ಕಿತ್ತುಕೊಂಡು ಆಧುನಿಕ ಕೈಗಾರಿಕೆಯ ಕಚ್ಚಾ ವಸ್ತು ಆಗಿಸುವುದು ಇವುಗಳ ಸಮಾನ ಗುಣ ಎನ್ನುತ್ತಾರೆ. ಆದ್ದರಿಂದ ಪ್ರಾಕೃತಿಕ ಸಂಪನ್ಮೂಲಗಳನ್ನು ಸ್ಥಳೀಯ ಜನತೆಯ ನಿಯಂತ್ರಣಕ್ಕೆ ವಾಪಸು ಮಾಡುವುದು ಪರಿಹಾರ ಎಂದು ಅವರ ವಾದ.

'ಇಂದಿನ ಚರ್ಚೆಗಳು ಮತ್ತು ನಾಳಿನ ಅಜೆಂಡಾಗಳು'

ಕೆಲವೇ ವರ್ಷಗಳ ಹಿಂದಿನವರೆಗೆ ಎಡ-ಚಳುವಳಿಯನ್ನು 'ಪರಿಸರ - ವಿರೋಧಿ' ಮತ್ತು ಬಂಡವಾಳಶಾಹಿ - ಸಾಮ್ರಾಜ್ಯಶಾಹಿಯ ಜತೆ ಪರಿಗಣಿಸುತ್ತಿದ್ದರು. ಆದರೆ ಇತ್ತೀಚೆಗೆ ಈ ಧೋರಣೆಯಲ್ಲಿ ಬದಲಾವಣೆ ಬಂದಿದೆ. ಬರಿಯ ಸ್ಥಳೀಯ ಪರಿಸರ ಚಳುವಳಿಯಿಂದ 'ಮಾನವ ಬೆಳವಣಿಗೆಗೆ ಬಂಡವಾಳಶಾಹಿಗೆ ಬದಲಿ ಹಾದಿ' ಶೋಧನೆಯತ್ತ ವಿಕಾಸದ ಅನುಭವ ಎಡ ಚಳುವಳಿಯನ್ನು ನೋಡುವ ದೃಷ್ಟಿಯಲ್ಲಿ ಬದಲಾವಣೆ ತಂದಿದೆ. ಹಲವು ಸ್ಥಳೀಯ ಜಂಟಿ ಚಳುವಳಿಗಳು ನಡೆದಿವೆ. 'ಏಶಿಯನ್ ಸೋಶಿಯಲ್ ಫೋರಂ', 'ವಿಶ್ವ ಸೋಶಿಯಲ್ ಫೋರಂ' ನ ವಿಶಾಲ ಕೂಟ ಕಟ್ಟುವ ಬಗ್ಗೆ ಜಂಟಿ ಪ್ರಯತ್ನಗಳು ನಡೆದಿವೆ. ಎಡ ಚಳುವಳಿ ಸಹ 'ಬಡವರ-ಪರಿಸರವಾದಿ'ಗಳ ಜತೆ ಜಂಟಿ ಚಳುವಳಿಯ ಸಾಧ್ಯತೆಗೆ ತೆರೆದುಕೊಂಡಿದೆ. ಬಂಡವಾಳಶಾಹಿಗೆ ಬದಲಿ ಬೆಳವಣಿಗೆಯ ಹುಡುಕಾಟದಲ್ಲಿ ಪರಿಸರ ತಾಳಿಕೊಳ್ಳುವ ಮಗ್ಗುಲಿಗೆ ಎಡ ಚಳುವಳಿಯಲ್ಲಿ ಕೊಡಬೇಕಾದ ಒತ್ತು ಕೊಡಹತ್ತಿದೆ. ಎಡ ಚಳುವಳಿಯ ನಾಯಕತ್ವದಲ್ಲಿರುವ ಜನ-ವಿಜ್ಞಾನ ಚಳುವಳಿಗಳು ಈ ಪ್ರಯತ್ನಕ್ಕೆ ರೂಪುಕೊಟ್ಟಿವೆ. ಜಂಟಿ ಕಾರ್ಯಾಚರಣೆಗೆ ಸಾಧ್ಯತೆ ಜತೆಗೆ, ಈ ಎರಡೂ ಚಳುವಳಿಗಳ ನಡುವೆ ಮೂಲಭೂತ ಭಿನ್ನಾಭಿಪ್ರಾಯಗಳೂ ಇವೆ. ಈ ಬಗ್ಗೆ ಅಪರೂಪದ ಪುಸ್ತಕ ಒಂದನ್ನು ದೆಹಲಿಯ 'ಲೆಫ್ಟ್ ವರ್ಡ್' ಪ್ರಕಟಿಸಿದೆ.




ಅರ್ಚನಾ ಪ್ರಸಾದ್ ಎಂಬ 'ನೆಹರೂ ಮೆಮೊರಿಯಲ್ ಮ್ಯೂಸಿಯಂ' ನ 'ಫೆಲೋ' ಆಗಿರುವ ತಜ್ಞೆ ಈ ಪುಸ್ತಕ ಬರೆದಿದ್ದಾರೆ. ಪುಸ್ತಕದ ತಲೆ ಬರಹ 'ಎಡ ಮತ್ತು ಪರಿಸರ ಚಳುವಳಿಗಳು - ಇಂದಿನ ಚರ್ಚೆಗಳು ಮತ್ತು ನಾಳಿನ ಅಜೆಂಡಾಗಳು'. ಈ ಎರಡು ಚಳುವಳಿಗಳ ನಡುವೆ ಸಮಾನ ಅಂಶಗಳು, ಮುಖ್ಯ ಭಿನ್ನಾಭಿಪ್ರಾಯಗಳು, ಅವುಗಳನ್ನು ಬಗೆಹರಿಸುವ ಬಗ್ಗೆ, ಜಂಟಿ - ಕಾರ್ಯಾಚರಣೆಗೆ ಬೇಕಾದ ಸಮಾನ-ಆಧಾರದ ಸಾಧ್ಯತೆ ಬಗ್ಗೆ-ಆಸಕ್ತಿ ಇರುವವರು ಓದಲೇಬೇಕಾದ ಪುಸ್ತಕ. ಪರಿಸರದ ಬಗ್ಗೆ ಎಡಚಳವಳಿಯ ಧೋರಣೆಗಳ ಬಗೆಗೂ ಸೊಗಸಾಗಿ ವಿವರಣೆ ಬಂದಿದೆ. ಪುಸ್ತಕ ಮುಖ್ಯವಾಗಿ ಆದಿವಾಸಿಗಳು ಮತ್ತು ಅವರು ಬಹುಸಂಖ್ಯಾತರಿರುವ ಪ್ರದೇಶಗಳ ಬೆಳವಣಿಗೆಯ ಬದಲಿ ಹಾದಿ ಬಗ್ಗೆ ಹೆಚ್ಚು ಒತ್ತು ಕೊಟ್ಟಿದೆ. ಆದರೂ ಒಟ್ಟಾರೆ ದೇಶದ ಬೆಳವಣಿಗೆಯ ಬದಲಿ ಹಾದಿಯಲ್ಲಿ ಬರುವ ಮುಖ್ಯ ಪ್ರಶ್ನೆಗಳಿಗೂ ಸ್ಪಂದಿಸುತ್ತದೆ.

ಆದಿವಾಸಿ ಭೂ-ಒಡೆತನ

ಪುಸ್ತಕದ ಮೊದಲ ಅಧ್ಯಾಯ ಆದಿವಾಸಿಗಳ ಭೂ-ಒಡೆತನದ ಹಕ್ಕಿನ ಬಗ್ಗೆ ಚರ್ಚಿಸುತ್ತದೆ. ಪರಿಸರ ಚಳುವಳಿಯ 'ಸಮುದಾಯ - ಒಡೆತನ'ದ ಮತ್ತು ಎಡ ಚಳುವಳಿಯ ವರ್ಗ-ಆಧಾರಿತ ಭೂ-ಸುಧಾರಣೆಯ ನೀತಿಗಳ ಬಗ್ಗೆ ವಿವರಿಸುತ್ತದೆ. ಆದಿವಾಸಿಗಳ ಭೂಮಿಯ ಪ್ರಶ್ನೆ ಬ್ರಿಟಿಷ್ ವಸಾಹತುಶಾಹಿಯ ಸಮಯದಲ್ಲಿ, ಮೊದಲು ಮತ್ತು ಆಮೇಲೆ ಮೂಡಿಬಂದ ರೀತಿಯನ್ನು ವಿವರಿಸುತ್ತಾ, ಆದಿವಾಸಿಗಳಿಗೆ ಭೂ-ಒಡೆತನ ಮರಳಿಸುವುದು ಹೇಗೆ ಎಂಬ ಬಗ್ಗೆ ಚರ್ಚಿಸುತ್ತದೆ. ವಸಾಹತುಶಾಹಿ ಮತ್ತು ಈಗಿನ ಸರ್ಕಾರ ಆದಿವಾಸಿಯ ಭೂಮಿ ಕಸಿದುಕೊಂಡು, ಇತ್ತೀಚಿನ ಕಾನೂನು ಪ್ರಕಾರ ತನ್ನ ಭೂಮಿಯ ಮೇಲೆ 'ಭೂಕಬಳಿಕೆ' ಯ ಆರೋಪಕ್ಕೆ ತುತ್ತಾಗಿದ್ದಾನೆ. ಎಡ-ಚಳುವಳಿ 'ಭೂಹೀನ' ಆದಿವಾಸಿಗಳಿಗೆ (ಬೇರೆ ಪ್ರದೇಶಗಳಂತೆ) ಭೂಮಿ ಹಂಚುವ ಭೂ-ಸುಧಾರಣೆಗೆ ಒತ್ತಾಯಿಸುತ್ತದೆ. ಇದು ವರ್ಗ-ಆಧಾರಿತ- ನೀತಿ. ಪರಿಸರ ಚಳುವಳಿ ವಸಾಹತುಶಾಹಿಗಿಂತ ಮೊದಲು ಇದ್ದ ಆದಿವಾಸಿ - ಸಮುದಾಯದ ಒಡೆತನ ಪುನಃ ಸ್ಥಾಪಿಸಬೇಕೆಂದು ಹೇಳುತ್ತದೆ. ಅದರ ಜತೆಗೆ ಆದಿವಾಸಿ-ಸಮುದಾಯದ 'ಪ್ರಾಚೀನ ರಾಜಕೀಯ - ಸಾಮಾಜಿಕ - ಸಾಂಸ್ಕೃತಿಕ ವ್ಯವಸ್ಥೆ'ಯನ್ನು ಪು ಸ್ಥಾಪಿಸಬೇಕು ಎಂದು ಹೇಳುತ್ತದೆ. ಸಮಾನ ಸಾಮೂಹಿಕ ಒಡೆತದ ಮೇಲೆ ಆದಿವಾಸಿ ಇಂದಿನ ವ್ಯವಸ್ಥೆ ಆಧಾರಿತವಾಗಿದೆ ಎಂದು ಚಳುವಳಿ ಒಪ್ಪುವುದಿಲ್ಲ. ಆದ್ದರಿಂದ 'ಭೂ-ಹೀನ ಯ ವರ್ಗ ಆಧಾರದ ಮೇಲೆ ಭೂಮಿ ಹಂ ಆಗಬೇಕು. ಅದರ ಜತೆಗೆ ಆದಿ ಬಹುಸಂಖ್ಯಾತ ಪ್ರದೇಶಗಳಲ್ಲಿ ಆದಿವಾಸಿಗಳ ಇತರರು ಕಸಿದ ಭೂಮಿಯನ್ನು ಅವ ಮರಳಿಸಬೇಕು ಎಂದು ಒತ್ತಾಯಿಸುತ್ತದೆ. ಆ ಆದಿವಾಸಿ ಪ್ರದೇಶಗಳಲ್ಲಿ ಪರಿಸ ತಾಳಿಕೊಳ್ಳಬಹುದಾದ ಕೃಷಿಯ ಸಾಧ್ಯತೆ ಪ್ರಶ್ನೆಯನ್ನು ಇಬ್ಬರೂ ಎತ್ತಿಕೊಂಡಿಲ್ಲ ಎಂ ಅರ್ಚನಾ ವಿಶ್ಲೇಷಿಸುತ್ತಾರೆ. ಪರಿಸರ ಚಳು ಆದಿವಾಸಿಗಳ ಪಾರಂಪರಿಕ ಪದ್ಧತಿ ತನ್ನಿಂತ ಅದನ್ನು ಎತ್ತರಿಸುತ್ತದೆ ಎಂದು ನಂಬಿದ್ದಾರೆ. ಸರ - ಕಂಟ್ರಾಕ್ಟರುಗಳು ಕಂಪನಿಗಳು ಕಬಳಿಸಿರು ಆದಿವಾಸಿಗಳ ಭೂಮಿಯನ್ನು ಅವ ಮರಳಿಸಬೇಕು ಎಂಬ ಸಮಾನ ಅಂಶ ಇದೆ ಎಂ ಅವರು ಗುರುತಿಸುತ್ತಾರೆ.

ಕೃಷಿ ಬಿಕ್ಕಟ್ಟು ಮತ್ತು ಆದಿವಾಸಿ ಜೀವನೋಪಾಯ


ಇಂದಿನ ಸನ್ನಿವೇಶಗಳಲ್ಲಿ ದೇಶಾದ್ಯಂತ ಕೃ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆದಿವಾಸಿಗಳ ಕೃಷಿ ಮ ಇತರ ಜೀವನೋಪಾಯದ ಪ್ರಶ್ನೆ ಬಗ್ಗೆ ಇನ್ನೊಂ ಅಧ್ಯಾಯ ಚರ್ಚಿಸುತ್ತದೆ. ಆದಿವಾಸಿಗಳ ಕೆಲ ನಿರ್ದಿಷ್ಟ ಕೃಷಿ-ಪದ್ಧತಿ (ಉದಾ: 'ಝೂಮ್' ಕೃ ಎಂದು ಕರೆಯಲಾಗುವ - ಭೂಮಿ ಸುಟ್ಟು ಕೃ ಮಾಡಿ ಬೇರೆ ಭೂಮಿಗೆ ಗುಳೆಹೋಗು ಪದ್ಧತಿ)ಯ ಪರಿಸರ-ಪರಿಣಾಮಗಳ ಬ ಭಿನ್ನಾಭಿಪ್ರಾಯವನ್ನು ಚರ್ಚಿಸುತ್ತದೆ. ಪರಿ ಚಳುವಳಿ ಆಪಾದಿಸುವಂತೆ ಎಡ-ಚಳುವ 'ಹಸಿರು-ಕ್ರಾಂತಿ'ಯ ಕೃಷಿ ನೀತಿಯನ್ನು ಕಣ್ಣುಮು ಒಪ್ಪಿಕೊಂಡಿಲ್ಲ. ಕೃಷಿಯಲ್ಲಿ ಬಂಡವಾಳದ ಪ್ರವೇ ಮತ್ತು ಇತ್ತೀಚಿಗಿನ ಜಾಗತೀಕರಣದ ಪರಿಣಾಮ ಬಗ್ಗೆ ಎಡ-ಚಳುವಳಿ ಅತ್ಯಂತ ಸಮಗ್ರ ವಿಮ ಮಾಡಿದೆ. ಆದರೆ ಕೃಷಿಯ ಉತ್ಪಾದಕತೆ ಹೆಚ್ಚಿಸ ಆಧುನಿಕ ತಂತ್ರಜ್ಞಾನ ಬಳಕೆಗೆ ಕುರುಡು-ಮ ಕಟ್ಟಿಕೊಂಡಿಲ್ಲ. ಕೃಷಿಯಲ್ಲಿ ತಂತ್ರಜ್ಞಾನದ ಬಳಕ ದೂರಗಾಮಿ ಪರಿಣಾಮಗಳ ಬಗೆ ಎಚ್ಚರವಾಗಿದೆ. ಪಾಳೆಯಗಾ ಬಂಡವಾಳಶಾಹಿಯಿಂದ ಮುಕ್ತಗೊಳಿಸಿ, ಬ ಕೃಷಿ ಪದ್ಧತಿ ರೂಪಿಸುವುದಕ್ಕೆ ಒತ್ತುಕೊಡುತ್ತದೆ. ಭೂಸುಧಾರಣೆ ಜತೆ ಪ ಸ್ನೇಹಿ ಉತ್ಪಾದಕತೆ ಹೆಚ್ಚಿಸುವ ಕ್ರಮಗ ಒತ್ತುಕೂಡುವ ಕ್ರಮಗಳನ್ನು ಪಶ್ಚಿಮ ಬಂ ಮತ್ತು ತ್ರಿಪುರಾ ಎಡರಂಗ ಸರ್ಕಾರ ರೂಪಿಸಿವೆ. ಒಟ್ಟಾರೆ ದೇಶದ ಮತ್ತು ಜ ಆರ್ಥಿಕ ವ್ಯವಸ್ಥೆಯ ಚೌಕಟ್ಟಿನೊಳಗೆ ಕೃಷಿ ಎದುರಿಸುತ್ತಿರುವ ಅಸಮಾನ ವಿನಿ ಮುಂತಾದ ವ್ಯಾಪಕ ವಿಷಯಗಳನ್ನು ನಿ ಪರಿಸರ-ಚಳುವಳಿ ಒದಗಿಸುವ ಸ್ಥ ಪರಿಹಾರಗಳು ಕಾರ್ಯಸಾಧುವಲ್ಲ. ಎಡ-ಚ ಪರಿಸರ-ತಾಳಿಕೊಳ್ಳಬಲ್ಲ ಕೃಷಿಯಬಗ್ಗೆ ಕಾಳಜಿ ವಹಿಸುವ ಅಗತ್ಯ ಇದೆ. ಎ ಚಳುವಳಿಗಳು ಬದಲಿ ಕೃಷಿ ವ್ಯವಸ್ಥೆ ರೂಪಿ ಇನ್ನೂ ಹೆಚ್ಚಿನ ಚರ್ಚೆ - ಸಮಾನ ಹುಡುಕವ ಸಾಧ್ಯತೆ ಇದೆ. ಗ್ರಾಮೀಣ ಆದಿವಾಸಿ ಪ್ರದೇಶಗಳಲ್ಲಿ ಕೃಷಿ ಮತ್ತು ಕೃಷಿ ಜೀವನೋಪಾಯಗಳನ್ನು ಒಳಗೊಂಡ ಬೆಳವಣಿಗೆಯ ಕಾರ್ಯವ್ಯೂಹ ರೂ ಸವಾಲು ಎರಡೂ ಚಳುವಳಿಗಳ ಮುಂದಿದ ಅರ್ಚನಾ ಅಭಿಪ್ರಾಯ ಪಡುತ್ತಾರೆ.



ಪರಿಸರದ ಹೆಸರಲ್ಲಿ ಅಭಿವೃದ್ಧಿ ತಡೆ ಸಾಧುವೇ?

ಜಾಗತೀಕರಣದಡಿಯಲ್ಲಿ ಆದಿವಾಸಿಗಳು ಮತ್ತು ಅರಣ್ಯಗಳು

ಆದಿವಾಸಿಗಳ ಆರ್ಥಿಕ - ಸಾಮಾಜಿಕ-ಸಾಂಸ್ಕೃತಿಕ ಬದುಕಿಗೆ ಎಲ್ಲವೂ ಆಗಿದ್ದ ಅರಣ್ಯಗಳ ಎಲ್ಲಾ ಸಂಪನ್ಮೂಲಗಳ ಒಡೆತನ ಕಳೆದ ಹಲವು ಶತಮಾನಗಳಲ್ಲಿ ಆಳುವವರ್ಗಗಳ ಕೈಗೆ ಬಂದಿದೆ. ಬ್ರಿಟಿಷ್ ವಸಾಹತುಶಾಹಿ ಕಾಲದಲ್ಲಿ ಮತ್ತು ಸ್ವತಂತ್ರ ಭಾರತದಲ್ಲಿ ಮುಂದುವರಿದ ಸರ್ಕಾರದ ಅರಣ್ಯಗಳ ಗುತ್ತೇದಾರಿ ಒಡೆತನ, ಅರಣ್ಯಗಳ ಲೂಟಿ ಮತ್ತು ನಾಶಕ್ಕೆ ಕಾರಣವಾಗಿದೆ. ಅರಣ್ಯದ 'ರಕ್ಷಣೆ'ಗೆ ನೇಮಿಸಿದ ಅಧಿಕಾರಶಾಹಿ, ಅರಣ್ಯವನ್ನು ಮುಖ್ಯವಾಗಿ ಮರಮಟ್ಟು ಸಿಗಬಹುದಾದ ಗಣಿ ಎಂದು ಮಾತ್ರ ನೋಡುತ್ತದೆ. ಜಾಗತೀಕರಣದಡಿಯಲ್ಲಿ ಸರ್ಕಾರದ ಒಡೆತನದಲ್ಲಿ ಇದ್ದ ಅಲ್ಪಸ್ವಲ್ಪ 'ರಕ್ಷಣೆ'ಯ ಪಾತ್ರ ಕುಗ್ಗಿದೆ. ಖಾಸಗೀ ಕಂಪನಿಗಳ ನೇರ ಲೂಟಿಗೆ, ಜಾಗತಿಕ ಮಾರುಕಟ್ಟೆಯ ನೇರ ಹಿಡಿತಕ್ಕೆ ಅರಣ್ಯಗಳು ಸಿಕ್ಕಿವೆ. ಅಲ್ಲಿನ ಮೂಲನಿವಾಸಿಗಳು, ಒಡೆಯರು ಆದ ಆದಿವಾಸಿಗಳು ಇಲ್ಲಿ 'ಹೊರಗಿನವರು', 'ಆಕ್ರಾಮಕರು' ಆಗಿದ್ದಾರೆ. ಇಲ್ಲವೆ ಕಡಿಮೆ ಕೂಲಿಯಾಳುಗಳಾಗಿದ್ದಾರೆ. ಪರಿಸರ - ಚಳುವಳಿಗಳು ಅರಣ್ಯದ ಭೂಮಿ ಮಾತ್ರವಲ್ಲ ಎಲ್ಲಾ ಸಂಪನ್ಮೂಲಗಳನ್ನು ಆದಿವಾಸಿ ಸಾಮುದಾಯಿಕ ಒಡೆತನಕ್ಕೆ ಕೊಡುವುದು ಪರಿಹಾರ ಎನ್ನುತ್ತವೆ. ಸರ್ಕಾರಕ್ಕೆ ಅಲ್ಲಿ ಯಾವುದೇ ಪಾತ್ರ ಇರಬಾರದು. ಅರಣ್ಯದ ಸಂಪನ್ಮೂಲಗಳು ಕೈಗಾರಿಕೆಗೆ ಬಳಕೆಯಾಗಬಾರದು. ಸ್ವಾಭಾವಿಕವಾಗಯೇ ಎಡ ಚಳುವಳಿ ಇದನ್ನು ಒಪ್ಪುವುದಿಲ್ಲ. ಅರಣ್ಯ ರಕ್ಷಣೆ, ಸಂಪನ್ಮೂಲಗಳ ಸರಿಯಾದ ಉಪಯೋಗದಲ್ಲಿ ಆದಿವಾಸಿಗಳ ಸ್ವಾಭಾವಿಕ ಹಕ್ಕು ಮಾನ್ಯ ಮಾಡುತ್ತಾ, ಅದರ ರಕ್ಷಣೆಯಲ್ಲೂ ಅವರಗೆ ದೊಡ್ಡ ಪಾತ್ರ ಇರಬೇಕು. ಸರ್ಕಾರದ ಜತೆ ಜಂಟಿ ಅರಣ್ಯ-ರಕ್ಷಣೆ ಮತ್ತು ಸಂಪನ್ಮೂಲ ನಿರ್ವಹಣೆಗೆ ಪ್ರಯತ್ನ ಮಾಡಬೇಕು. ಇದನ್ನು ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಪ್ರಾಯೋಗಿಕವಾಗಿ ತೋರಿಸಿ ಸಹ ಕೊಟ್ಟಿವೆ. ಒಟ್ಟಾರೆಯಾಗಿ ಬೆಳವಣಿಗೆ ಪ್ರಕ್ರಿಯೆಯಲ್ಲಿ ಪ್ರಭುತ್ವಕ್ಕೆ (ಸರ್ಕಾರಕ್ಕೆ) ಯಾವದೇ ಪಾತ್ರ ಇರಬಾರದು ಎಂಬ ಪರಿಸರವಾದಿಗಳ ವಾದವನ್ನೂ



ನರ್ಮದಾ ಆಣೆಕಟ್ಟು

ಎಡ ಚಳುವಳಿ ಒಪ್ಪುವುದಿಲ್ಲ. ಪ್ರಭುತ್ವದ ಪಾತ್ರವನ್ನು ಜನ-ಪರಗೊಳಿಸಲು, ಜನರ ಚಳುವಳಿಯ ಒತ್ತಡ ಹೇರುವುದು ಇದಕ್ಕೆ ಪರಿಹಾರ. ಜಾಗತೀಕರಣದ ಸಂದರ್ಭದಲ್ಲಿ ಪ್ರಭುತ್ವಕ್ಕೆ ಯಾವುದೇ ಪಾತ್ರ ಇರಕೂಡದು ಎನ್ನುವುದು, ಖಾಸಗಿ ಕಂಪನಿಗಳಿಗೆ ಎಲ್ಲವನ್ನೂ ನಿಯಂತ್ರಿಸಲು ಆಹ್ವಾನ ಕೊಟ್ಟಂತೆ ಎನ್ನುತ್ತದೆ ಎಡ ಚಳುವಳಿ. ಅರಣ್ಯಗಳಿಂದ ಆದಿವಾಸಿಗಳನ್ನು ಹೊರದಬ್ಬುವ, ಅಲ್ಲಿನ ಸಂಪನ್ಮೂಲಗಳು ಸಿಗದಂತೆ ಮಾಡುವ ಸರ್ಕಾರದ ಕ್ರಮಗಳನ್ನು ಎರಡು ಚಳುವಳಿಗಳು ವಿರೋಧಿಸುತ್ತಲೇ ಬಂದಿವೆ. ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡರೆ, ಇದನ್ನು ದೊಡ್ಡ ಚಳುವಳಿಯಾಗಿಸುವ ಸಾಧ್ಯತೆ ಇದೆ.

ನರ್ಮದಾ ಮತ್ತು ನಿರ್ವಸಿತರ ಪ್ರಶ್ನೆ

ನರ್ಮದಾದಂತಹ ದೊಡ್ಡ ಆಣೆಕಟ್ಟುಗಳು ಮತ್ತು ಬೆಳವಣಿಗೆ ಯೋಜನೆಗಳ ಒಟ್ಟಾರೆ ಸಾಮಾಜಿಕ - ಆರ್ಥಿಕ-ಪರಿಸರ ವೆಚ್ಚ -ಅನುಕೂಲಗಳ ಪ್ರಶ್ನೆ ಎಲ್ಲರನ್ನು ಕಾಡುತ್ತಿರುವ ಪ್ರಮುಖ ವಿಷಯ. ಕಳೆದ ಎರಡು ದಶಕಗಳಿಂದ ನರ್ಮದಾ ಆಣೆಕಟ್ಟು ವಿರುದ್ಧ ಹೋರಾಡುತ್ತಿರುವ ಮೇಧಾ ಪಾಟ್ಕರ್‌ರವರ ನಾಯಕತ್ವದ 'ನರ್ಮದಾ ಬಚಾವೋ ಆಂದೋಲನ' - 'ಬಡವರ ಪರ ಪರಿಸರವಾದ'ದ ಉತ್ತಮ ಉದಾಹರಣೆ. ದೊಡ್ಡ ಆಣೆಕಟ್ಟುಗಳು ಸೇರಿದಂತೆ ದೊಡ್ಡ ಬೆಳವಣಿಗೆ ಯೋಜನೆಗಳ ಅನುಕೂಲಗಳು ಶ್ರೀಮಂತ ವರ್ಗಗಳಿಗೆ. ವೆಚ್ಚ ಹೊರಬೇಕಾದವರು ಬಡವರು. ಇಂತಹ ದೊಡ್ಡ ಯೋಜನೆಗಳ ಪರಿಣಾಮವಾಗಿ 'ನಿರ್ವಸಿತರಿಗೆ' ಪರಿಹಾರದ ಪ್ರಶ್ನೆ ಈವರೆಗೆ ಹೆಚ್ಚಿನ ಯೋಜನೆಗಳಲ್ಲಿ ಪರಿಹರಿಸಿಲ್ಲ - ಇವು ಎರಡೂ ಚಳುವಳಿಗಳು ಒಪ್ಪುವ ಸಮಾನ ಅಂಶ. ಆಧುನಿಕ ವಿಜ್ಞಾನ-ತಂತ್ರಜ್ಞಾನ, ದೊಡ್ಡ ಯೋಜನೆಗಳು ಬೆಳವಣಿಗೆ ಮತ್ತು ಸಮಾನತೆಯ ಶತ್ರುಗಳು. ಅವನ್ನು ಸಾರಸಗಟಾಗಿ ವಿರೋಧಿಸಬೇಕು. ಸಣ್ಣ ಪ್ರಮಾಣದ ಸ್ವಯಂ-ಪರಿಪೂರ್ಣ ಗ್ರಾಮೀಣ ಯೋಜನೆಗಳು ಮಾತ್ರ ('ಸಣ್ಣದು ಸುಂದರ') ಜನಪರ ಬೆಳವಣಿಗೆಗೆ ಪೂರಕ - ನರ್ಮದಾ ಚಳುವಳಿಯ ಈ ನಿಲುವನ್ನು ಎಡ ಚಳುವಳಿ ಒಪ್ಪುವುದಿಲ್ಲ. ನರ್ಮದಾ ತೆಹರಿ-ಗಢವಾಲ್ ಮತ್ತು ಇತರ ಇಂತಹ ದೊಡ್ಡ ಯೋಜನೆಗಳ ಸಮಗ್ರ ವೆಚ್ಚ - ಅನುಕೂಲಗಳ ಬಗ್ಗೆ ಬಹಿರಂಗ ಚರ್ಚೆ ಆಗಬೇಕು. ವಿಶ್ಲೇಷಣೆ ಒದಗಿಸಬೇಕು. ನಿರ್ವಸಿತರ ಪರಿಹಾರ ಇದರ ಭಾಗವಿರಬೇಕು - ಎಂದು ಪರಿಸರ ಚಳುವಳಿಗಳ ಜತೆ ಎಡ-ಚಳುವಳಿ ಸಹ ತನ್ನ ದನಿ ಎತ್ತಿದೆ. ಸರ್ಕಾರದ ಉದ್ಧಟ, ಅಪಾರದರ್ಶಕ ನೀತಿಯನ್ನು ಖಂಡಿಸಿ, ಕಡಿಮೆ ಪರಸರ - ವೆಚ್ಚದ ಕಡಿಮೆ ನಿರ್ವಸಿತತೆಗೆ ಆಸ್ಪದ ಕೊಡುವ ಬದಲಿಯನ್ನು ಸೂಚಿಸಿದೆ. ನರ್ಮದಾ ಯೋಜನೆಗೆ ಸುಪ್ರೀಂಕೋರ್ಟ್ ತನ್ನ ಅಂತಿಮ ಅಸ್ತು ನೀಡಿದ್ದು, ನರ್ಮದಾ ಆಂದೋಲನ ಸಹ ತನ್ನ ಧೋರಣೆಗಳನ್ನು ಪುನವಿಮರ್ಶಿಸುವಂತೆ ಮಾಡಿದೆ. ಎಡ ಮತ್ತು ಇತರ ಜನ-ಪರ ಚಳುವಳಿಗಳು 'ನಿರ್ವಸಿತರಿಗೆ ಪರಿಹಾರ' ಮುಂತಾದ ಪ್ರಶ್ನೆಗಳ ಬಗ್ಗೆ ವ್ಯಾಪಕ ಐಕ್ಯ - ಚಳುವಳಿ ಕಟ್ಟಬೇಕಾದ ಪರಿಸ್ಥಿತಿ ಇತರ ಭಿನ್ನಾಭಿಪ್ರಾಯಗಳನ್ನು ಚರ್ಚೆ ಮೂಲಕ ಬಗೆಹರಿಸಲು ಹಾದಿ ಮಾಡಬಹುದು.

ಆದಿವಾಸಿಗಳ ಸ್ವಾಯತ್ತತೆಗೆ ಹಾದಿ ಯಾವುದು ?

ಆದಿವಾಸಿಗಳ ವಿಶಿಷ್ಟ ಪರಿಸ್ಥಿತಿಯಿಂದಾಗಿ ಭಾರತದ ಗಣತಂತ್ರದ ವ್ಯವಸ್ಥೆ ಒಳಗೆ, ಸ್ವಾಯತ್ತೆ ಬೇಕು ಎಂಬುದು ಸ್ವಾತಂತ್ರ್ಯದ ಹೋರಾಟದ ಕಾಲದಿಂದಲೂ ಕೇಳಿಬಂದ ಬೇಡಿಕೆ. 1930 ರ ದಶಕದಲ್ಲೇ ಜಾರ್ಖಂಡ್ ಮುಂತಾದ ಪ್ರದೇಶಗಳಲ್ಲಿ ಸ್ವಾಯತ್ತತೆಗೆ ಹೋರಾಟ ಆರಂಭವಾಗಿತ್ತು. ಕಾಂಗ್ರೆಸ್‌ನ ನಾಯಕತ್ವ ಸ್ವಾತಂತ್ರ್ಯ ಚಳುವಳಿ ಸಹ ಇದನ್ನು ಗುರುತಿಸಿತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣದ ಮೂಲಕ 'ರಾಷ್ಟ್ರೀಯ ಮುಖ್ಯಧಾರೆಗೆ' ಸೇರಿಸುವ 'ಆದಿವಾಸಿ - ಕಲ್ಯಾಣ ಯೋಜನೆ'ಗಳನ್ನು ಬಿಟ್ಟರೆ ಹೆಚ್ಚಿನದೇನೂ ಆಗಲಿಲ್ಲ. ಆದಿವಾಸಿ ಸ್ವಾಯತ್ತತೆಗೆ ಬ್ರಿಟಿಷ್ - ಕಾಲದಲ್ಲೇ ಯೋಜಿಸಲಾದ ಐದನೇ ಮತ್ತು ಆರನೇ ಶೆಡ್ಯೂಲ್ ರೂಪಿಸಲಾಗಿತ್ತು. ಸ್ವಾತಂತ್ರ್ಯಾನಂತರದ ತತ್‌ಕ್ಷಣದ ಅವಧಿಯಲ್ಲಿ ಆದಿವಾಸಿಗಳ ಆರ್ಥಿಕ ಮತ್ತು ಸಂಸ್ಕೃತಿ ಎರಡಕ್ಕೂ ರಕ್ಷಣೆ ಅಗತ್ಯ. ಅದರ ಜತೆಜತೆಗೆ ಆದಿವಾಸಿಗಳನ್ನು ಆಧುನೀಕರಿಸಿ, ದೇಶದ ಜೀವನದಲ್ಲಿ ಸಮಾನರಾಗಿ ಪಾಲುಗೊಳ್ಳುವತೆ ಮಾಡುವ ಅಗತ್ಯವೂ ಇದೆ. ನೆಹರೂವಿನ ಈ ಸಾಮಾನ್ಯ ಪರಿಕಲ್ಪನೆಗೆ ಎಡ-ಚಳುವಳಿ ಸೇರಿದಂತೆ ವ್ಯಾಪಕ ರಾಷ್ಟ್ರೀಯ ಸಹಮತವಿತ್ತು. ಆದಿವಾಸಿಗಳ ಆರ್ಥಿಕವನ್ನು ಮಾರುಕಟ್ಟೆ ಶಕ್ತಿಗಳಿಂದ ರಕ್ಷಿಸಿ, ಆದರೆ ಆಧುನಿಕ ಬೆಳವಣಿಗೆಯತ್ತ ಒಯ್ಯುವುದು ಅದರ ಹಿಂದಿನ ಆಶಯವಾಗಿತ್ತು. ಅದೇ ರೀತಿ ಸಾಮಾಜಿಕ-ಸಾಂಸ್ಕೃತಿಕ ವಿಷಯಗಳಲ್ಲೂ ಆದಿವಾಸಿ ಜೀವನಕ್ರಮವನ್ನು ರಕ್ಷಿಸಿ, ಅವರು ಸ್ವ-ಇಚ್ಛೆಯಿಂದ ಆಧುನಿಕ ಪ್ರಜಾಸತ್ತೆಯ ಆಧಾರದ ಮೇಲೆ ಬೆಳೆಯಬೇಕು ಎಂಬ ಆಶಯವೂ ಇತ್ತು.



ನರ್ಮದಾ ಬಚಾವೋ ಆಂದೋಲನದ ನಾಯಕಿ ಮೇಧಾ ಪಾಟ್ಕರ್


ಐದನೇ ಅಥವಾ ಆರನೇ ಶೆಡ್ಯೂಲ್?

ಐದನೇ ಮತ್ತು ಆರನೇ ಶೆಡ್ಯೂಲ್ ಆದಿವಾಸಿಗಳ ಸ್ವಾಯತ್ತತೆಗೆ ಇದ್ದ ಪರಿಕರ. ಎಡ-ಚಳುವಳಿ ಮತ್ತು ಇತರ ಹಲವರು ಆರನೇ ಶೆಡ್ಯೂಲ್ ಇದಕ್ಕೆ ಹೆಚ್ಚು ಉತ್ತಮ ಪರಿಕರ ಎಂದು ಭಾವಿಸಿದರು. ಆದರೆ ಹಲವು ಗಾಂಧಿವಾದಿಗಳು ಐದನೇ ಶೆಡ್ಯೂಲಿಗೆ ಹೆಚ್ಚು ಒತ್ತುಕೊಟ್ಟರು. ಎರಡು ಶೆಡೂಲ್‌ಗಳಡಿಯಲ್ಲಿ ಆದಿವಾಸಿ ಆಸ್ತಿಯನ್ನು ಬೇರೆಯವರಿಗೆ ಪರಭಾರೆ ಮಾಡದಂತೆ, ಹಲವು ಆದಿವಾಸಿ ಪದ್ಧತಿಗಳಿಗೆ ರಕ್ಷಣೆಗೆ ಅವಕಾಶವಿತ್ತು. ಇದ್ದ ಮುಖ್ಯ ವ್ಯತ್ಯಾಸವೆಂದರೆ, ಆರನೇ ಶೆಡ್ಯೂಲ್‌ನಲ್ಲಿ ಚುನಾಯಿತ ಆದಿವಾಸಿ ಕೌನ್ಸಿಲ್‌ಗಳಿಗೆ ಅವಕಾಶವಿತ್ತು. ಈ ಕೌನ್ಸಿಲ್‌ಗಳಿಗೆ ಪ್ರದೇಶದ ಬೆಳವಣಿಗೆಯ ಜವಾಬ್ದಾರಿ ಮತ್ತು ಸ್ವಲ್ಪ ಅಧಿಕಾರವೂ ಇತ್ತು. ಐದನೇ ಶೆಡ್ಯೂಲ್‌ನಲ್ಲಿ ಇದ್ದ ಕೌನ್ಸಿಲ್ ಚುನಾಯಿತವಲ್ಲ. ಮತ್ತು ಅದಕ್ಕೆ ಗವರ್ನರ್ ಸಲಹೆ ಕೊಡುವ ಅಧಿಕಾರ ಮಾತ್ರಇತ್ತು. ಎಡ-ಚಳುವಳಿ ಆರನೇ ಶೆಡ್ಯೂಲ್ ಆದಿವಾಸಿ ಬಹುಸಂಖ್ಯಾತ ಪ್ರದೇಶಗಳಲ್ಲಿ ಅನ್ವಯವಾಗುವಂತೆ ಹೋರಾಡಿ, ಸಾಕಷ್ಟು ಫಲ ಕಂಡಿದೆ. ತ್ರಿಪುರಾದಲ್ಲಿ ಮುಖ್ಯವಾಗಿ ಇದರ ಪ್ರಯೋಗ ನಡೆದಿದ್ದು, ಮೂಲ ಆಶಯಗಳಲ್ಲಿ ಸಫಲವಾಗಿದೆ. ಆದಿವಾಸಿಗಳ ವಿಶಿಷ್ಟತೆ ಕಾಪಾಡುತ್ತಾ, ಆಧುನಿಕತೆಯತ್ತ ಒಯ್ಯುವುದರಲ್ಲಿ ಜಯ ಕಂಡಿದೆ.

ಕಳೆದ ಐದು ದಶಕಗಳಲ್ಲಿ ವಿವಿಧ ಸರ್ಕಾರಗಳು ಆದಿವಾಸಿ ಸ್ವಾಯತ್ತತೆ ಬಗ್ಗೆ ಇದ್ದ ಮೂಲ ಆಶಯಗಳನ್ನು ಆರನೇ ಶೆಡ್ಯೂಲ್‌ನ ಪರಿಕರ ಬಳಸಿ ಜಾರಿ ಮಾಡುವುದರಲ್ಲಿ ಸೋತಿವೆ. ಇದ್ದಬದ್ದ ಕಲ್ಯಾಣ ರಾಜ್ಯದ ಪರಿಕಲ್ಪನೆ ಸತ್ತು ಹೋಗಿರುವುದು, ಜಾಗತೀಕರಣದ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆ ಹೆಚ್ಚಿರುವುದು ದುರ್ಬಲರ ಶಕ್ತಿ ಕುಗ್ಗಿರುವುದು - ಇವೆಲ್ಲ ಆದಿವಾಸಿಗಳ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿ ಬಿಕ್ಕಟ್ಟಿಗೆ ತಲುಪಿಸಿದೆ. ಪ್ರತ್ಯೇಕತಾ ಚಳುವಳಿ, ಉಗ್ರಗಾಮಿಗಳು ಬೆಳೆದಿರುವುದು - ಇದೇ ಕಾರಣಕ್ಕೆ. ಆದಿವಾಸಿ ಸ್ವಾಯತ್ತತೆಯ ಪ್ರಶ್ನೆಗೆ ಹೊಸ ತುರ್ತು ಬಂದಿದೆ. ಪರಿಸರ- ಚಳುವಳಿಗಳೂ ಆದಿವಾಸಿಗಳ ಹಳೆಯ ವ್ಯವಸ್ಥೆಯನ್ನು 'ಜೀವಂತವಾಗಿಡುವ' ಐದನೇ ಶೆಡ್ಯೂಲಿಗೆ ಬೆಂಬಲ ನೀಡುತ್ತದೆ. ಪ್ರಜಾಸತ್ತೀಕರಣ ಮೂಲಕ ಆಧುನೀಕರಣದ ಆರನೇ ಶೆಡ್ಯೂಲಿನ ಹಾದಿಯನ್ನು ವಿರೋಧಿಸುತ್ತದೆ. ಇದೇ ಆದಿವಾಸಿ ಸ್ವಾಯತ್ತತೆ ಬಗ್ಗೆ ಎಡ ಮತ್ತು ಪರಿಸರ ಚಳುವಳಿಗೆ ಇರುವ ಭಿನ್ನಾಭಿಪ್ರಾಯದ ಸಾರ. ದೇಶದಾದ್ಯಂತ ಆರ್ಥಿಕ ರಚನೆಯಲ್ಲಿ ಆಮೂಲಾಗ್ರ ಪ್ರಜಾಸತ್ತಾತ್ಮಕ ಬದಲಾವಣೆ, ಅಸಮಾನ ಆರ್ಥಿಕ ಬೆಳವಣಿಗೆಯನ್ನು ಪರಿಹರಿಸುವ ಹಾದಿಯ ಆಯ್ಕೆ ಜತೆ - ಆರನೇ ಶೆಡ್ಯೂಲ್ ಆಧಾರಿತ ಆದಿವಾಸಿ ಸ್ವಾಯತ್ತತೆ ಕಾರ್ಯಸಾಧ್ಯ ಎಂಬುದು ಎಡ-ಚಳುವಳಿಯ ಧೋರಣೆ. ಆದರೆ ತ್ರಿಪುರಾ ಬಿಟ್ಟರೆ ಬೇರೆ ಕಡೆ ಈ ಧೋರಣೆ ಆಧಾರದ ಮೇಲೆ ಆದಿವಾಸಿಗಳನ್ನು ಸಂಘಟಿಸಲು ಸಾಧ್ಯವಾಗಿಲ್ಲ.

ಐಕ್ಯ ಚಳುವಳಿಯ ಅಗತ್ಯ

ಪರಿಸರ ಮತ್ತು ಜನಪರ ಬೆಳವಣಿಗೆಯ ಹಾದಿಯ ಸಂಕೀರ್ಣ ಪ್ರಶ್ನೆಗಳ ಬಗ್ಗೆ ದೀರ್ಘ ಅನುಭವವಿರುವ ಮತ್ತು ಸ್ಪಷ್ಟ ಪರಿಕಲ್ಪನೆ ಎಡ ಮತ್ತು ಪರಿಸರ ಚಳುವಳಿಗಳೆರಡಕ್ಕೂ ಇವೆ. ಹಲವು ಮಗ್ಗಲುಗಳಲ್ಲಿ ಈ ಎರಡೂ ಚಳುವಳಿಗಳ ಅನುಭವ ಪೂರಕವಾದದ್ದು. ಪರಸ್ಪರ ಕಲಿಯಬಹುದಾದದ್ದು. ಜಾಗತೀಕರಣದ ಸಂದರ್ಭದಲ್ಲಿ ಬದಲಿ ಬೆಳವಣಿಗೆಯ ಹಾದಿಯನ್ನು ಹುಡುಕುವುದಕ್ಕೆ ಬೇಕಾದ ವ್ಯಾಪಕ ಐಕ್ಯ ಚಳುವಳಿ ಕಟ್ಟಲು ಇವೆರಡೂ ಒಟ್ಟಿಗೆ ಬರಬೇಕು. ಇದಕ್ಕಾಗಿ ಭಿನ್ನಾಭಿಪ್ರಾಯಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಇದು ಸಾಧ್ಯ ಮತ್ತು ಅಗತ್ಯ - ಎಂದು ಅರ್ಚನಾ ಪ್ರಸಾದ್ ನಂಬುತ್ತಾರೆ. ಎರಡೂ ಚಳುವಳಿಗಳ ಬಗ್ಗೆ ತೀವ್ರ ಸಹಾನುಭೂತಿ ಇರುವ ಅವರ ವಿಶ್ಲೇಷಣೆಯಲ್ಲಿ ಎತ್ತಿ ತೋರಿಸಬೇಕಾದ ಹುಳುಕು ಇಲ್ಲ. ಇದರರ್ಥ ಅವರು ಎಡ-ಚಳುವಳಿಯ ಧೋರಣೆ ಬಗ್ಗೆ ಮಾಡಿದ ಟೀಕೆ ಎಲ್ಲಾ ಸರಿ ಇದೆಯೆಂದಲ್ಲ. ಎಡ ಚಳುವಳಿಗೆ ಈ ರೀತಿಯ ಚರ್ಚೆ ನಡೆಸಿ, ಐಕ್ಯ-ಚಳುವಳಿ ಕಟ್ಟುವ ಬಗ್ಗೆ ತೀವ್ರ ಆಸಕ್ತಿ ಇದೆ. ಜವಾಬ್ದಾರಿ ಅರಿವು ಇದೆ. ಕಳೆದ ಜನವರಿಯಲ್ಲಿ ಮುಂಬಯಿಯಲ್ಲಿ ನಡೆದ 'ಜಾಗತಿಕ ಸಾಮಾಜಿಕ ವೇದಿಕೆ' ಯಲ್ಲಿ ಕಾಮ್ರೇಡ್ ಪ್ರಕಾಶ್ ಕಾರಟ್ ಮುಂದಿಟ್ಟ ವಿಶ್ಲೇಷಣೆ 'ಬಡವರ - ಪರ ಪರಿಸರ ಚಳುವಳಿ' ಗೂ ಅನ್ವಯವಾಗುತ್ತದೆ. ಇಂತಹ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಇಂತಹ ಪ್ರಕ್ರಿಯೆಯಲ್ಲಿ ತೊಡಗಿರುವ ಎಡ-ಪಕ್ಷಗಳ ಕಾರ್ಯಕರ್ತರಿಗೆ, ಪ್ರಗತಿಪರರಿಗೆ ಈ ಪುಸ್ತಕ ಒಳ್ಳೆಯ ಕೈಪಿಡಿ ಎನ್ನಬಹುದು.




ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಗೆ ಒತ್ತಾಯಿಸಿ


ಡಿಸೆಂಬರ್ 10 ರಂದು ರಾಜ್ಯಾದ್ಯಂತ ಕೃಷಿ ಕೂಲಿಕಾರರ ಚಳುವಳಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ 3ನೇ ರಾಜ್ಯ ಸಮ್ಮೇಳನವು ಮಂಡ್ಯ ನಗರದಲ್ಲಿ ಯಶಸ್ವಿಯಾಗಿ ನಡೆಯಿತು. ನವೆಂಬರ್ 17 ರಿಂದ 19ರವರೆಗೆ ನಡೆದ ಈ ಸಮ್ಮೇಳನವನ್ನು ತ್ರಿಪುರ ರಾಜ್ಯದ ಎಡರಂಗ ಸರ್ಕಾರದ ಕೃಷಿ ಹಾಗೂ ಆರೋಗ್ಯ ಖಾತೆಯ ಸಚಿವರಾದ ಕಾಮ್ರೇಡ್ ತಪನ್ ಚಕ್ರವರ್ತಿ ಉದ್ಘಾಟಿಸಿದರು. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಎ.ವಿಜಯರಾಘವನ್ ಅವರು ಸಮ್ಮೇಳನದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ತಮಿಳುನಾಡಿನ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ತಿರುನಾವಕರಸ್ಸು ಭಾಗವಹಿಸಿದ್ದರು.

ಸಮ್ಮೇಳನವು ಕೇಂದ್ರ ಯು.ಪಿ.ಎ ಸರ್ಕಾರವು ಜಾರಿಗೆ ತರುವುದಾಗಿ ಪ್ರಕಟಿಸಿರುವ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ - 2004" ಕುರಿತು ವಿವರವಾಗಿ ಚರ್ಚಿಸಿ ಈ ಕೆಳಗಿನಂತೆ ಸರ್ವಾನುಮತದ ನಿರ್ಣಯವೊಂದನ್ನು ಅಂಗೀಕರಿಸಿತು.

"ಪ್ರತಿಯೊಂದು ಗ್ರಾಮೀಣ ಕುಟುಂಬದ ಒಬ್ಬ ಸದೃಢ ಸದಸ್ಯನಿಗೆ (ಪುರುಷ ಅಥವಾ ಮಹಿಳೆ) ವರ್ಷದಲ್ಲಿ 100 ದಿನಗಳ ಕೆಲಸದ ಗ್ಯಾರಂಟಿ ಒದಗಿಸುವ ಈ ಕಾಯ್ದೆ ಸರಿಯಾದ ದಿಕ್ಕಿನಲ್ಲಿ ಇಡಲಾದ ಸರಿಯಾದ ಹೆಜ್ಜೆಯಾಗಿದೆ. ಉದ್ಯೋಗಕ್ಕಾಗಿ ಊರೂರು ಅಲೆಯುತ್ತಿರುವ ಅಸಹಾಯಕ ಕೃಷಿ ಕೂಲಿಕಾರರ ಬದುಕಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಈ ಕಾಯ್ದೆಯನ್ನು ಸರ್ಕಾರವು ನವ ಉದಾರೀಕರಣ ನೀತಿಗಳ ಪರವಾದ ಶಕ್ತಿಗಳ ಒತ್ತಡಕ್ಕೆ ಮಣಿದು ಕೈಬಿಡಬಾರದೆಂದೂ, ಈ ಕಾಯ್ದೆಯನ್ನು ಪೈಲೆಟ್ ಕಾರ್ಯಕ್ರಮವಾಗಿ ದೇಶದ ಕೆಲವೇ ಆಯ್ದ ಜಿಲ್ಲೆಗಳಲ್ಲಿ ಮಾತ್ರ ಜಾರಿ ಮಾಡುವ ಉದ್ದೇಶವನ್ನು ಕೈಬಿಟ್ಟು ಎಲ್ಲಾ ಜಿಲ್ಲೆಗಳಲ್ಲಿಯೂ ಜಾರಿಗೆ ತರಬೇಕೆಂದು ಮಂಡ್ಯ ನಗರದ 'ಕಾಮ್ರೇಡ್ ಸೂರ್ಯನಾರಾಯಣರಾವ್ ಸಭಾಂಗಣದಲ್ಲಿ ನಡೆದ ಕೃಷಿ ಕೂಲಿಕಾರರ 3ನೇ ರಾಜ್ಯ ಸಮ್ಮೇಳನವ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ."


ನಿತ್ಯಾನಂದಸ್ವಾಮಿ


ಚಂದ್ರಪ್ಪ ಹೊಸ್ಕೇರಾ

ಈ ಕಾಯ್ದೆಗೆ ಒತ್ತಾಯಿಸಿ ಬರುವ ಡಿಸೆಂಬರ್ 10 ರಂದು ಎಲ್ಲಾ ತಾಲ್ಲೂಕುಗಳಲ್ಲಿ ತಹಶೀಲ್ದಾರರ ಕಛೇರಿಯ ಎದುರು ಕೃಷಿ ಕೂಲಿಕಾರರ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲು ಸಮ್ಮೇಳನವು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿತು.



ನೂತನ ಕಾರ್ಯಕಾರಿ ಸಮಿತಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಕ್ಕೆ 33 ಜನ ಸದಸ್ಯರುಳ್ಳ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನವು ಆಯ್ಕೆ ಮಾಡಿ ಸಧ್ಯಕ್ಕೆ 7 ಸ್ಥಾನಗಳನ್ನು ಖಾಲಿ ಇಡಲು ನಿರ್ಧರಿಸಿತು. ಆಯ್ಕೆಯಾದ 26 ಜನ ಸದಸ್ಯರು ತಮ್ಮ ಪದಾಧಿಕಾರಿಗಳನ್ನು ಆಯ್ಕೆ ಮಾಡಿದರು.

ಪದಾಧಿಕಾರಿಗಳು

ನಿತ್ಯಾನಂದಸ್ವಾಮಿ - ಅಧ್ಯಕ್ಷರು

ಜಿ.ಎನ್.ನಾಗರಾಜ್ - ಉಪಾಧ್ಯಕ್ಷರು

ಕೆ.ಬಾಳಪ್ಪ - ಉಪಾಧ್ಯಕ್ಷರು

ಕರಿಯಪ್ಪ ಅಚ್ಚೊಳ್ಳಿ - ಉಪಾಧ್ಯಕ್ಷರು

ಹಕ್ಕಲಗೌಡ ಪಾಟೀಲ್ - ಉಪಾಧ್ಯಕ್ಷರು

ಚಂದ್ರಪ್ಪ ಹೊಸ್ಕೇರಾ -ಪ್ರಧಾನ ಕಾರ್ಯದರ್ಶಿ

ಸಹ ಕಾರ್ಯದರ್ಶಿಗಳು **ಪುಟ್ಟಮಾದಯ್ಯ**
ಇ.ಆರ್.ಯಲ್ಲಪ್ಪ
ಕೆ.ನಾಗರಾಜ
ಎಚ್.ಎಂ.ವಿಶ್ವನಾಥಸ್ವಾಮಿ

ರಾಜ್ಯ ಸಮಿತಿ ಸದಸ್ಯರು : ಲಿಂಗಪ್ಪ ಹಣವಾಳ, ಗಂಗಾಧರಸ್ವಾಮಿ, ಬಸವರಾಜ, ಸೋಮಮ್ಮ (ಗಂಗಾವತಿ ತಾಲ್ಲೂಕ್) ಪುಟ್ಟಮಾದೇಗೌಡ, ಮಹದೇವಮ್ಮ(ಮಳವಳ್ಳಿ ತಾಲ್ಲೂಕ್) ಎಬಿನ್ಯೆಜರ್, ಗಾಯತ್ರಿ (ಮಂಡ್ಯ ತಾಲ್ಲೂಕ್), ಎನ್.ಕುಮಾರ್, ಕಾಳಮ್ಮ (ಶಿರುಗುಪ್ಪ ತಾಲ್ಲೂಕ್), ಡಿ.ಶಂಕ್ರಪ್ಪ (ಕುಷ್ಟಗಿ ತಾಲ್ಲೂಕ್), ತಿಪ್ಪಯ್ಯ ನಾಯಕ್ (ದೇವದುರ್ಗ ತಾಲ್ಲೂಕ್), ಮಹದೇಶ) (ಆನೆಕಲ್ ತಾಲ್ಲೂಕ್), ಸಿದ್ದಪ್ಪ (ಬೆಂಗಳೂರು ದಕ್ಷಿಣ ತಾಲ್ಲೂಕ್), ದೋಗು ಸುವರ್ಣ (ಉಡುಪಿ ತಾಲ್ಲೂಕ್), ಮಹಾಂತಪ್ಪ ಅಫಜಲ್‌ಪುರ ತಾಲ್ಲೂಕ್.

ವರದಿ - **ಚಂದ್ರಪ್ಪ ಹೊಸ್ಕೇರಾ**

ಕೋಮುವಾದಿಗಳ ವಿಷಜಾಲ

ಪುಟ 2 ರಿಂದ

ಆದರೆ ಇತ್ತಿಚೆಗೆ ಹೊನ್ನಾವರದಲ್ಲಿ ಉದ್ಘಾಟನೆಗೊಂಡ ಬಜರಂಗದಳ ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಸಂಘರ್ಷದ ವಾತಾವರಣ ನಿರ್ಮಿಸಿತು. ಈ ತಾಲೂಕಿನಲ್ಲಿ ಬೇರೆ ಯಾವುದೇ ಜನಪರ ಸಮಸ್ಯೆಗಳು ಇವರ ಹೋರಾಟದ ಸಂಗತಿ ಆಗುವ ಬದಲು 'ಹೆಣ ಹೂಳುವ ಸ್ಥಳ' ಇವರ ಹೋರಾಟ ಸಂಗತಿಯಾದದ್ದು ದುರ್ದೈವ. ಈ ಸ್ಥಳವನ್ನು ಖಬರಸ್ಥಾನಕ್ಕಾಗಿ ಮುಸ್ಲಿಂರಿಗೆ ಕೊಡಬಾರದೆಂದು ಗಲಾಟೆ ಮಾಡಿದರು. ಅದಕ್ಕೆ 'ಚಂದಾವರ ಚಲೋ' ಎಂದು ತಾಲೂಕಿನ ವಿವಿಧ ಭಾಗಗಳಿಂದ ಬಂದು ಗಲಾಟೆ ಮಾಡಿದರು. ಚಂದಾವರದ ಜನ ಇದಕ್ಕೆ ಸ್ಪಂದಿಸದೇ ಇದ್ದರೂ ಹೊರಗಿನವರ ಗಲಾಟೆ ಹೆಚ್ಚಾಯಿತು; ಖಬರಸ್ಥಾನಕ್ಕೆ ಹಾಕಿಕೊಂಡ ಕಲ್ಲಿನ ಗೋಡೆಯನ್ನು ಕೆಡವಲು ಆಗ್ರಹಿಸಿದರು. ಅಧಿಕಾರಿಗಳು ಈ ಸಂದರ್ಭದಲ್ಲಿ ಇನ್ನು ಸರಿಯಾಗಿ ತಮ್ಮ ಕರ್ತವ್ಯ ನಿರ್ವಹಸಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ; ಜನರಿಗೆ ಸತ್ಯ ಹೇಳಬಹುದಾಗಿತ್ತು. ಇದರ ಬಗ್ಗೆ ಅಧಿಕಾರಿಗಳು ಲಕ್ಷ್ಯವಹಿಸದೇ 10-15 ದಿನಗಳ ಗಡುವು ಕೊಟ್ಟು, ಈಗ ಅವರು ಹಾಕಿಕೊಂಡ ಗೋಡೆಯನ್ನು ಸಂಪೂರ್ಣ ಕೆಡವಿದ್ದಾರೆ. ಭಜರಂಗ ದಳಿಗಳು, ಸಂಘ ಪರಿವಾರದವರು ಇದು ತಮ್ಮ ದಿಗ್ವಿಜಯವೆಂದು ಕೇಕೆ ಹಾಕುತ್ತಿದ್ದಾರೆ. ಮತ್ತೆ ಈ ಪಡೆ ಖಬರಸ್ಥಾನ, ಇತ್ಯಾದಿ ಸ್ಥಳ ಪರಿಶೀಲನೆಯಲ್ಲಿರಬಹುದು.

ಅಸಂಬದ್ಧ ಪ್ರತಾಪ ಮಾಡಿದ ಪ್ರಮೋದ ಮುತಾಲಿಕ್ ಬಂಧನ ವಿರೋಧಿಸಿ ಹೋರಾಟ. ಕಂಚಿ ಸ್ವಾಮಿ ಬಂಧನ ವಿರೋಧಿಸಿ ಬಂದ್ ಹೀಗೆ ಬೇಡದಿರುವ ಸಂಗತಿಗಳಿಗಾಗಿ, ಅವರ ಹೋರಾಟ ಹೆಚ್ಚಾಗುತ್ತಿದೆ. ವ್ಯಾಪಾರಸ್ಥರೇ ಪ್ರಮುಖವಾಗಿರುವ ತಾಲೂಕು ಪ್ರದೇಶದಲ್ಲಿ ಅಂಗಡಿಮುಚ್ಚುತ್ತಾರೆ. ಇನ್ನು ಕೆಲವರು ಇವರ ದಾದಾಗಿರಿಗೆ ಹೆದರಿ ಅಂಗಡಿ ಮುಚ್ಚುತ್ತಾರೆ. ಆದರೆ ಇವರ ಅಪಾಯವಂತೂ ಜಿಲ್ಲೆಯಲ್ಲಿ ಹೆಚ್ಚುತ್ತಿರುವುದು ಸತ್ಯ. ಈ ಬಗ್ಗೆ ಪ್ರಗತಿಪರರು ಜಾತ್ಯಾತೀತವಾದಿಗಳು ಹೆಚ್ಚು ಗಂಭೀರವಾಗಿ ಯೋಚಿಸಬೇಕಾಗಿದೆ.

ಈ ಸಂದರ್ಭದಲ್ಲೂ ಸಿ.ಪಿ.ಐ(ಎಂ), ಜನತಾದಳ(ಜಾತ್ಯಾತೀತ) ಪತ್ರಿಕಾ ಹೇಳಿಕೆಯ ಮೂಲಕ, ಸಭೆಗಳಲ್ಲಿ ಇವರ ಕೃತ್ಯವನ್ನು ಖಂಡಿಸಿವೆ. ಕಾಂಗ್ರೆ ಬಾಯ್ಮುಚ್ಚಿ ಕುಳಿತಿದೆ. ಅಧಿಕಾರದ ಹಪಹಪಿಕೆಯಲ್ಲೇ ಮುಳುಗಿದ ಕಾಂಗ್ರೆ ಇಂತಹ ಸಂದರ್ಭದಲ್ಲಿ ಬಾಯ್ಬಿಡದಿದ್ದರೆ, ಜಿಲ್ಲೆಯಲ್ಲಿ ಖಾಯಂ ಆಗಿ ಬಾಯ್ಮುಚ್ಚಿ ಕುಳಿತುಕೊಳ್ಳುವ ಸ್ಥಿತಿ ಬಂದರೆ ಆಶ್ಚರ್ಯವಿಲ್ಲ.

- ನಿಸರ್ಗ


ಭಟ್ಕಳ : ಸದಾ ಉದ್ವಿಗ್ನತೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ

18ನೇ ರಾಜ್ಯ ಸಮ್ಮೇಳನದ ಯಶಸ್ಸಿಗೆ

ಸ್ವಾಗತ ಸಮಿತಿ ರಚನೆ

ಸಿದ್ದತೆ ಆರಂಭ

ಪಕ್ಷದ 18ನೇ ರಾಜ್ಯ ಸಮ್ಮೇಳನವು 20
ನೇ ಇಸವಿ ಜನವರಿ 22,23,24 ಮತ್ತು
ರಂದು ಉಡುಪಿಯಲ್ಲಿ ನಡೆಯಲಿದೆ. ರಾ
ಸಮ್ಮೇಳನದ ಸಿದ್ಧತೆಗೆ ಸಂಬಂಧಪ
ತಾರೀಕು 17-10-2004 ರಂದು ಕಾ
ಎ.ಎಸ್.ಆಚಾರ್ಯರವರ ಅಧ್ಯಕ್ಷತೆಯ
ಪಕ್ಷದ ಸದಸ್ಯರ ಮತ್ತು ಸಾಮೂಹಿ
ಸಂಘಟನೆಗಳಲ್ಲಿರುವ ಮುಖ್ಯಕಾರ್ಯಕತ
ವಿಸ್ತೃತ ಸಭೆಯು ಸೇರಿತು. 115 ಮಂ
ಸದಸ್ಯರಿರುವ ಒಂದು ಸ್ವಾಗತ ಸಮಿತಿಯ
ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರ
ಕಾಂ.ಡೇವಿಡ್ ಎ.ಕರ್ಕಡ ಮತ
ಕಾರ್ಯದರ್ಶಿಯಾಗಿ ಕಾಂ.ಕೆ.ಶಂಕರವರ
ಆಯ್ಕೆ ಮಾಡಲಾಗಿದೆ. 4 ಉಪಸಮಿತಿಗಳ
ರಚಿಸಲಾಗಿದೆ.

25 ಸದಸ್ಯರಿರುವ ಪ್ರಚಾರ ಸಮಿ
ಕಾಂ.ಚಂದ್ರಶೇಖರ್.ವಿ ಯವರ
ಸಂಚಾಲಕರಾಗಿ, 19 ಮಂದಿ ಸದಸ್ಯರಿರು
ಹಣಕಾಸು ಸಮಿತಿಗೆ ಕೆ.ಶಂಕರರವರ
ಸಂಚಾಲಕರಾಗಿ 5 ಮಂದಿ ಸದಸ್ಯರಿರು
ಊಟೋಪಚಾರದ ಸಮಿತಿ
ಸಂಚಾಲಕರಾಗಿ ಡೇವಿಡ್ ಎ.ಕರ್ಕಡ ಹಾ
12 ಮಂದಿ ಸದಸ್ಯರಿರುವ ಸ್ವಯಂ ಸೇವ
ಸಮಿತಿಯ ಸಂಚಾಲಕರಾಗಿ ವಿ.ವಿಶ್ವನಾಥ
ರವರನ್ನು ಆಯ್ಕೆ ಮಾಡಲಾಗಿದೆ.

ಸ್ವಯಂ ಸೇವಕರ ಸಂಘಟನೆಗೆ ಆದ
ನೀಡಬೇಕೆಂದು ನಿರ್ಧರಿಸಿ 10 ಮ
ಸದಸ್ಯರಿರುವ ಒಂದು ಸಮಿತಿಯನ್ನು ರಚಿ
ಕಾಂ.ಮಹಾಬಲ ವಡೆ
ಹೋಬಳಿಯವರನ್ನು ಸಂಚಾಲಕರನ್ನಾ
ಆಯ್ಕೆ ಮಾಡಲಾಗಿದೆ. ಸುಮಾರು
ಮಂದಿ ಗಂಡಸರು ಹಾಗೂ 200 ಮ
ಮಹಿಳೆಯರು ಸಮವಸ್ತ್ರ ಹೊಂದಿದ ಸ್ವ
ಸೇವಕರನ್ನು ಸಂಘಟಿಸಲು ನಿರ್ಧರಿಸಲಾ

ಪ್ರಚಾರ ಆರಂಭಿಸಲು ಹಾ
ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು
ಸಂಗ್ರಹಕ್ಕೆ ನಿರ್ಧರಿಸಲಾಗಿದೆ. ಪ
ಶಾಖೆಗಳು ಹಾಗೂ ಸಾಮೂ
ಸಂಘಟನೆಗಳ ಘಟಕಗಳಿರುವ ಪ್ರ
ಗ್ರಾಮಗಳಲ್ಲಿ ಗೋಡೆಬರಹ ಮ
ಬ್ಯಾನರ್ ಹಾಕಿ ಪ್ರಚಾರ ಆರಂಭ
ನಿರ್ಧರಿಸಲಾಗಿದೆ.

ಪಕ್ಷದ ರಾಜ್ಯ ಸಮ್ಮೇಳನದ ಪ್ರ
ಸಮ್ಮೇಳನ ಉಡುಪಿಯಲ್ಲಿ 200
ಇಸವಿಯ ಜನವರಿ ತಿಂಗಳಲ್ಲಿ ತಾರೀ
ರಿಂದ 25 ರವರೆಗೆ ಬನ್ನಂಜೆಯ
ನಾರಾಯಣ ಗುರು ಕಲ್ಯಾಣ ಮಂಟ
ನಡೆಯಲಿದೆ. ಜನವರಿ 25 ನೇ ತಾ
ಬೃಹತ್ ರ್‍ಯಾಲಿ ಹಾಗೂ ಸಾರ್ವಜನಿ
ನಡೆಯಲಿದೆ. ಪಕ್ಷದ ಪೊಲಿಟ್ ಬ್ಯು
ಸದಸ್ಯರಾದ ಕಾಮ್ರೇಡ್ ಪಿ.ರಾಮಚಂ
ಮತ್ತು ಕಾಮ್ರೇಡ್ ಸೀತಾರಾಮ್
ಹಾಗೂ ಕೇಂದ್ರ ಸಮಿತಿ ಸದಸ
ಕಾಂ.ವರದರಾಜನ್ ಸಮ್ಮೇ
ಕಾರ್ಯಕ್ರಮಗಳಲ್ಲಿ ಭಾಗವಹಿಸುವರು

ಪ್ಯಾಲೆಸ್ತೀನ್ ಸ್ವಾತಂತ್ರ್ಯದ ಕನಸಿಗೆ ಸಾವಿಲ್ಲ !

ಪುಟ 5 ರಿಂದ

...ತ್ತದದಿಂದಾಗಿ ಮಾತ್ರ ಅರಾಫತ್ ...ಉಳಿದರು.

...ದೇ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ...ಜ್ ಬುಷ್ ಪ್ಯಾಲೆಸ್ತೀನ್‌ಗೆ 'ರೋಡ್ ಮ್ಯಾಪ್' ಒಂದನ್ನು ಘೋಷಿಸಿದರು. ಇಸ್ರೇಲಿ ಝಿಯೋನಿಸ್ಟರ ಕಡೆ ವಾಲಿದ್ದ ಈ 'ರೋಡ್ ಮ್ಯಾಪ್'ನ ಪ್ರಸ್ತಾವಗಳನ್ನು ಇಸ್ರೇಲ್ ಜಾರಿ ...ಡಲಿಲ್ಲ. ಅಮೆರಿಕವೇ 'ರೋಡ್‌ಮ್ಯಾಪ್' ...ಗ ಮರೆತುಬಿಟ್ಟಿದೆ. ಬೇರೆ ಯಾರೂ ಅದರ ...ದ್ದಿ ಎತ್ತುವುದಿಲ್ಲ.

...ಲ್ಲೆಡೆ ಪ್ಯಾಲೆಸ್ತೀನ್‌ಗೆ ಬೆಂಬಲ

PLO ಪ್ಯಾಲೆಸ್ತೀನ್ ತಾಯ್ನಾಡು ...ದ್ದುಕೊಳ್ಳಲು ಇನ್ನೂವರೆಗೆ ಆಗದಿದ್ದರೂ, ...ರಾಫತ್ ನಾಯಕತ್ವದಲ್ಲಿ ಅದೊಂದು ವಿಫಲ ...ಯತ್ನ ಎನ್ನಲಾಗದು. ಅರಾಫತ್ ...ಯಕತ್ವದಲ್ಲಿ PLO ಈ ಅವಧಿಯಲ್ಲಿ ಹಲವು ...ಫಲತೆ ಕಂಡಿದೆ. ತಮ್ಮ ಉದ್ದೇಶಕ್ಕೆ ...ಗತ್ತಿನಾದ್ಯಂತ ಬೆಂಬಲ ಗಳಿಸಿದೆ. 1974 ರಷ್ಟು ...ಂದೆ ಅರಾಫತ್‌ಗೆ ವಿಶ್ವಸಂಸ್ಥೆಯ ಜನರಲ್ ...ಸೆಂಬ್ಲಿ ಉದ್ದೇಶಿಸಿ ಮಾತನಾಡಲು ಆಹ್ವಾನ ...ಕ್ಕಿತ್ತು. ಹಲವು ದೇಶಗಳಿಗೆ ಭೇಟಿ ನೀಡಲು ...ಮೇಲೆ ಅರಾಫತ್‌ಗೆ ಆಹ್ವಾನ ಸಿಕ್ಕಿತ್ತು. ಹಲವು ...ಶಗಳು ಪ್ಯಾಲೆಸ್ತೀನ್ ಮತ್ತು ಅರಾಫತ್ ...ಯಕತ್ವಕ್ಕೆ ಮಾನ್ಯತೆ ನೀಡಿ, ತಮ್ಮ ಆಫೀಸು ...ರೆಯಲು ಅನುಮತಿ ಕೊಟ್ಟಿದ್ದವು.

...ಪ್ಯಾಲೆಸ್ತೀನ್ ತಾಯ್ನಾಡನ್ನು ವಿರೋಧಿಸುವಲ್ಲಿ ...ಮೆರಿಕ-ಇಸ್ರೇಲಿ ಮತ್ತು ಅವರ ...ಸಾಮ್ರಾಜ್ಯಶಾಹಿ - ಝಿಯೋನಿಸ್ಟ್ ಗ್ಯಾಂಗ್ ...ಗತ್ತಿನಲ್ಲೇ ಏಕಾಂಗಿಯಾಗಿತ್ತು. ವಿಶ್ವಸಂಸ್ಥೆಯ ...ಂಘಟನೆ ಗಳಲ್ಲೂ ಅವರು ಒಂಟಿಯಾಗಿದ್ದರು. ...ಮ್ಮ ದೇಶದಲ್ಲಿ ಬಿಜೆಪಿಯಂತಹ ಕುರುಡು ...ಮ್ರಾಜ್ಯ ಶಾಹಿ-ಪರ ಶಕ್ತಿಗಳು ಬಿಟ್ಟರೆ ...ಯಾಲೆಸ್ತೀನ್‌ಗೆ ಜಗತ್ತಿನಾದ್ಯಂತ ಭಾರಿ ಬೆಂಬಲ ...ದೊರಕಿತ್ತು.

...ಪ್ಯಾಲೆಸ್ತೀನ್ ಸ್ವಾತಂತ್ರ್ಯ ಹೋರಾಟಕ್ಕೆ ಪ್ರಬಲ ...ಬೆಂಬಲ ಸೋವಿಯತ್ ಒಕ್ಕೂಟ ಮತ್ತು ...ಸಮಾಜವಾದಿ ದೇಶಗಳಿಂದ ದೊರಕಿತ್ತು. ...ನೈತಿಕ, ರಾಯಭಾರ ಮತ್ತು ಆರ್ಥಿಕ ಬೆಂಬಲ ...ನೀಡಿತ್ತು. ಸಮಾಜವಾದಿ ಬಣದ ಬಲವಾದ ...ಬೆಂಬಲದಿಂದ ಮಾತ್ರವೇ ಅಮೆರಿಕ-ಇಸ್ರೇಲಿ ...ಗ್ಯಾಂಗ್ ಪ್ಯಾಲೆಸ್ತೀನ್ ಸ್ವಾತಂತ್ರ್ಯ ಹೋರಾಟ ...ಗಾರರನ್ನು ಹೊಸಕಿ ಹಾಕುವುದನ್ನು ತಡೆಯಿತು ...ಎಂದರೆ ಅತಿಶಯೋಕ್ತಿಯಾಗಲಾರದು. 90 ರ ...ದಶಕದ ಆರಂಭದಲ್ಲಿ ಸಮಾಜವಾದಿ ಬಣದ ...ಪತನವಾಗುತ್ತಲೇ, ಪ್ಯಾಲೆಸ್ತೀನ್ ಸ್ವಾತಂತ್ರ್ಯ ...ಹೋರಾಟಗಾರರು ಬಹಳ ಸಂಕಷ್ಟ ...ಎದುರಿಸಬೇಕಾಯಿತು ಎಂದು ಇಲ್ಲಿ ...ನೆನಪಿಸಿಕೊಳ್ಳಬಹುದು.

ಪ್ಯಾಲೆಸ್ತೀನ್ನರ ಜತೆ ನಿಂತ ಇನ್ನೊಂದು ...ದೊಡ್ಡ ಶಕ್ತಿ ಎಂದರೆ ಅಲಿಪ್ತ ಚಳುವಳಿ. ಆಗ ಅಲಿಪ್ತ ಚಳುವಳಿ ಜಗತ್ತಿನ ಬಹುಭಾಗ, ...ಬಹುಸಂಖ್ಯಾತ ಜನರನ್ನು ಆವರಿಸಿತ್ತು. ...ವಸಾಹತುಶಾಹಿ- ಸಾಮ್ರಾಜ್ಯಶಾಹಿ ...ಬಂಧನದಲ್ಲಿದ್ದು, ತೀಕ್ಷ್ಣ-ರಕ್ತಸಿಕ್ತ ವಿಮೋಚನಾ ...ಹೋರಾಟ ಮಾಡಿದ ಈ ದೇಶಗಳ ಜನತೆಗೆ, ...ಸ್ವಾತಂತ್ರ್ಯದ ಬೆಲೆ ಗೊತ್ತಿತ್ತು. ಇತರ ಜನಗಳ ...ಸ್ವಾತಂತ್ರ್ಯದ ಬೆಲೆ ಸಹ ಗೊತ್ತಿತ್ತು. ಕಳೆದ 35 ...ವರ್ಷಗಳಲ್ಲಿ ಪ್ರತಿ ಅಲಿಪ್ತ ಸಮ್ಮೇಳನದಲ್ಲಿ ...ಪ್ಯಾಲೆಸ್ತೀನ್‌ಗೆ ಪ್ರಾತಿನಿಧ್ಯ ಇತ್ತು.

ಪ್ಯಾಲೆಸ್ತೀನ್ ವಿಮೋಚನೆಗೆ ಭಾರತ ...ಮೊದಲಿನಿಂದಲೂ ಬಲವಾಗಿ ಬೆಂಬಲಿಸುತ್ತಾ ...ಬಂದಿದೆ. ಬಿಜೆಪಿ ಆಳ್ವಿಕೆಯ ಕಳೆದ ಆರು ...ವರ್ಷಗಳು ಮಾತ್ರ ಅವಮಾನಕಾರಿ ಅಪವಾದ. ...PLO ಗೆ ತನ್ನ ರಾಯಭಾರ ಕಚೇರಿ ತೆರೆಯಲು ಆಹ್ವಾನ ನೀಡಿದ ಪ್ರಥಮ ದೇಶ ಭಾರತವಾಗಿತ್ತು. ಅದೇ ರೀತಿ ದಕ್ಷಿಣ ಆಫ್ರಿಕಾದ ANC, ನಮೀಬಿಯಾದ SWAPO, ಸಹಾರಾದ SADR - ಮುಂತಾದ ವಿಮೋಚನಾ ಹೋರಾಟಗಳಿಗೂ ಇದೇ ರೀತಿಯ ಬೆಂಬಲ ನೀಡಿತ್ತು. ಪ್ಯಾಲೆಸ್ತೀನ್ ಜನತೆಗೆ ಭಾರತ ಎಲ್ಲಾ ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲೂ ಎಲ್ಲಾ ಬೆಂಬಲ ನೀಡಿತು.

ಪ್ಯಾಲೆಸ್ತೀನ್ ಜನತೆಗೆ ಬೆಂಬಲ ಆಣಿನೆರೆಸಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ವಹಿಸಿದ ಪಾತ್ರದ ಬಗ್ಗೆ ಹೇಳುವುದು ಇಲ್ಲಿ ಅಪ್ರಸ್ತುತವಾಗಲಾರದು. ನಮ್ಮ ಪ್ರಬಲ ಸಾಮ್ರಾಜ್ಯಶಾಹಿ- ವಿರೋಧಿ ನೀತಿಯ ಅಂಗವಾಗಿತ್ತು ಇದು. ನಾವು ಅರಾಫತರನ್ನು ವೈಯಕ್ತಿಕವಾಗಿ ಬಲ್ಲೆ. ಹಲವು ಸಂದರ್ಭಗಳಲ್ಲಿ ಅರಾಫತ್ ನೇರವಾಗಿ ಭೇಟಿ ಮಾಡಿ ಅಭಿಪ್ರಾಯ - ವಿನಿಮಯ ಮಾಡಿಕೊಳ್ಳುತ್ತಿದ್ದರು. 1991 ಕೊಲ್ಲಿ ಯುದ್ಧದಲ್ಲಿ ಚಂದ್ರಶೇಖರ್ ಸರ್ಕಾರ ಅಮೆರಿಕನ್ ಯುದ್ಧ ವಿಮಾನಗಳಿಗೆ ಇಂಧನ ತುಂಬಿಸುವ ಸವಲತ್ತು ಒದಗಿಸಿದಾಗ ಅದರ ವಿರುದ್ಧ ಪ್ರತಿಭಟಿಸಲು ಅರಾಫತ್ ಹೇಳಿದರು. ಹಲವು ಬಾರಿ ತಮ್ಮ ಟುನಿಸ್ ಮುಖ್ಯ ಕಚೇರಿಗೆ ಆಹ್ವಾನಿಸಿದ್ದರು. ಒಂದು ಬಾರಿ PLO ದ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಉದ್ದೇಶಿಸಿ ಮಾತನಾಡುವಂತೆ ಆಹ್ವಾನಿಸಿದ್ದರು. PLO ಮತ್ತು ಇತರ ಹಲವು ವಿಮೋಚನಾ ಹೋರಾಟಗಳಿಗೆ ಸಿಪಿಐ(ಎಂ) ಮತ್ತು



ಎಡಪಕ್ಷಗಳ ಬೆಂಬಲದಲ್ಲಿ ಅಚಲ ವಿಶ್ವಾಸವಿತ್ತು. ಯಾಸೆರ್ ಅರಾಫತರ ನಿಧನ ನನಗೆ ವೈಯಕ್ತಿಕ ನಷ್ಟ ಕೂಡಾ.

ಪತ್ರಿಕೆಗಳ ಅರಾಫತ್ - ವಿರೋಧಿ ಪ್ರಲಾಪ

ಯಾಸೆರ್ ಅರಾಫತ್ ನಿಧನ ಪಶ್ಚಿಮ ಏಶ್ಯಾದಲ್ಲಿ ಶಾಂತಿಗೆ ಹೊಸ ದಾರಿಗಳನ್ನು ತೆರೆಯುತ್ತದೆ ಎಂಬ ಅಸಂಬದ್ಧ ಪ್ರಚಾರ ಕೈಗೊಂಡಿದೆ ಬೂರ್ಜ್ವಾ-ಸಾಮ್ರಾಜ್ಯಶಾಹಿ ಪತ್ರಿಕೆಗಳು ಆ ಮೂಲಕ ತನ್ನ ನಿಜವಾದ ಬಣ್ಣ ಬಯಲು ಮಾಡಿದೆ. ನವೆಂಬರ್ 12ರ ಹಿಂದೂಸ್ತಾನ್ ಟೈಮ್ಸ್ 'ಅರಾಫತ್ ನಿಧನ ಶಾಂತಿಗೆ ಇನ್ನೊಂದು ಅವಕಾಶ' ಎಂಬ ಹಿಗ್ಗಿನ ತಲೆಬರಹ ಹೊಂದಿತ್ತು, 'ಅರಾಫತ್ ನಿಧನ ಒಂದು ಅಧ್ಯಾಯದ ಕೊನೆ, ಪ್ಯಾಲೆಸ್ತೀನ್‌ಗೆ ಹೊಸ ಕಿಟಕಿ' ಎಂದು ಅದೇ ದಿನ ಇಂಡಿಯನ್ ಎಕ್ಸ್‌ಪ್ರೆಸ್ ಒದರಿತು.

"1993 ರ ಒಸ್ಲೊ ಒಪ್ಪಂದಕ್ಕೆ ಅರಾಫತ್ ಇಸ್ರೇಲಿ ನಾಯಕ ರಬಿನ್ ಜತೆ ನೊಬೆಲ್ ಶಾಂತಿ ಪ್ರಶಸ್ತಿ ಗಳಿಸಿದ್ದರು. ಅರಬ್-ಇಸ್ರೇಲಿ ಘರ್ಷಣೆಯ ಕೊನೆಯಾಗುವುದು ಎಂಬ ಆಸೆ ಹುಟ್ಟಿಸಿತ್ತು ಈ ಒಪ್ಪಂದ. ಆದರೆ ಅರಾಫತ್‌ಗೆ ಇಸ್ರೇಲಿ ಪ್ರಜೆಗಳ ವಿರುದ್ಧ ಆತ್ಮಹತ್ಯ-ದಾಳಿಗಳನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ, ಪ್ಯಾಲೆಸ್ತೀನ್‌ಗೆ ಹೊಸ ಪ್ರದೇಶಗಳನ್ನು ಕೊಡಲು ತಯಾರಿದ್ದ ಇಸ್ರೇಲಿಗಳ ಬೆಂಬಲವನ್ನು ಅರಾಫತ್



ಕಾಂ. ಇ.ಎಂ.ಎಸ್. ಮತ್ತು ಅರಾಫತ್

ಕಳೆದುಕೊಂಡರು..." ಇದು ನವೆಂಬರ್ 12 ರ ಹಿಂದೂಸ್ತಾನ್ ಟೈಮ್ಸ್ ನ ಮುಖಪುಟದ ಪ್ರಧಾನ ವರದಿಯ ಆಣಿಮುತ್ತುಗಳು. "PLO ... 1970 ರ ದಶಕದ ಅಲ್ಲೈಕ್ಷಿಪ ಆಗಿತು.... 2000 ರಲ್ಲಿ ಅಧ್ಯಕ್ಷ ಬಿಲ್ ಕ್ಲಿಂಟನ್ ಕರೆದ ಶೃಂಗಸಭೆಯಲ್ಲಿ ಇಸ್ರೇಲಿ ಪ್ರಧಾನಿ ಒರಾಕ್ ಪ್ಯಾಲೆಸ್ತೀನ್ ದೇಶ ಕೊಡಲು ತಯಾರಿದ್ದರು. ಆದರೆ ಅರಾಫತ್ ಅದನ್ನು ತಿರಸ್ಕರಿಸಿದರು. ಆಮೇಲೆ ಬರಾಕ್ ಗಾಜಾಪಟ್ಟಿ ಮತ್ತು ಪಶ್ಚಿಮ ದಂಡೆಯ ಶೇಕಡಾ 97 ಭಾಗ ಕೊಡುವ ಯೋಜನೆ ಮುಂದಿಟ್ಟರು.... ಕ್ಲಿಂಟನ್ ಮತ್ತು ಬರಾಕ್ ಸರ್ಕಾರ ಬಿಡುವರೆಗೆ ಇದು ಆಶೈರಾಗಲಿಲ್ಲ" ಎಂಬ ಹಸಿ ಸುಳ್ಳುಗಳನ್ನು ಮುಂದಿಟ್ಟಿದೆ ಹಿಂದೂಸ್ತಾನ್ ಟೈಮ್ಸ್. 'ಯುಎಸ್‌ಎ ಟುಡೆ' ಎನ್ನುವ ಅಮೆರಿಕನ್ ಪತ್ರಿಕೆಯ ವರದಿಯನ್ನು ಯಥಾವತ್ತಾಗಿ ಯಾವುದೇ ಟೀಕೆ-ಟಿಪ್ಪಣಿ ಇಲ್ಲದೆ ಇಳಿಸಿದೆ. ಅದರದ್ದೇ ಅಭಿಪ್ರಾಯ ಕಡಿಮೆ ಸಾಮ್ರಾಜ್ಯಶಾಹಿ-ಪರ ಇಲ್ಲ. ನವೆಂಬರ್ 15 ರ ಸಂಪಾದಕೀಯದಲ್ಲಿ "ಅರಬ್ ಮತ್ತು ಪ್ಯಾಲೆಸ್ತೀನ್ನರಲ್ಲಿ ಎತ್ತರದ ವ್ಯಕ್ತಿಯಾಗಿದ್ದರೂ, ಆತ ಚಾಣಾಕ್ಷ ರಾಜಕಾರಣಿಯೇನೂ ಆಗಿರಲಿಲ್ಲ. 1991 ರಲ್ಲಿ ಸದ್ದಾಂ ಹುಸೇನ್‌ಗೆ ಬೆಂಬಲದ ಉದಾಹರಣೆಯೇ ನೋಡಿ. ಆತನ ನಿಧನ ಸ್ವತಂತ್ರ ಪ್ಯಾಲೆಸ್ತೀನ್ ಪ್ರಭುತ್ವ ಹೊಮ್ಮಲು ಸಹಾಯ ಮಾಡಬಹುದು" ತನ್ನ ನಿಲುವನ್ನು ಪ್ರಕಟಿಸಿದೆ.

ಇದಕ್ಕಿಂತ ಸತ್ಯಕ್ಕೆ ದೂರವಾದದ್ದು ಇನ್ನೊಂದು ಇರಲಿಕ್ಕಿಲ್ಲ.

ಈ ಎಲ್ಲಾ ಸಾಮ್ರಾಜ್ಯಶಾಹಿ-ಬಾಲಬಡುಕ ಪತ್ರಿಕೆಗಳ ಪ್ರಕಾರ ಅರಾಫತ್ ಪ್ಯಾಲೆಸ್ತೀನ್ ಸ್ವಾತಂತ್ರ್ಯಕ್ಕೆ ತೊಡಕಾಗಿದ್ದ. ಇವರ ಪ್ರಕಾರ ಪ್ಯಾಲೆಸ್ತೀನ್ ಸ್ವಾತಂತ್ರ್ಯ ಹೋರಾಟಗಾರರು ಭಯೋತ್ಪಾದಕರು ಮತ್ತು ಕೊಲೆಗಡುಕರು. ಬ್ರಿಟಿಷ್-ಅಮೆರಿಕನ್ ಮಾನದಂಡ ಬಳಸಿದರೆ ಖುದಿರಾಂ ಬೋಸ್, ಭಗತ್ ಸಿಂಗ್, ಅಜಾದ್ ಮತ್ತು ಸೂರ್ಯಸೇನ್ ಎಲ್ಲರೂ ಭಯೋತ್ಪಾದಕರು ಮತ್ತು ಕೊಲೆಗಡುಕರು. ಬ್ರಿಟಿಷರು ಅವರನ್ನು ಹಾಗೆ ಕರೆಯುತ್ತಿದ್ದರು. 1991 ಕೊಲ್ಲಿ ಯುದ್ಧ ವಿರೋಧಿಸಿ, PLO ಮಾತ್ರವಲ್ಲ ನಾವೂ ಸೇರಿದಂತೆ ಹಲವರು ಜಗತ್ತಿನಾದ್ಯಂತ ಸದ್ದಾಂ ಹುಸೇನರಿಗೆ ಬೆಂಬಲ ಸೂಚಿಸಿದ್ದರು. ಸ್ವತಂತ್ರ ಪ್ಯಾಲೆಸ್ತೀನ್ ಬಗ್ಗೆ ಇಸ್ರೇಲಿ ಸರ್ಕಾರ ಧೋರಣೆ ಗೊತ್ತಿರುವವರಿಗೆ, ಇಸ್ರೇಲಿ ವಿಶಾಲ ಮನೋಭಾವದ ಕಟ್ಟುಕತೆಗಳು ಹಾಸ್ಯಾಸ್ಪದವೆಂದು ಗೊತ್ತು. ನಮ್ಮ ಪತ್ರಿಕೆಗಳು ಎಷ್ಟರಮಟ್ಟಿಗೆ ಕುರುಡು ಸಾಮ್ರಾಜ್ಯಶಾಹಿ-ಪರ ಧೋರಣೆ ಅನುಸರಿಸುತ್ತಿವೆ ಎಂಬುದರ ಉದಾಹರಣೆ ಇದು.

ಅರಾಫತ್ ಕನಸುಗಳಿಗೆ ಸಾವಿಲ್ಲ!

ಪ್ಯಾಲೆಸ್ತೀನ್ನರ 'ಭಯೋತ್ಪಾದನೆ' ಮತ್ತು ಇಸ್ರೇಲಿ 'ವಿಶಾಲ ಮನೋಭಾವ'ದ ವಾಶಿಂಗ್‌ಟನ್ ಮೂಲದ ಕಥೆಗಳನ್ನು ನಮ್ಮ ಪತ್ರಿಕೆಗಳು ಯಥಾವತ್ತಾಗಿ ಕೊಡುತ್ತಿವೆ. ಪ್ಯಾಲೆಸ್ತೀನ್ನರನ್ನು ಇನ್ನಷ್ಟು ಬಗ್ಗಿಸಿ, ಅಮೆರಿಕ ತನ್ನ 'ಪರಿಹಾರ ಸೂತ್ರ' ಒಪ್ಪುವಂತೆ ಮಾಡುವ ಬುಶ್ ಹುನ್ನಾರದ ಭಾಗ ಇದು. ಅವರು ಕೊಡುವ ಪರಿಹಾರವಾದರೂ ಏನು? ಪ್ಯಾಲೆಸ್ತೀನ್ನರ ಹೊಸ ನಾಯಕತ್ವ ಪ್ರಜಾಪ್ರಭುತ್ವ ಮತ್ತು ಕಾನೂನಿಗೆ ಬದ್ಧವಾಗಿದ್ದರೆ ಹೊಸ ಪ್ಯಾಲೆಸ್ತೀನ್ ಸಾಧ್ಯವಂತೆ? ಇದು ಹಿಂದಿನಿಂದಲೂ ಬಂದ ಪದ್ಧತಿ. ಬ್ರಿಟನ್-ಅಮೆರಿಕಗಳ ಪ್ಯಾಲೆಸ್ತೀನ್ನರ ಮೇಲೆ ಇನ್ನಿಲ್ಲದ ಶರತ್ತುಗಳನ್ನು ಹಾಕುತ್ತಾರೆ. ಆದರೆ ಇಸ್ರೇಲ್ ಮೇಲೆ ಅಂತಹ ಯಾವುದೇ ಶರತ್ತುಗಳಿಲ್ಲ. ತಾಯ್ನಾಡು ಇಲ್ಲದ ಜನ 'ಪ್ರಜಾಪ್ರಭುತ್ವ' ಸ್ಥಾಪಿಸುವುದು ಹೇಗೆ? ಇದ್ದ ಅವಕಾಶಗಳ ಒಳಗೆ ಪ್ಯಾಲೆಸ್ತೀನ್ನರು ಪ್ರಜಾಪ್ರಭುತ್ವ ಅಂಗೀಕರಿಸಿದ್ದಾರೆ. ಅಮೆರಿಕ ಪೂರ್ತಿ ನಂಬಿರುವ ಸೌದಿ ಅರೇಬಿಯಾ, ಕೊಲ್ಲಿ ದೇಶಗಳಿಗೂ ಎಷ್ಟೂ ಹೆಚ್ಚು 'ಪ್ರಜಾಪ್ರಭುತ್ವ' ಪ್ಯಾಲೆಸ್ತೀನ್‌ನಲ್ಲಿದೆ. ಪ್ಯಾಲೆಸ್ತೀನ್ ಸಮಸ್ಯೆ ಪರಿಹಾರ ಮಾಡಿ, ಪಶ್ಚಿಮ ಏಶ್ಯಾದಲ್ಲಿ ಶಾಂತಿ ತರುವುದು ಸಾಮ್ರಾಜ್ಯಶಾಹಿಗಳ ಉದ್ದೇಶವೇ ಅಲ್ಲ. ಪಶ್ಚಿಮ ಏಶ್ಯಾದಲ್ಲಿ ತಮ್ಮ ಹಿತಾಸಕ್ತಿ ಕಾಪಾಡಲು ಮೂಗು ತೂರಿಸಲು ಅವಕಾಶವಿರುವ ಪರಿಸ್ಥಿತಿ ಕಾಪಾಡುವುದು ಅವರ ಉದ್ದೇಶ. ಪಶ್ಚಿಮ ಏಶ್ಯಾದಲ್ಲಿ ರಕ್ತಪಾತಕ್ಕೆ ಈ ಸಾಮ್ರಾಜ್ಯಶಾಹಿಗಳೇ ಮೂಲಕಾರಣ.

ಆದರೆ ಈ ಸಾಮ್ರಾಜ್ಯಶಾಹಿಗಳು ಏನೇ ಪಿತೂರಿ ನಡೆಸಲಿ, ಏನೇ ಅಪಪ್ರಚಾರ ನಡೆಸಲಿ, ಪ್ಯಾಲೆಸ್ತನ್ನರ ಸ್ವಾತಂತ್ರ್ಯ ಹೋರಾಟವು ಭಯೋತ್ಪಾದನೆ ಎನ್ನಲಿ, ಪ್ಯಾಲೆಸ್ತೀನ್ನರ ಹೋರಾಟ ನಿಲ್ಲುವುದಿಲ್ಲ. ಯಾವುದೇ ಜಗತ್ತಿನ ಶಕ್ತಿ ಈ ಸ್ವಾತಂತ್ರ್ಯ ಹೋರಾಟ ನಿಲ್ಲಿಸಲು ಸಾಧ್ಯವಿಲ್ಲ. ಪಶ್ಚಿಮ ಏಶ್ಯಾದಲ್ಲಿ ಶಾಂತಿ ನೆಲೆಸುವಲ್ಲಿ ಜೆರೂಸಲೆಂ ರಾಜಧಾನಿಯಾದ ಪ್ಯಾಲೆಸ್ತೀನ್ ದೇಶದ ರಚನೆ ಒಂದೇ ಪರಿಹಾರ. ಅದು ಸಾಧ್ಯವಾಗುವವರೆಗೆ ಪ್ಯಾಲೆಸ್ತೀನ್ ಹೋರಾಟ ನಿಲ್ಲುವುದಿಲ್ಲ. ಅರಾಫತ್ ಈ ಹೋರಾಟದ ಪ್ರತೀಕವಾಗಿದ್ದರು. ರಮಲ್ಲಾದಲ್ಲಿ ಅರಾಫತ್ ಗೋರಿ ಅದರ ಪ್ರತೀಕವಾಗಿ ಮುಂದುವರೆಯುತ್ತದೆ.

ಅರಾಫತ್ ಇನ್ನಿಲ್ಲ.... ಆದರೆ ಪ್ಯಾಲೆಸ್ತೀನ್ ಸ್ವಾತಂತ್ರ್ಯದ ಕನಸುಗಳಿಗೆ ಸಾವಿಲ್ಲ!




ಕ್ರಾಂತಿಕಾರಿ ಕ್ಯಾಸ್ಟ್ರೋ ಜೊತೆಗೆ ಅರಾಫತ್

ಬೇತಾಳದ ಬಾಯಿಂದ ಶಾಂತಿಯ ಉಪದೇಶ

ನಮ್ಮ ರಕ್ತವೇ ಶ್ರೇಷ್ಠ, ಮಿಕ್ಕವರದೆಲ್ಲಾ ಕನಿಷ್ಠ! ನಾವು ಹುಟ್ಟಿರುವುದೇ ಜಗತ್ತನ್ನು ಆಳಲು, ಮಿಕ್ಕವರು ಇರುವುದೇ ಆಳಿಸಿಕೊಳ್ಳಲು. ಎಂಬುದು ಹಿಟ್ಲರ್ ಆಡಳಿತದ ಜರ್ಮನಿಯ ನಾಜಿವಾದ. ಇವರ ಫ್ಯಾಸಿಸಂ-ನಾಜಿಸಂನಿಂದಾಗಿ ಜಗತ್ತು ಕಂಡರಿಯದಂತಹ ಬೀಕರ ನರಮೇಧ ಹತ್ಯೆಯನ್ನು ಕಂಡಿತು. ಈ ನರಮೇಧ ಕುರಿತು ಒಂದು ಚಿತ್ರಕಲಾ ಪ್ರದರ್ಶನವು ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಏರ್ಪಟ್ಟಿದೆ. ಈ ಕುರಿತ ವರದಿ

ಹಿಟ್ಲರ್ ನಡೆಸಿದ ನರಮೇಧ ಎಂದೊಡನೆ, ಎಲ್ಲಾ ಜೀವಪರರು ನೋಡೋಣ ಎಂದು ಹೋಗುವುದು ಸಹಜ. ಅಂತೆಯೇ ಅನೇಕರು ಬಂದು ವೀಕ್ಷಿಸಿದ್ದಾರೆ. ಆದರೆ ಸ್ವಲ್ಪ ಸೂಕ್ಷ್ಮಮತಿಗಳಿಗೆ, ಆ ಪ್ರದರ್ಶನದ ಒಳ ದನಿಯಾಕೋ ವಿಭಿನ್ನವಾಗಿದೆಯಲ್ಲ ಎಂದನಿಸದೇ ಇರದು. ಇಡೀ ಚಿತ್ರ ಪ್ರದಶಶನದಲ್ಲಿ



ಯೆಹೂದಿಯರಿಗೆ ಆದ ಅನ್ಯಾಯ ದೌರ್ಜನ್ಯ, ದಬ್ಬಾಳಿಕೆಯನ್ನು ಚಿತ್ರಿಸಲಾಗಿದೆ. ಆದರೆ ಅದರಲ್ಲಿ ಚಿತ್ರಕ್ಕಿಂತ ಪದಗಳಿಗೆ ಹೆಚ್ಚು ಸ್ಥಾನವಿದ್ದು, ಚಿತ್ರದ ಮೂಲಕ ಓದು ಬರದವರಿಗೂ ಸಂದೇಶ ನೀಡಬಹುದಾಗಿದ್ದ ಅವಕಾಶವನ್ನು ಪ್ರದರ್ಶನವೇ ನಿರಾಕರಿಸಿಕೊಂಡಿದೆ. ಹಾಗಾಗಿ ಮೇಲ್ನೋಟಕ್ಕೆ ಸ್ವಲ್ಪ ನಿರಾಸೆ ಇದ್ದದ್ದೆ.

ಇಡೀ ಚಿತ್ರಪ್ರದರ್ಶನ ಅಂತಿಮವಾಗಿ ತಾರ್ಕಿಕವಾಗಿ ಸಾರುವ ಅಂಶವೆಂದರೆ "ನಾಜಿವಾದ-ಫ್ಯಾಸಿಸಂಗೆ ಬಲಿಯಾದ ಯೆಹೂದಿಯರಿಗೆ ಅಂತಿಮವಾಗಿ ಇದ್ದ ಏಕಮಾತ್ರ ಆಶಾಕಿರಣ ಎಂದರೆ ಅಮೇರಿಕಾ ಮತ್ತು ಇಸ್ರೇಲಿನ ಯೆಹೂದಿಯರು" ಎಂಬುದು. ಜಗತ್ತನ್ನು ಫ್ಯಾಸಿಸಂನಿಂದ ರಕ್ಷಿಸಿದ ಮಹಾನ್ ಕೀರ್ತಿಗೆ ಪಾತ್ರರಾಗಿರುವ ಸಮಾಜವಾದಿ ರಷ್ಯಾದ ಕೆಂಪು ಸೇನೆಯ ಕೊಡುಗೆಯನ್ನು ಸಮರ್ಪಕವಾಗಿ ಚಿತ್ರಿಸಿಲ್ಲ, ಮಾತ್ರವಲ್ಲ ಪ್ರಜ್ಞಾವಂತಿಕೆಯಿಂದ ಮರೆಮಾಚಲಾಗಿದೆ.

ಅಂತಿಮವಾಗಿ ಇಸ್ರೇಲ್ ರಾಷ್ಟ್ರದ 'ಜಿಯನಿಸಂ' (zionism) ಹಾಗೂ ಇಂದು ಅಲ್ಲಿನ ಸರ್ಕಾರ ಫ್ಯಾಲಿಸ್ಟೇನಿಯರ ಮೇಲೆ ನಡೆಸಿರುವ ದೌರ್ಜನ್ಯ, ದಬ್ಬಾಳಿಕೆ, ಮಾರಣ ಹೋಮವನ್ನು ಪ್ರತಿಪಾದಿಸಿಕೊಳ್ಳಲು ನಡೆಸಿದ ಪ್ರಯತ್ನವಾಗಿ ಇಡೀ ಚಿತ್ರ ಪ್ರದರ್ಶನ ಹೊರಹೊಮ್ಮಿದೆ. ಯೆಹೂದಿಯರಾದ ನಮ್ಮ ಮೇಲೆ ಹಿಟ್ಲರ್‌ನ ಇಂತಹ ದೌರ್ಜನ್ಯ ನಡೆದಿದೆ. ಜಗತ್ತಿನೆಲ್ಲೂ ನಮಗೆ ಇರಲು ಜಾಗ ಸಿಗಲಿಲ್ಲ. ಕೊನೆಯದಾಗಿ ಇಸ್ರೇಲ್ ಸ್ಥಾಪಿಸಿಕೊಂಡಿದ್ದೇವೆ. ಇರುವುದೊಂದೆ ಚಿಕ್ಕ ರಾಷ್ಟ್ರ ನಮ್ಮದು. ಅಲ್ಲಿಯೂ ಸಹಾ ಅರಬರು ನಮ್ಮನ್ನು ಇರಲು ಬಿಡುತ್ತಿಲ್ಲ ಎಂಬ ಅಳಲನ್ನು ತೋಡಿಕೊಳ್ಳಲು ಅತಿಯಾಗಿ ಹೆಣಗಿದ್ದಾರೆ.


ಇಡೀ ಚಿತ್ರ ಪ್ರದರ್ಶನವನ್ನು ಇಸ್ರೇಲ್‌ನ ಭಾರತದಲ್ಲಿನ ರಾಯಭಾರ ಕಛೇರಿ ಸಂಘಟಿಸಿದೆ. ಆದರೆ ನಾವು ಸಂಘಟಿಸಿದ್ದೇವೆ ಎಂದು ಬಹಿರಂಗವಾಗಿ ಹೇಳಿಕೊಳ್ಳಲು ತಯಾರಿಲ್ಲ. ಆದರೆ ಅಲ್ಲಿ ಹೋದವರಿಗೆ ಲಭ್ಯವಾಗುವ ಸಾಹಿತ್ಯ ಅದನ್ನು ಸಾರಿ-ಸಾರಿ ಹೇಳುತ್ತದೆ.

ಇಂತಹ ಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದ ವರಂತು ಆರ್ಟ್ ಆಫ್ ಲಿವಿಂಗ್ (ಆರ್ಟ್ ಆಫ್ ಕಿಲ್ಲಿಂಗ್)ನ ರವಿಶಂಕರ್ ಗುರೂಜಿ, ಭಾರತದಲ್ಲಿ - ಗುಜರಾತ್‌ನಲ್ಲಿ ನಡೆದ ನರಮೇಧದ ಬಗ್ಗೆ ಚಕಾರವೆತ್ತದ ಗುರೂಜಿಗೆ ಹೇಗೆ ಇದ್ದಕ್ಕಿದ್ದ ಹಾಗೆ ಹಿಟ್ಲರ್ ನರಮೇಧ ಖಂಡಿಸುವ ಚಿತ್ರಪ್ರದರ್ಶನ ಉದ್ಘಾಟಿಸುವಂತಹ ಸೈದ್ಧಾಂತಿಕ ಮತಾಂತರ ಉಂಟಾಯಿತು ಎಂಬ ಆಶ್ಚರ್ಯ ಅನೇಕರನ್ನು ಕಾಡಿತ್ತು. ಆದರೆ ಚಿತ್ರ ಪ್ರದರ್ಶನ ವೀಕ್ಷಿಸಿ, ಅದರ



ಸಂದೇಶವನ್ನು- ಅದರ ಸಂಘಟಕರನ್ನು ಸೂಕ್ಷ್ಮವಾಗಿ ಕಂಡವರಿಗೆ ಅಂತಿಮವಾಗಿ ಕಾಣುವುದು ಪ್ರಸ್ತುತ ಇಸ್ರೇಲ್ ಸರ್ಕಾರದ ಜಿಯೊನಿಸಂ ಹಾಗೂ ಅವರ ಕೊಲ್ಲುವ ಕಲೆಯ (ಆರ್ಟ್ ಆಫ್ ಕಿಲ್ಲಿಂಗ್) ಪ್ರತಿಪಾದನೆಗಾಗಿ ಏರ್ಪಾಟಾಗಿರುವುದೆಂದು ಹಾಗಾಗಿಯೇ ನಮ್ಮ ದೇಶದ ಸಂಘ ಪರಿವಾರದ ಜನಾಂಗ ದ್ವೇಷ, ಕೋಮುವಾದವನ್ನು ಪರೋಕ್ಷವಾಗಿ ಬೆಂಬಲಿಸುವ ಗುರೂಜಿ, ಇಸ್ರೇಲ್‌ನ ಜಿಯೋನಿಸಂ ಪ್ರತಿಪಾದಿಸಲು ಹಿಟ್ಲರ್‌ನ ನರಮೇಧ ತೋರುವ ಹೆಸರಿನ ಚಿತ್ರ ಪ್ರದರ್ಶನ ಉದ್ಘಾಟಿಸಿರುವುದು. ಚಿತ್ರ ಪ್ರದರ್ಶನದಲ್ಲಿ ಹಿಟ್ಲರ್‌ನ ಕ್ರೌರ್ಯ ತೋರುತ್ತಾ, ಪ್ಯಾಲಿಸ್ಟೇನಿಯರ ಮೇಲೆ ತಾವು ನಡೆಸುತ್ತಿರುವ ದೌರ್ಜನ್ಯವನ್ನು ಪರೋಕ್ಷವಾಗಿ ಪ್ರತಿಪಾದಿಸಲು ಹೊರಟಿರುವ ಇಸ್ರೇಲ್ ಸರ್ಕಾರದ ಕ್ರಮವಂತು ಬೇತಾಳದ ಬಾಯಿಯಿಂದ ಬಂದ ಶಾಂತಿಯ ಉಪದೇಶದಂತಿದೆ.

- ಕೆ.ಎನ್.ಉಮೇಶ



ಪೆಟ್ರೋಲ್, ಡಿಸೆಲ್ ಬೆಲೆ ಏರಿಕೆ ವಿರೋಧಿಸಿ
ಕೇಂದ್ರ ಕಾರ್ಮಿಕ ಸಂಘಟನೆಗಳಿಂದ 24 ನವೆಂಬರ್ 2004ರಂದು ಪ್ರತಿಭಟನೆ

ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಅಖಿಲ ಭಾರತ ನೌಕರರ ಒಕ್ಕೂಟಗಳು ದಿನಾಂಕ:9-11-2004ರಂದು ನವದೆಹಲಿಯಲ್ಲಿ ಸಭೆ ಸೇರಿದ್ದರು. ಕೇಂದ್ರ ಸರ್ಕಾರವು ಡಿಸೆಲ್, ಪೆಟ್ರೋಲ್, ಅಡುಗೆ ಅನಿಲಗಳ ಬೆಲೆಗಳನ್ನು ತೀವ್ರವಾಗಿ ಏರಿಕೆ ಮಾಡಿರುವುದನ್ನು ಕೂಡಲೇ ಹಿಂತೆಗೆದುಕೊಳ್ಳಲು ಒತ್ತಾಯಿಸಿ ದಿನಾಂಕ: 24-11-2004ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಲಾಗಿದೆ.

ಈ ಹಿನ್ನಲೆಯಲ್ಲಿ ದಿನಾಂಕ:16-11-2004ರಂದು ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಹೆಚ್‌ಎಂಕೆಪಿ, ಟಿಯುಸಿಸಿ, ಯುಟಿಯುಸಿ(ಎಲ್‌ಎಸ್), ಬ್ಯಾಂಕ್, ವಿಮಾ, ಕೇಂದ್ರ ಸರ್ಕಾರಿ, ಸಾರ್ವಜನಿಕ ಕ್ಷೇತ್ರಗಳ ಕೈಗಾರಿಕೆಗಳ ನೌಕರರ ಮುಖಂಡರು(ಜೆಎಫ್), ರಾಜ್ಯ ಸರ್ಕಾರಿ ನೌಕರರ ಸಂಘಗಳ ಮುಖಂಡರು ಸಭೆ ಸೇರಿ ದಿನಾಂಕ: 24-11-2004ರಂದು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ನಿರ್ಣಯಿಸಿವೆ. ಅಲ್ಲದೇ ಬೆಂಗಳೂರು ನಗರದಲ್ಲಿ ಅಂದು ಟೌನ್‌ಹಾಲ್ ಮುಂದೆ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 1-30ರವರೆಗೆ ಸಾವಿರಾರು ಕಾರ್ಮಿಕರು, ನೌಕರರು ಸೇರಿ ಪ್ರತಿಭಟನೆ ನಡೆಸಲಾಗುವುದು.

ಪೆಟ್ರೋಲ್, ಡಿಸೆಲ್, ಅಡುಗೆ ಅನಿಲ ಬೆಲೆ ಏರಿಕೆಯು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಒಂದು ಬ್ಯಾರಲ್ ಬೆಲೆ 56 ಡಾಲರ್‌ಗಳಿಂದ 49 ಡಾಲರ್‌ಗಳಿಗೆ ಕುಸಿದಿರುವಾಗ ಏರಿಸಿರುವುದು ಅತ್ಯಂತ ಜನವಿರೋಧಿ ಕ್ರಮವಾಗಿದೆ. ಅಲ್ಲದೇ ಪೆಟ್ರೋಲಿಯಂ ವಸ್ತುಗಳ ಬೆಲೆಗಳ ಆಡಳಿತ ನಿರ್ವಹಣೆ ವಿಧಾನ ಕೈಬಿಟ್ಟ ನಂತರ ತೈಲ ಕಂಪನಿಗಳ ಲಾಭ ಹೆಚ್ಚಾಗಿರುವಾಗ ಏರಿಸಲಾಗಿದೆ. ಐಓಸಿ 2004ರ ಲಾಭ ರೂ.7004 ಕೋಟಿ, ಹೆಚ್‌ಪಿಸಿಎಲ್ ಲಾಭ 1903 ಕೋಟಿ, ಬಿಪಿಸಿಎಲ್ ಲಾಭ ರೂ.1694 ಕೋಟಿಗಳಾಗಿದೆ. ಬೆಲೆಗಳ ಆಡಳಿತ ನಿರ್ವಹಣೆ ವಿಧಾನವನ್ನು ಕೈಬಿಡುವಾಗ ಕೇಂದ್ರ ಸರ್ಕಾರವು ಸಬ್ಸಿಡಿ ಪಡೆಯುವ ತೈಲ ಉತ್ಪನ್ನಗಳಿಗೆ ತೆರಿಗೆಯನ್ನು ಪೂರ್ಣ ತೆಗೆಯುವುದಾಗಿ ಹಾಗೂ ಇತರ ಉತ್ಪನ್ನಗಳಿಗೆ ಶೇ.5ರವರೆಗೆ ಮಾತ್ರ ಹಾಕುವುದಾಗಿ ಭರವಸೆ ನೀಡಿದ್ದನ್ನು ಕೇಂದ್ರ ಸರ್ಕಾರ ಮರೆತೇ ಬಿಟ್ಟಿದೆ.

ಆದ್ದರಿಂದ ಸರ್ಕಾರ ಆಮದು ಸುಂಕದ ಕಡಿತ ಹಾಗೂ ಅಬಕಾರಿ ಸುಂಕಗಳ ಹೊಂದಾಣಿಕೆಗಳಿಂದ ಮತ್ತು ಸಾರ್ವಜನಿಕ ಕ್ಷೇತ್ರದ ಕಂಪನಿಗಳ ಹಾಗೂ ಖಾಸಗಿ ಕಂಪನಿಗಳ ಲಾಭಾಂಶದಲ್ಲಿ ಹೊಂದಾಣಿಕೆ ಮಾಡಿ ಬೆಲೆ ಏರಿಕೆಗಳನ್ನು ನಿಯಂತ್ರಿಸಬೇಕು. ಅಷ್ಟೇ ಅಲ್ಲದೇ ದೊಡ್ಡ ಗಾತ್ರದ ಖರೀದಿಗೆ ಇತರ ರಾಷ್ಟ್ರಗಳಿಗೆ ದೊರೆಯುವ ಅಂತರ್ರಾಷ್ಟ್ರೀಯ ರಿಯಾಯಿತಿಯ ಶೇ.10 ಕಡಿಮೆ ಬೆಲೆಯ ಪ್ರಯೋಜನವನ್ನು ಭಾರತೀಯ ಬಳಕೆದಾರರಿಗೆ ವರ್ಗಾಯಿಸುವ ಮೂಲಕವೂ ಬೆಲೆ ನಿಯಂತ್ರಣ ಸುಲಭ ಸಾಧ್ಯ.

ಅಡಿಗೆ ಅನಿಲದ ಬೆಲೆಯನ್ನು ರೂ.20/- ಏರಿಸಿದ್ದಲ್ಲದೇ, ಪ್ರತಿ ತಿಂಗಳು ರೂ.5 ಏರಿಸುವ ಕ್ರಮವು ಗಾಯದ ಮೇಲೆ ಬರೆ ಎಳೆದಂತಾಗುತ್ತದೆ.

ಕಳೆದ 4, 5 ದಿನಗಳ ಹಿಂದೆ ಕಡಿಮೆ ಮಾಡಿದ ಪೆಟ್ರೋಲ್ ಬೆಲೆಯು ಅಂತರ್ರಾಷ್ಟ್ರೀಯ ತೈಲ ಬೆಲೆಗಳು 49 ಡಾಲರ್‌ಗಳಿಗಿಂತ ಇನ್ನು 2 ಡಾಲರ್‌ನಷ್ಟು ಕಡಿಮೆ ಆಗಿರುವ ಪರಿಣಾಮದಿಂದಲೇ ಹೊರತು ಮೊದಲೇರಿಸಿದ ಬೆಲೆಗಳ ಇಳಿಕೆ ಅಲ್ಲ. ಡಿಸೆಲ್ ಬೆಲೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮತ್ತಷ್ಟು ಇಳಿಕೆ ಆಗಿರುವಾಗ ಈ ಬೆಲೆ ಏರಿಕೆಯು ದೇಶದ ಹಣದುಬ್ಬರವನ್ನು ತೀವ್ರಗೊಳಿಸುತ್ತದೆ ಮತ್ತು ಜೀವನಾವಶ್ಯಕ ವಸ್ತುಗಳಾದ, ತರಕಾರಿ, ಹಾಲು, ದವಸ ಧಾನ್ಯ ಮೊದಲಾದ ವಸ್ತುಗಳ ಬೆಲೆಗಳ ಏರಿಕೆಯಾಗಿ ಕಾರ್ಮಿಕರು, ಜನಸಾಮಾನ್ಯರು ಸಂಕಷ್ಟಕ್ಕೆ ಒಳಪಡುವಂತಾಗುತ್ತದೆ. ಆದ್ದರಿಂದ ಏರಿಸಿದ ಬೆಲೆಗಳನ್ನು ಸಂಪೂರ್ಣ ಹಿಂತೆಗೆದುಕೊಳ್ಳಲು ಒತ್ತಾಯಿಸುತ್ತವೆ. **24-11-2004ರ ಪ್ರತಿಭಟನೆಯಲ್ಲಿ ಸಾವಿರಾರು ಕಾರ್ಮಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿದೆ.**

ಇತಿಹಾಸ ಖಾತೆ

ಗೊತ್ತೇನು ಇತಿಹಾಸ ತಿರುಚಲಿಕೆ ಎಂದೆ
ಸರ್ಕಾರ ಹೊಸಖಾತೆ ತೆರೆದಿತ್ತು ಹಿಂದೆ
ಹೊಸದಾದ ಸರಕಾರ ಬಂದಿಹುದು ಇಂದೆ
ಈ ಖಾತೆ ಮಂತ್ರಿಗಳುಯಾರಂತೆ ಮುಂದೆ?

ದತ್ತಜಯಂತಿ

ಮತ್ತೆ ಬಂತೊ ಮಹರಾಯ ದತ್ತಜಯಂತಿ
ಕಡಿಯಲಿಕೆ ಹೊರಟಿಹರು ಏಕತೆಯ ತಂತಿ
ಈ ಮೂರ್ಖ ಬಡಮುಗ್ಧ ಮಂದಿಗಳ ಎತ್ತಿ
ಕಟ್ಟುವರು ಸ್ವಾರ್ಥಕ್ಕೆ ಮೌಢ್ಯಗಳ ಬಿತ್ತಿ

ಏ ವಿಘ್ನ ರಾಜ...

ಹಬ್ಬಗಳು ಉತ್ಸವವೂ ಬಂದಾಗ ನಾವು
ಕಾಣುವುದು ಏನನ್ನು ಬರೆಸಾವು ನೋವು
ವಿಘ್ನರಾಜ ಎಂಬವನ ಮೆರವಣಿಗೆಯಲ್ಲೇ
ಆಗುತಿವೆ ಈ ಹೊತ್ತು ಕೊಲೆಸುಲಿಗೆ ಹಲ್ಲೆ

ನಾಡುಗಳ್ಳ ಕಾಡುಗಳ್ಳ

ವೀರಪ್ಪನ್ ಎಂಬವನ ಜೀವಂತ ಹಿಡಿದು
ತರುವುದಕೆ ಹೆಣಗಿಲ್ಲ ಕೆಡವಿದರು ಹೊಡೆದು
ಕಾರಣವು ಗೊತ್ತೇನು ಈ ಊರು ಕಳ್ಳ
ಮಂದಿಗಳ ಇತಿಹಾಸ ವೀರಪ್ಪನ್ ಬಲ್ಲ

ಅಪಾಯಕಾರಿ

ವೀರಪ್ಪನ್ ಎಂಬವನ ಒಬ್ಬನನು ಕೊಂದು
ಹಾಕಿದರೆ ಮುಗಿದಿಲ್ಲ ಕೇಳಿರೈ ಮುಂದು
ಆತನನು ಬೆಳೆಸಿರುವ ನಮ್ಮೂರು ಕೇರಿ
ಕಳ್ಳಜನ ಇದಕಿಂತ ಅಪಾಯಕಾರಿ

- ವಿಡಂಬಾ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(M...